Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 । ಸಂಚಿಕೆ–45 । ನವೆಂಬರ್ 6–12, 2023 । ಪುಟ 16 । ರೂ. 10/–
Volume-17 | Issue-45 | November 6-12, 2023 | Pages:16 | Price: 10/-

70 ಗಂಟೆಗಳ ದುಡಿಮೆ:



ಯೌವ್ವನಿಗರ ಬೆವರು ಬಯಸಿದೆ ಕಾರ್ಪೊರೇಟ್ ದುಡ್ಡಿನ ದಾಹ!



ಕುರ್ಚಿ ಕಿತ್ತಾಟಕ್ಕಿಳಿದಿರುವ ಕಾಂಗ್ರೆಸ್

- ಗಡಿಗಳು ಗೋಡೆಗಳಲ್ಲ
- ಗಾಝಾದಲ್ಲಿ ನಿಲ್ಲದ ನರಮೇಧ

ಭಾಷೆಗಳ ರಾಷ್ಟ್ರೀಯತೆಯನ್ನು ಪ್ರಾದೇಶಿಕತೆ ಎಂದು ಹೀಗಳೆದ ಮೋದಿ

ಮಹಿಳೆ– ನಿಂದನೆಯ ಪದಗಳನ್ನು ಬಿಸಾಡಿ

–ಪಾ. ಹೇಮಾವತಿ

ಲಿಂಗ ಸಮಾನತೆಯ ಕಡೆಗೆ ತಳ್ಳುವಂತೆ ಸುಪ್ರೀಂ ಕೋರ್ಟ್ ನೀಡಿದ ಕೈಪಿಡಿಯು ಪ್ರಸ್ತುತ ನ್ಯಾಯಾಲಯದ ತೀರ್ಪುಗಳು, ಪ್ರಕರಣಗಳು ಮತ್ತು ವಾದಗಳ ಸಮಯದಲ್ಲಿ ಮಹಿಳೆಯರನ್ನು ಉಲ್ಲೇಖಿಸಲು ಬಳಸುವ ಎಲ್ಲಾ ಪದಗಳನ್ನು ತೆಗೆದುಹಾಕುತ್ತದೆ. ನ್ಯಾಯಾಧೀಶರು ಎಲ್ಲಾ ರೀತಿಯ ಲಿಂಗ ಪಕ್ಷಪಾತದ ವಿರುದ್ಧ ಜಾಗರೂಕರಾಗಿರಬೇಕು. ಪ್ರತಿಯೊಬ್ಬ ವ್ಯಕ್ತಿಯನ್ನು ಅವರ ಲಿಂಗದ ಗುರುತನ್ನು ಲೆಕ್ಕಿಸದೆ, ಕಾನೂನಿನ ಮುಂದೆ ಸಮಾನವಾಗಿ ಮತ್ತು ಘನತೆಯಿಂದ ಪರಿಗಣಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳುವಂತೆಯೂ ಅದು ಒತ್ತಾಯಿಸುತ್ತದೆ. ಇದು ಖಂಡಿತವಾಗಿಯೂ ಸಂಚಲನವನ್ನು ಸೃಷ್ಟಿಸುತ್ತದೆ. ಇನ್ನು ಮುಂದಾದರೂ, ಮಹಿಳೆಯರ ಬಗ್ಗೆ ಅವಹೇಳನಕಾರಿ ಮಾತುಗಳನ್ನು ತೆಗೆದು ಬಿಸಾಡಲಿ. ಹೆಣ್ಣೆಂದರೆ ಹೆಣ್ಣೇ ತಾನೇ.

ಎಷ್ಟು ಅವಮಾನಕರ ಪದಗಳು

ವಕೀಲರ ವಾದಗಳಷ್ಟೇ ಅಲ್ಲ; ನ್ಯಾಯಾಂಗದ ದಾಖಲೆಗಳ ತೀರ್ಪುಗಳಲ್ಲಿಯೂ ಸಹ, ಇಂದಿನವರೆಗೂ ಮಹಿಳೆಯರನ್ನು 'ವೇಶ್ಯೆ', 'ನಡತೆ ಸರಿಯಿಲ್ಲದವಳು', 'ನಡತೆ ಕೆಟ್ಟವಳು', 'ಪರಿಶುದ್ಧ ಹೆಣ್ಣು(A chaste woman)', 'ಮೋಡಿ ಮಾಡುವವಳು', 'ಅಪ್ರಿಯವಾದ ಮಹಿಳೆ (Unpleasant woman)', 'ವ್ಯಭಿಚಾರಿಣಿ', "ಸಡಿಲ ನೈತಿಕತೆಯ ಮಹಿಳೆ", 'ಉಪಪತ್ನಿ', 'ಶೋಕಿ ಮಹಿಳೆ', 'ಅಲಂಕಾರಿಕ', ಇಂತಹ ಅವಹೇಳನಕಾರಿ ಪದಗಳನ್ನು ಹಲವು ವರ್ಷಗಳಿಂದ ನ್ಯಾಯಾಂಗವು ಬಳಸುತ್ತಿದೆ. ಸುಪ್ರೀಂ ಕೋರ್ಟ್ ನ ಕೈಪಿಡಿಯು ಅಂತಹ ಎಲ್ಲಾ ಪದಗಳನ್ನು ತೆಗೆದುಹಾಕುತ್ತದೆ. ಪ್ರಕರಣದ ಸ್ವರೂಪ ಮತ್ತು ಅಪರಾಧದ ಸ್ವರೂಪವನ್ನು ಲೆಕ್ಕಿಸದೆ, 'ಮಹಿಳೆ' ಎಂಬ ಪದವನ್ನು ಮಾತ್ರ ಬಳಸಬೇಕು ಎಂದು ಕೈಪಿಡಿಯಲ್ಲಿ ಹೇಳಲಾಗಿದೆ. ಅಲ್ಲದೆ, 'ಲೈಂಗಿಕತೆಯಲ್ಲಿ ತೊಡಗಿಕೊಂಡವಳು' ಎಂಬ ಪದಕ್ಕೆ ಪರ್ಯಾಯವಾಗಿ, 'ವಿವಾಹೇತರ ಸಂಬಂಧ' ಎಂದು ಬದಲಿಸಿದೆ. ಇದಲ್ಲದೆ, ನಿಷ್ಠೆಯುಳ್ಳ ಪತ್ನಿ, ವಿಧೇಯ ಪತ್ನಿ, ಒಳ್ಳೆಯ ಹೆಂಡತಿ ಎನ್ನುವುದಕ್ಕೆ ಬದಲಾಗಿ 'ಹೆಂಡತಿ' ಎಂದು ಬದಲಾಯಿಸಲಾಗಿದೆ. 'ವೇಶ್ಯೆ' ಎಂಬ ಪದವನ್ನು 'ಲೈಂಗಿಕ ಕಾರ್ಯಕರ್ತೆ', ಮದುವೆಯ ಹೊರತಾಗಿ ಹುಟ್ಟಿದ ಮಗುವನ್ನು 'ಅವಿವಾಹಿತ ತಂದೆತಾಯಿಗಳಿಂದ ಹುಟ್ಟಿದ ಮಗು', ಮಕ್ಕಳ ವೇಶ್ಯಾವಾಟಿಕೆಯನ್ನು 'ಲೈಂಗಿಕ ಉದ್ಯಮಕ್ಕೆ ಕಳ್ಳಸಾಗಣೆಗೆ ಒಳಗಾದ ಮಗು' ಎಂದು ವ್ಯಾಖ್ಯಾನಿಸಲಾಗಿದೆ. ತೃತೀಯಲಿಂಗಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು 'ಟ್ರಾನ್ಸ್‌ಜೆಂಡರ್' ನಂತಹ ಗೌರವಾನ್ವಿತ ಪದಗಳನ್ನು ಮಾತ್ರ ಬಳಸಬೇಕು ಎಂದು ಕೈಪಿಡಿಯಲ್ಲಿ ಹೇಳಲಾಗಿದೆ.

ಪಿತೃಪ್ರಧಾನ ಗುಣಲಕ್ಷಣಗಳು

'ಮಹಿಳೆಯರು ಹೆಚ್ಚು ಭಾವನಾತ್ಮಕತೆ ಹೊಂದಿರುವವರು, ನಿರ್ಧಾರಗಳನ್ನು ತೆಗೆದುಕೊಳ್ಳುವುದನ್ನು ತಿಳಿಯದವರು, 'ಮನೆಕೆಲಸದ ಹೊರಗೆ ದುಡಿಯಲು ಹೋಗುವ ಹೆಂಗಸರು ಕುಟುಂಬದ ಸದಸ್ಯರಿಗೆ ಕೊಡುಗೆ ನೀಡುವುದಿಲ್ಲ', ಮಹಿಳೆಯರು ಮಕ್ಕಳು ಮತ್ತು ವಯಸ್ಸಾದವರನ್ನು ಮಹಿಳೆಯರು ಕಾಳಜಿ ವಹಿಸಬೇಕು ಎಂಬ ಸಾಮಾನ್ಯ ಗುಣಲಕ್ಷಣಗಳು ನ್ಯಾಯಾಲಯದ ವಾದಗಳು ಮತ್ತು ತೀರ್ಪುಗಳಲ್ಲಿ ಕಾಣಿಸಿಕೊಳ್ಳುತ್ತವೆ ಎಂದು ಸೂಚಿಸುತ್ತಾ, "ಅಂತಹ ಕೆಲಸವು ಎಲ್ಲಾ ಲಿಂಗಗಳ ಜನರು ಸಮಾನವಾಗಿ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಮಹಿಳೆಯರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂದು ಪುರುಷರು ಹೆಚ್ಚಾಗಿ ಷರತ್ತು ಹಾಕುತ್ತಾರೆ" ಎಂದು ಕೈಪಿಡಿ ವಿವರಿಸುತ್ತದೆ.

ವೇತನವಿಲ್ಲದ ದುಡಿಮೆಯ ಬೆಲೆ ಎಷ್ಟು?

ಏತನ್ಮಧ್ಯೆ, ಮಹಿಳೆಯರು ಪುರುಷರಿಗಿಂತ ಕಡಿಮೆ ಕೆಲಸ ಮಾಡುತ್ತಾರೆ ಎಂದು ನಂಬಲಾಗಿದೆ. ಇದಕ್ಕೆ ಬದಲಾಗಿ ವಿವಿಧ ರೀತಿಯ ಅವರ ಕೊಡುಗೆ ಪ್ರತಿಕ್ರಿಯೆಯಾಗಿ, "ಮಹಿಳೆಯರ ಸಂಬಳವಿಲ್ಲದ ಕೆಲಸವು ಕುಟುಂಬದ ಜೀವನದ ಗುಣಮಟ್ಟಕ್ಕೆ ಕೊಡುಗೆ ನೀಡುವುದಲ್ಲದೆ, ಹಣದ ಉಳಿತಾಯಕ್ಕೂ



ಕಾರಣವಾಗುತ್ತದೆ. ಅವರ ಕೊಡುಗೆಗಳನ್ನು ಸಾಮಾನ್ಯವಾಗಿ ಕಡೆಗಣಿಸಲಾಗುತ್ತದೆ, ಏಕೆಂದರೆ ಅಂತಹ ಕೆಲಸವನ್ನು, ಕಡಿಮೆ ಮೌಲ್ಯದ್ದು ಎಂದು ಪುರುಷರು ನಂಬುತ್ತಾರೆ" ಎಂದು ಕೈಪಿಡಿ ಹೇಳುತ್ತದೆ. ಮಹಿಳೆ ಮದ್ಯಪಾನ ಅಥವಾ ಧೂಮಪಾನದಿಂದ ಮನರಂಜನೆಗಾಗಿ ತನ್ನನ್ನು ಸ್ಪರ್ಶಿಸಲು ಅವಕಾಶ ಮಾಡಿಕೊಟ್ಟಳು ಎಂಬ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ, ಒಂದು ಹೆಣ್ಣು, ಇಲ್ಲ ಎಂದು ಹೇಳಿದರೆ, ಇಲ್ಲ ಎಂದೇ ಅರ್ಥ ಎಂದು ಸೂಚಿಸುತ್ತದೆ.

ಅತಿ ಹೆಚ್ಚು ದೌರ್ಜನ್ಯಕ್ಕೆ ಗುರಿಯಾಗುವ ಲೈಂಗಿಕ ಕಾರ್ಯಕರ್ತೆಯರು

ಮಹಿಳಾ ಲೈಂಗಿಕ ಕಾರ್ಯಕರ್ತೆಯ ಮೇಲಿನ ಅತ್ಯಾಚಾರ ಅಪರಾಧವಲ್ಲ ಎಂದು ಪರಿಗಣಿಸಲಾಗುತ್ತದೆ. ಲೈಂಗಿಕ ಕಾರ್ಯಕರ್ತೆಯರು ತಮ್ಮ ವೃತ್ತಿಯ ಕಾರಣದಿಂದ ಎಲ್ಲಾ ಪುರುಷರೊಂದಿಗೆ ಲೈಂಗಿಕ ಸಂಭೋಗಕ್ಕೆ ಸಮ್ಮತಿಸುವುದಿಲ್ಲ. ಅನೈಚ್ಛಿಕ ಅತ್ಯಾಚಾರವು ಲೈಂಗಿಕ ಹಿಂಸೆಯ ಅಪರಾಧವಾಗಿದೆ. ಲೈಂಗಿಕ ಕಾರ್ಯಕರ್ತೆಯರು ಲೈಂಗಿಕ ದೌರ್ಜನ್ಯಕ್ಕೆ ಹೆಚ್ಚು ಗುರಿಯಾಗುತ್ತಾರೆ ಎಂದು ವಿವರಿಸುತ್ತಾರೆ.

ಮಹಿಳೆಯರು ಹೇಳುವುದು ಸುಳ್ಳೇ?

"ಮಹಿಳೆಯರು ಲೈಂಗಿಕ ಕಿರುಕುಳವನ್ನು ಹೇಳಿಕೊಳ್ಳುವುದು ತುಂಬಾ ಕಷ್ಟ. ಅಪರಾಧಿಯು ಕುಟುಂಬದ ಸದಸ್ಯರಾಗಿರಬಹುದು, ಮಾಜಿ ಪ್ರೇಮಿಯಾಗಿರಬಹುದು ಅಥವಾ ಮಹಿಳೆಯರ ಮೇಲೆ ಅಧಿಕಾರವನ್ನು ಚಲಾಯಿಸುವ ವ್ಯಕ್ತಿಯಾಗಿರಬಹುದು. ಹೀಗಾಗಿ, ಬದುಕುಳಿದಿರುವ ಮಹಿಳೆ ಬಲಿಪಶುವಾಗಿ ಮತ್ತು ನ್ಯಾಯವನ್ನು ಪಡೆಯುವುದೇ ಒಂದು ಸವಾಲು. ಪುರುಷರ (ಪೊಲೀಸ್ ಅಧಿಕಾರಿಗಳು, ವಕೀಲರು ಮತ್ತು ನ್ಯಾಯಾಧೀಶರು ಸೇರಿದಂತೆ) ಸಮ್ಮುಖದಲ್ಲಿ ಲೈಂಗಿಕ ದೌರ್ಜನ್ಯವನ್ನು ವರದಿ ಮಾಡಲು ಮಹಿಳೆಯರು ಹಿಂಜರಿಯುವುದು ದುರುಪಯೋಗದ ಸಕಾರಾತ್ಮಕ ಅಂಶಗಳಾಗಿವೆ.

ಇದನ್ನು ಬಳಸಿಕೊಂಡು 'ಮಹಿಳೆಯರು ಸುಳ್ಳು ಆರೋಪ ಮಾಡುತ್ತಾರೆ' ಎಂಬ ವಾದ ತಪ್ಪು; "ಪ್ರತಿಯೊಂದು ಪ್ರಕರಣವನ್ನು ಅದರ ಅರ್ಹತೆಯ ಮೇಲೆ ನಿರ್ಧರಿಸಬೇಕು ಮತ್ತು ನ್ಯಾಯಾಲಯಗಳು ಮಹಿಳೆಯರ ಪ್ರಾಮಾಣಿಕತೆಯ ಬಗ್ಗೆ ಊಹೆಗಳನ್ನು ಮಾಡಬಾರದು" ಎಂದು ಕೈಪಿಡಿ ಸಲಹೆ ನೀಡುತ್ತದೆ.

ನ್ಯಾಯದ ಜ್ಯೋತಿಯೇ? ಕಟ್ಟೆ ಪಂಚಾಯತಿಯೇ?

ಭಾರತೀಯ ನ್ಯಾಯಾಲಯಗಳು ನ್ಯಾಯದ ದಾರಿದೀಪವಾಗಬೇಕು ಮತ್ತು ಮಾನವ ಹಕ್ಕುಗಳ ಅನುಷ್ಠಾನಕ್ಕೆ ಪ್ರೇರಕ ಶಕ್ತಿಯಾಗಬೇಕು. ಆದರೆ ಜಿಲ್ಲಾ ಮತ್ತು ಉಚ್ಚ ನ್ಯಾಯಾಲಯದ ಹಂತಗಳಲ್ಲಿ ಮಹಿಳಾ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನ್ಯಾಯ ವಿತರಣೆಯಲ್ಲಿ ಸಾಕಷ್ಟು ಅಂತರವಿದೆ. ಸಾಮಾನ್ಯವಾಗಿ ಲೈಂಗಿಕ ಅಪರಾಧಗಳಲ್ಲಿ, ಕಾನೂನು ಸಂಗತಿಗಳಿಗಿಂತ ಹೆಚ್ಚಾಗಿ, ಸಂತ್ರಸ್ತ ಮಹಿಳೆಯರ ನಡವಳಿಕೆಯ ಮೇಲೆ ನ್ಯಾಯಾಲಯಗಳು ಗಮನಹರಿಸುವುದನ್ನು ಕಾಣಬಹುದು. ಪಂಜಾಬ್ ರಾಜ್ಯದಲ್ಲಿ ಗುರ್ಮೀತ್ ಸಿಂಗ್ ಪ್ರಕರಣದಲ್ಲಿ, "ಪುರುಷರ ಅತ್ಯಾಚಾರದ ಕುರಿತು ಮಹಿಳೆಯರು ಸುಳ್ಳು ಹೇಳುತ್ತಾರೆ" ಎಂದು ಹೈಕೋರ್ಟ್ ಹೇಳಿದೆ. ಅಪರ್ಣಾ ಭಟ್ ಅತ್ಯಾಚಾರ ಪ್ರಕರಣದಲ್ಲಿ, "ಮಹಿಳೆಯರು ಅಸಭ್ಯವಾಗಿ ನಡೆದುಕೊಂಡಿದ್ದರಿಂದ, 'ಭಾರತೀಯ' ಮಹಿಳೆಗೆ ತಕ್ಕುದಲ್ಲದ ರೀತಿಯಲ್ಲಿ ಬಟ್ಟೆ ಧರಿಸಿದ್ದರಿಂದ ಪ್ರಚೋದನೆಯಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾದರು" ಎಂದು ಹೇಳಲಾಗಿದೆ.

ಮಥುರಾ ಪ್ರಕರಣದಲ್ಲಿನ ಬಲಿಪಶು ಅಪ್ರಾಪ್ತ ಬಾಲಕಿ ತನ್ನ ಸ್ವಂತ ಇಚ್ಛೆಯಿಂದ ಆರೋಪಿಯೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದಾಳೆ ಮತ್ತು "ಲೈಂಗಿಕ ಸಂಬಂಧವು ಒಂದು ಅಭ್ಯಾಸವಾಗಿದೆ" ಎಂದು ಹೇಳಿದ್ದಾರೆ. ಬಿಹಾರದ ನ್ಯಾಯಾಲಯದಲ್ಲಿ "ಒಳ್ಳೆಯ ಮಹಿಳೆಯರು ಅತ್ಯಾಚಾರಕ್ಕಿಂತ ಸಾವನ್ನು ಬಯಸುತ್ತಾರೆ" ಎಂದು ಹೇಳಿದೆ. ತರುಣ್ ತೇಜ್‌ಪಾಲ್ ಪ್ರಕರಣದಲ್ಲಿ (2019), ಸಂತ್ರಸ್ಥೆಯ ಫೋಟೋಗಳು ನೋಡಲು "ಖುಷಿಯಿಂದ" ಇರುವಂತಿದೆ ಎಂದು ಗೋವಾ ಪೀಠವು ಹೇಳಿದೆ. ಕರ್ನಾಟಕ ನ್ಯಾಯಾಲಯವು ಪ್ರಕರಣವೊಂದರಲ್ಲಿ ಆರೋಪಿಗಳಿಗೆ ಜಾಮೀನು ನೀಡಿದಾಗ, "ಅತ್ಯಾಚಾರದ ನಂತರ ಮಲಗುವುದು ಭಾರತೀಯ ಮಹಿಳೆಗೆ ತಕ್ಕುದಲ್ಲ." ಎಂದು ಅದು ಹೇಳಿದೆ. ಅದೇ ರೀತಿ, ಸುಪ್ರೀಂ ಕೋರ್ಟ್‌ನ ಕೈಪಿಡಿಯು ವಿವಿಧ ಸಮಯಗಳಲ್ಲಿ, ಮತ್ತು ವಿವಿಧ ಸಂದರ್ಭಗಳಲ್ಲಿ, ಭಾರತದ ನ್ಯಾಯಾಲಯಗಳು ಮಹಿಳೆಯರನ್ನು ಅವಹೇಳನಕಾರಿ ರೀತಿಯಲ್ಲಿ ಚಿತ್ರಿಸಲಾಗಿದೆ ಎಂಬುದನ್ನು ವಿಷಾದನೀಯವಾಗಿ ದಾಖಲಿಸಿದೆ. ಇದಕ್ಕೆ ಪರಿಹಾರವೆಂದರೆ ಬಲಿಪಶು ಮಹಿಳೆಯನ್ನು ಮದುವೆಯಾದರೆ ಲೈಂಗಿಕ ಅಪರಾಧದಿಂದ ತಪ್ಪಿಸಿಕೊಳ್ಳಬಹುದು. ಮದುವೆಯಾಗುವುದಾಗಿ ಹೇಳಿ ಮಹಿಳೆಯನ್ನು ವಂಚಿಸಿದ ವ್ಯಕ್ತಿಯ ವಾದವನ್ನು ಆಲಿಸಿ, ಮಂಗಳದೋಷವಿದೆಯೇ ಎಂದು ನೋಡಲು ಹೇಳುವುದು, ಬಟ್ಟೆಗಳನ್ನು ತೆಗೆಯದೆ ಸ್ತನಗಳನ್ನು ಹಿಡಿದುಕೊಳ್ಳುವುದು ಅಥವಾ ಸ್ಪರ್ಶಿಸುವಂತಹ ಹಲವಾರು ತೀರ್ಪುಗಳು ಲೈಂಗಿಕ ಕಿರುಕುಳಕ್ಕೆ ಸಮನಾಗಿರುವುದಿಲ್ಲ, ಎಂಬ ಹಲವಾರು ತೀರ್ಪುಗಳನ್ನು ಈ ಕೈಪಿಡಿ ಉಲ್ಲೇಖಿಸಿದೆ.

ನ್ಯಾಯಾಧೀಶರ ಹೊಣೆಗಾರಿಕೆ

ಸುಪ್ರೀಂ ಕೋರ್ಟಿನ ಈ ಕೈಪಿಡಿಯು ನ್ಯಾಯಾಧೀಶರು ಮತ್ತು ದಾವೆದಾರರಿಗೆ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಲು ಉದ್ದೇಶಿಸಲಾಗಿದೆ. ಏಕೆಂದರೆ ನ್ಯಾಯಾಧೀಶರು ಬಳಸುವ ಭಾಷೆ, ಕಾನೂನಿನ ಅವರ ವ್ಯಾಖ್ಯಾನವನ್ನು ಮಾತ್ರವಲ್ಲದೆ, ಅವರ ಸಮಾಜದ ಪ್ರಜ್ಞೆಯನ್ನು ಪ್ರತಿಬಿಂಬಿಸುತ್ತದೆ. ನ್ಯಾಯಾಧೀಶರು ಎಲ್ಲಾ ರೀತಿಯ ಲಿಂಗ ಪಕ್ಷಪಾತದ ವಿರುದ್ಧ ಜಾಗರೂಕರಾಗಿರಬೇಕು. ಪ್ರತಿಯೊಬ್ಬ ವ್ಯಕ್ತಿಯನ್ನು ಅವರ ಲಿಂಗ ಗುರುತನ್ನು ಲೆಕ್ಕಿಸದೆ, ಕಾನೂನಿನ ಮುಂದೆ ಸಮಾನವಾಗಿ ಮತ್ತು ಘನತೆಯಿಂದ ಪರಿಗಣಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳುವಂತೆಯೂ ಅದು ಒತ್ತಾಯಿಸುತ್ತದೆ. ಇದು ಖಂಡಿತವಾಗಿಯೂ ಸಂಚಲನವನ್ನು ಸೃಷ್ಟಿಸುತ್ತದೆ. ಇನ್ನು ಮುಂದಾದರೂ, ಮಹಿಳೆಯರ ಬಗ್ಗೆ ಅವಹೇಳನಕಾರಿ ಮಾತುಗಳನ್ನು ಬಿಡಲಿ. ಹೆಣ್ಣು ಎಂದರೆ ಹೆಣ್ಣೇ ತಾನೇ.

ಲೇಖಕಿ: ಮದ್ರಾಸ್ ಹೈಕೋರ್ಟ್ ವಕೀಲರು

ಸಂಪಾದಕೀಯ

ಎಡವುತ್ತಿರುವ ಸರ್ಕಾರ

ಪ್ಯಾಲೆಸ್ತೀನ್ ಜನತೆಯ ಮೇಲೆ ಅಮಾನುಷವಾದ ಯುದ್ಧವನ್ನು ಸಾರಿರುವ ಇಸ್ರೇಲ್ ಯುದ್ಧವನ್ನು ಪ್ರತಿಭಟಿಸಿ 'ಯುದ್ಧ ಕೊನೆಗೊಳ್ಳಲಿ ಶಾಂತಿ ನೆಲೆಸಲಿ' ಎಂದು ಬೆಂಗಳೂರು, ತುಮಕೂರು, ವಿಜಯಪುರ, ಮುಂತಾದೆಡೆ ಶಾಂತಿಯುತವಾಗಿ ಪ್ರತಿಭಟನೆ ಮಾಡಿದವರನ್ನೇ ಬಂಧಿಸಿ ಅವರ ಮೇಲೆ ಮೊಕದ್ದಮೆಗಳನ್ನು ದಾಖಲಿಸಿರುವ ಕರ್ನಾಟಕ ಸರ್ಕಾರದ ನಡೆ ಅತ್ಯಂತ ಖಂಡನೀಯ. ಹೊಸಪೇಟೆಯಲ್ಲಿ ಪ್ಯಾಲೆಸ್ತೀನ್ ಜನತೆಗೆ ಬೆಂಬಲಿಸಿ ಫೇಸ್ಬುಕ್ ನಲ್ಲಿ ಪೋಸ್ಟ್ ಹಾಕಿದ ಎಂಬ ಕಾರಣಕ್ಕೆ ಮೊಕದ್ದಮೆ ಹೂಡಿ ಯುವಕನನ್ನು ಬಂಧಿಸಿ ಜೈಲಿಗಟ್ಟಿದ ಪ್ರವೃತ್ತಿ ಮುಂದುವರಿದಿದೆ.

ಜಿಯೋನಿಸ್ಟ್–ಜನಾಂಗೀಯ ದ್ವೇಷದ ಇಸ್ರೇಲ್ ಗೆ ಬೆಂಬಲಿಸಿರುವ ಬಿಜೆಪಿಯ ಮೋದಿ ಸರ್ಕಾರದ ನೀತಿಯನ್ನೇ ಕಾಂಗ್ರೆಸ್ ರಾಜ್ಯ ಸರಕಾರ ಅನುಸರಿಸುತ್ತಿದೆ. 'ಯುದ್ಧ ಬೇಡ ಶಾಂತಿ ಬೇಕು' ಎನ್ನುವ ಅಗ್ರಹದ ಪ್ರತಿಭಟನಾ ಕಾರ್ಯಕ್ರಮಗಳನ್ನು ನಡೆಸಿದಂತೆ ನಿರ್ಬಂಧ ಹೇರುತ್ತಿದೆ. ಇದು ಅಂತರಾಷ್ಟ್ರೀಯ ಪ್ರಶ್ನೆ ಆಗಿರುವುದರಿಂದ ಭಾರತ ಸರ್ಕಾರದ ನೀತಿಯನ್ನೇ ಅನುಸರಿಸಬೇಕು ಎನ್ನುವ ಬಾಲಿಶಃ ಹೇಳಿಕೆಯ ಮೂಲಕ ಕಾಂಗ್ರೆಸ್ ತನ್ನ ಸೈದ್ಧಾಂತಿಕ ದಿವಾಳಿತನವನ್ನು, ದಶಕಗಳ ಕಾಲ ದೇಶ ಪಾಲಿಸಿದ ನೀತಿಗೆ, ರಾಜಕೀಯ ಬದ್ಧತೆಗೆ ತಿಲಾಂಜಲಿ ನೀಡಿದೆ. 'ನ್ಯಾಯವಿಲ್ಲದೆ ಶಾಂತಿ ಸಾಧ್ಯವಿಲ್ಲ, ಶಾಂತಿಯ ಪರ ಧ್ವನಿ ಮೊಳಗಬೇಕು' ಎನ್ನುವ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಯವರ ಹೇಳಿಕೆಗೆ ಕರ್ನಾಟಕ ಸರ್ಕಾರದ ನಡೆ ಮಸಿ ಬಳಿದಂತಿದೆ. ಇದೇ ಸರ್ಕಾರ ಇಸ್ರೇಲ್ ಯುದ್ಧವನ್ನು ಬೆಂಬಲಿಸಿ ಪ್ರತಿಭಟನೆ ನಡೆಸಿದವರ ಮೇಲೆ ಯಾವ ಕ್ರಮಗಳನ್ನು ಕೈಗೊಂಡಿಲ್ಲ ಎನ್ನುವುದನ್ನೂ ಗಮನಿಸಬೇಕಿದೆ.

ಹಮಾಸ್ ನಡೆಸಿದ ದಾಳಿಯನ್ನು ಯುದ್ಧ ವಿರೋಧಿಸುವ ಯಾರೂ ಬೆಂಬಲಿಸುತ್ತಿಲ್ಲ. ಧಾಳಿಯನ್ನು ತೀವ್ರವಾಗಿ ಖಂಡಿಸಲಾಗಿದೆ. ಆದರೆ ಆ ಧಾಳಿಯನ್ನೇ ನೆಪವಾಗಿರಿಸಿ ನಡೆದಿರುವ ಅಮಾನುಷ ಯುದ್ಧ, ಸಾವಿರಾರು ಜನರು, ಎಳೆಯ ಕಂದಮ್ಮಗಳ ಹತ್ಯೆ ಮತ್ತು ದುರಾಕ್ರಮಣ ಖಂಡಿತ ಸಮರ್ಥನೀಯವಲ್ಲ.

ಆರು ತಿಂಗಳ ಆಡಳಿತವನ್ನು ಪೂರ್ಣಗೊಳಿಸಿರುವ ಕಾಂಗ್ರೆಸ್ ಸರ್ಕಾರ ಹಿಂದಿನ ಬಿಜೆಪಿ ಸರ್ಕಾರಕ್ಕಿಂತ ಭಿನ್ನವಾದ ನೀತಿ ಮತ್ತು ಆಡಳಿತವನ್ನು ನೀಡುತ್ತಿದೆಯೇ ಎನ್ನುವ ಪ್ರಶ್ನೆ ಎದುರಾಗಿದೆ. ಹಲವು ನಿರ್ಣಾಯಕ ವಿಷಯಗಳಲ್ಲಿ ಅದು ತಳೆಯುತ್ತಿರುವ ನಿಲುವು ಮತ್ತು ಕ್ರಮಗಳು ಇಂತಹ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಬಿಜೆಪಿಯ ದುರಾಡಳಿತ ಮತ್ತು ದ್ವೇಷದ ಸನ್ನಿವೇಶಕ್ಕೆ ಬೇಸತ್ತ ಜನತೆಗೆ ಐದು ಗ್ಯಾರಂಟಿಗಳ ಭರವಸೆ ಮತ್ತು ಅದರ ಅನುಷ್ಠಾನದ ಪ್ರಯತ್ನಗಳು ಹಲವು ಗೊಂದಲಗಳ ನಡುವಿನಲ್ಲಿ ಸಾಂತ್ವನ ಹೇಳುವಲ್ಲಿ ಒಂದಿಷ್ಟು ಸಫಲವಾಗಿವೆ. ಆದರೆ ಅವು ಸೃಷ್ಟಿಸಿರುವ ಹಲವಾರು ಆರ್ಥಿಕ ಮತ್ತು ಆಡಳಿತಾತ್ಮಕ ಸಮಸ್ಯೆಗಳನ್ನು ಸರಿಯಾಗಿ ನಿರ್ವಹಿಸಲು ಸರಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ. ಭಾರತದ ಒಕ್ಕೂಟದ ಸರಕಾರ ರಾಜ್ಯಕ್ಕೆ ನೀಡಬೇಕಾದ ಸಹಾಯ ನೀಡದೆ ಪರಿಸ್ಥಿತಿಯನ್ನು ಬಿಗಡಾಯಿಸಲು ಕಾರಣವಾಗುತ್ತಿದೆ. ಮತ್ತು ಅದರಿಂದ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಇರಾದೆಯೂ ಅದಕ್ಕೆ ಇದೆ. ಕೋಮುದ್ವೇಷ ದಳ್ಳುರಿ, ಅಶಾಂತಿಯ ಕಿಚ್ಚಿನಿಂದ ಕುದಿಯುತ್ತಿದ್ದ ವಾತಾವರಣವನ್ನು ಒಂದು ಮಟ್ಟಿನಲ್ಲಿ ತಿಳಿಗೊಳಿಸಲು ಸರ್ಕಾರ ನಡೆಸಿರುವ ಒಂದೆರಡು ಪ್ರಯತ್ನಗಳನ್ನು ಗುರುತಿಸಬಹುದು. ಸಾಮಾಜಿಕ ನ್ಯಾಯಕ್ಕೆ ಅದರ ಬದ್ಧತೆ ಜಾತಿಗಣತಿಯನ್ನು ಹೊರತು ಪಡಿಸಿ ಇತರೆ ಸಂಗತಿಗಳನ್ನು ವಾಸ್ತವದಲ್ಲಿ ಕಾರ್ಯ ರೂಪದ ಸಾಧ್ಯತೆಗಳಿಂದ ಪರಿಶೀಲಿಸಬೇಕಷ್ಟೆ. ಆದರೆ ಇಷ್ಟರಿಂದಲೇ 'ನುಡಿದಂತೆ ನಡೆದಿದ್ದೇವೆ' ಎಂದು ಸದಾಕಾಲ ಡಂಗುರ ಹೊಡೆಯುವ ಸರ್ಕಾರ ಸಂತೃಪ್ತಿಯನ್ನು ಪಡುವಂತಿದ್ದರೆ ಜನತೆಯ ನಿರೀಕ್ಷೆಗಳು ಭಿನ್ನ ಇವೆ ಎಂದು ಹೇಳಬೇಕಾಗುತ್ತದೆ.

ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆ ಮತ್ತು ಅದಕ್ಕೆ ತಕ್ಕದಾದ ವಾತಾವರಣದ ನಿರ್ಮಾಣ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಪಾಲಿಸಬೇಕಾದ ಒಂದು ಬಹುಮುಖ್ಯ ಕರ್ತವ್ಯವಾಗಿತ್ತು. ಜನತೆಯ ಪ್ರತಿಭಟನೆಯ ಹಕ್ಕು ಅಭಾಧಿತವಾಗಿರಬೇಕಿತ್ತು. ನ್ಯಾಯಕ್ಕಾಗಿ ಧ್ವನಿ ಎತ್ತುವ ಜನತೆಯೊಂದಿಗೆ ಸರ್ಕಾರ ನಿಲ್ಲಬೇಕಿತ್ತು, ಸ್ಪಂದಿಸಬೇಕಿತ್ತು. ಕನಿಷ್ಠ ಪ್ರಜಾಪ್ರಭುತ್ವದ ಹಕ್ಕುಗಳನ್ನು ಪಾಲಿಸುವ ದಾರಿಯಲ್ಲಿರಬೇಕಿತ್ತು. ಆದರೆ ಹಲವು ಪ್ರಮುಖ ಸಂದರ್ಭಗಳಲ್ಲಿ ಸರ್ಕಾರ ಎಡವಿದೆ ಮಾತ್ರವಲ್ಲ, ಪಟ್ಟ ಭದ್ರ ಹಿತಾಸಕ್ತಿಗಳ ಜೊತೆಗೆ ನಿಂತಿದೆ ಎನ್ನುವ ಭಾವನೆ ಗಟ್ಟಿಯಾಗಿ ಉಂಟಾಗಿದೆ. ಅತ್ಯಾಚಾರ ನಡೆದು ಹತ್ಯೆಗೀಡಾದ ಧರ್ಮಸ್ಥಳದ ಸೌಜನ್ಯ ಪ್ರಕರಣದಲ್ಲಿ ಸರ್ಕಾರ ವಹಿಸಬೇಕಾದ ನಿಷ್ಪಕ್ಷಪಾತ, ನಿಷ್ಠುರ ಕ್ರಮ ವಹಿಸದೆ ಪಟ್ಟಭದ್ರ ಹಿತಾಸಕ್ತಿಗಳನ್ನು ರಕ್ಷಿಸುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಒಂದಿಷ್ಟು ಬದಲಾವಣೆ ತರಲು ಯತ್ನಿಸುತ್ತಿದೆ ಎನ್ನುವಾಗಲೇ ಹಿಂದುತ್ವದ ವಿಷವನ್ನು ತೆಗೆಯಲು ಹಿಂದೇಟು ಹಾಕುತ್ತಿದೆ. ತಾವು ಅಧಿಕಾರಕ್ಕೆ ಬಂದರೆ ಬಗರ್ ಹುಕುಂ ಸಾಗುವಳಿದಾರರ ಎಲ್ಲಾ ಪ್ರಶ್ನೆಗಳನ್ನು ಇತ್ಯರ್ಥಪಡಿಸುವೆವು ಎಂದು ಹೇಳಿದ್ದ ಅವರೇ ಇಂದು ಎಲ್ಲರನ್ನೂ ಒಕ್ಕಲೆಬ್ಬಿಸಲು ಹೊರಟಿದ್ದಾರೆ. ಬಿಜೆಪಿ ಸರ್ಕಾರದಲ್ಲಿದ್ದ ದುಡಿಮೆಯ ಅವಧಿ 12 ತಾಸುಗಳಿಗೆ ಹೆಚ್ಚಿಸುವ ಪ್ರಸ್ತಾವವನ್ನು ಹಿಂತೆಗೆದುಕೊಳ್ಳಲಿಲ್ಲ. ಕಾರ್ಮಿಕ ವರ್ಗದ ಬಹುತೇಕ ಮೂಲ ಪ್ರಶ್ನೆಗಳು ಕನಿಷ್ಠ ಪರಿಹಾರವನ್ನು ಪಡೆದಿಲ್ಲ.

ಸರಕಾರದ ಆಡಳಿತ ಯಂತ್ರದಲ್ಲಿ, ಅದರ ಆಡಳಿತ ವೈಖರಿಯಲ್ಲಿ ಯಾವುದೇ ಗಮನಾರ್ಹ ಬದಲಾವಣೆಗಳು ಬರಲಿಲ್ಲ. ಬದಲಾಗಿ, ಹಿಂದಿನ ಆಡಳಿತದ ವೈಖರಿಯೇ ಮುಂದುವರೆದಿದೆ. ಮಾತ್ರವಲ್ಲ, ಶೇಕಡ 40 ಲಂಚ ಪಡೆಯುತ್ತಿದ್ದಾರೆಂದು ಅಲ್ಲೋಲಕಲ್ಲೋಲ ಸೃಷ್ಟಿಸಿದ್ದ ಕಾಂಗ್ರೆಸ್ ತನ್ನ ಸರ್ಕಾರದಲ್ಲಿಯೂ ಅದನ್ನು ತಡೆಯುವ ಜನಸಾಮಾನ್ಯರಿಗೆ ಸ್ವಚ್ಛ ಆಡಳಿತ ನೀಡುವ ಯಾವ ಕ್ರಮಗಳನ್ನು ಕೈಗೊಳ್ಳಲಿಲ್ಲ. ಹಿಂದಿನ ಸ್ಥಿತಿಯೇ ಮುಂದುವರೆದಿದೆ ಎನ್ನುವುದು ಅತ್ಯಂತ ವಿಪರ್ಯಾಸ. ಭೂಸ್ವಾಧೀನದಲ್ಲಿ ಆದ ಅನ್ಯಾಯಗಳನ್ನು ಪ್ರತಿಭಟಿಸಿ, ಭೂಸ್ವಾಧೀನ ವಿರೋಧಿಸಿ ಹೋರಾಟ ನಡೆಸುತ್ತಿರುವ ರೈತರಿಗೆ ಇದುವರೆಗೂ ಪರಿಹಾರದ ಕ್ರಮಗಳನ್ನು ಕೈಗೊಂಡಿಲ್ಲ.

ಬಿಜೆಪಿಯ ದುರಾಡಳಿತಕ್ಕೆ ಬೇಸತ್ತು ಅತ್ಯಂತ ಬಹುಮತದಿಂದ ಕಾಂಗ್ರೆಸ್ ಪಕ್ಷವನ್ನ ಆರಿಸಿದ ಜನತೆಗೆ ಹಂತ ಹಂತವಾಗಿ ಭ್ರಮನಿರಸನವಾಗುತ್ತಿದೆ. ಈ ಹಂತದಲ್ಲಿಯಾದರೂ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ತನ್ನ ನೀತಿಯನ್ನು, ಆಡಳಿತ ವೈಖರಿಯನ್ನು ಬದಲಾಯಿಸಿಕೊಳ್ಳುವುದು, ಜನರ ಮತ್ತು ನ್ಯಾಯದ ಪಕ್ಷಪಾತಿಯಾಗುವುದು ಅತ್ಯಗತ್ಯ. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ರಾಜಕೀಯವಾಗಿ ಅದು ತೆರಬೇಕಾದ ಬೆಲೆ ಅತ್ಯಂತ ದುಬಾರಿ.

ಕುರ್ಚಿ ಕಿತ್ತಾಟಕ್ಕೆ ಇಳಿದಿರುವ ಕಾಂಗ್ರೆಸ್

ಈ ವಾರ

ಎಸ್.ವೈ.ಗುರುಶಾಂತ್

ಕಾಂಗ್ರೆಸಿನಲ್ಲಿ ಕುರ್ಚಿಗಾಗಿ ಬಡಿದಾಟ ಮತ್ತೆ ಭುಗಿಲಿದ್ದಿದೆ. ಅಧಿಕಾರ ಹಂಚಿಕೆ ಪ್ರಶ್ನೆ ಬೀದಿ ರಂಪಾಟವೂ ಆಗುತ್ತಿದೆ. ಅಧಿಕಾರಕ್ಕೇರಿ ವರ್ಷವಿನ್ನೂ ಆಗಿಲ್ಲ. ಆದರೆ ಮುಖ್ಯಮಂತ್ರಿಯ ಕುರ್ಚಿಯನ್ನು ಸಿದ್ದರಾಮಯ್ಯನವರಿಂದ ಯಾವಾಗ ಖಾಲಿ ಮಾಡಿಸಬೇಕು ಎನ್ನುವ ಜಿಜ್ಞಾಸೆ ಕಾಂಗ್ರೆಸ್ಸಿನ ಒಳಗೆ ಹೊರಗೆ ನಡೆಯುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಾರ್ಯವೈಖರಿಯು ಪ್ರಶ್ನಾರ್ಹ ಎನ್ನುವ ಅಂಶಗಳು ಇವೆ. ಮಾತ್ರವಲ್ಲ, ಎಷ್ಟು ಜನ ಉಪಮುಖ್ಯಮಂತ್ರಿಗಳು ಇರಬೇಕು ಎನ್ನುವುದು ಬಹಳ ತುರ್ತಿನ ಪ್ರಶ್ನೆಯಾಗಿಯೂ ಕೆಲವರನ್ನು ಕಾಡುತ್ತಿದೆ! ಜೊತೆಗೆ ಲಿಂಗಾಯಿತರಿಗೆ ಆಯಕಟ್ಟಿನ ಸ್ಥಾನ ಇಲ್ಲ ಎನ್ನುವ ಬಹು ದೊಡ್ಡ ಕೊರಗು ಕೆಲ ಅನುಭವಿ ಕಾಂಗ್ರೆಸ್ಸಿನವರಲ್ಲಿ ಕುರಗುಟ್ಟುತ್ತಿದೆ.

ಗ್ಯಾರೆಂಟಿಗಳ ಜಾರಿಯಿಂದಾಗಿ ಆಗಿರುವ ಹಣದ ಕೊರತೆಯನ್ನು ತುಂಬುವುದು ಹೇಗೆ? ಬರ ಪರಿಹಾರ ಹೇಗೆ? ಅವರೇ ಹೇಳುವ ಸಾಮಾಜಿಕ ನ್ಯಾಯದ ಗತಿಯೇನು? ಮುಂತಾದವೆಲ್ಲ ಕೆಲಸಕ್ಕೆ ಬಾರದ ಪ್ರಶ್ನೆಗಳಾಗಿ ಹೋಗಿವೆ!

ಕಾಂಗ್ರೆಸ್ಸಿನಲ್ಲಿ ಬಣಗಳು ಈಗ ಹೊಸದಾಗಿ ಹುಟ್ಟಿಕೊಂಡು ಬಿಟ್ಟಿವೆ ಎಂದೇನಲ್ಲ. ಕಾಂಗ್ರೆಸ್ ಪಕ್ಷ ತನ್ನ ಒಡಲಲ್ಲಿ ಹಲವು ಬಣಗಳನ್ನು ಕಟ್ಟಿಕೊಂಡೇ ಬಂದಿದೆ. ಅಧಿಕಾರ ಕೇಂದ್ರವನ್ನು ಹೊರತುಪಡಿಸಿ ಮತ್ತೇನೂ ಇಲ್ಲ ಎನ್ನುವ ಅನೇಕ ಸ್ಥಾಪಿತ ಹಿತಾಸಕ್ತಿಗಳು ಮನೆ ಮಾಡಿವೆ. ಮಾತ್ರವಲ್ಲ, ಅಂತಹ ಬಣಗಳಿಗೆ ಹೈಕಮಾಂಡ್ ತನ್ನದೇ ಆದ ಹಿಡಿತ, ಹಿತಾಸಕ್ತಿ ಸಾಧನೆಗಾಗಿ ಪೋಷಿಸಿ ಪೊರೆಯುವುದೂ ಇದೆ.

ಸರ್ಕಾರ ರಚನೆಯ ಆರಂಭದಲ್ಲಿ ಇಂಥ ಬಣಗಳ ಶಕ್ತಿ ಪ್ರದರ್ಶನದ ಕಾರಣದಿಂದಲೇ ಮುಖ್ಯಮಂತ್ರಿಗಳು ಪ್ರಮಾಣವಚನ ತೆಗೆದುಕೊಳ್ಳುವುದು ಮಂತ್ರಿಗಳ ಪ್ರಮಾಣ ವಚನ ಸ್ವೀಕರಿಸುವುದೂ ಅತ್ಯಂತ ವಿಳಂಬವಾಗಿ ಹೋಯಿತು ಎನ್ನುವುದನ್ನು ಜನ ಮರೆತಿಲ್ಲ. ಅಂತೂ ಇಂತೂ ಕೊನೆಗೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿ ಉಪಮುಖ್ಯಮಂತ್ರಿಯಾಗಿ ಡಿಕೆ ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸಿದರು. ಇನ್ನೂ ಕೆಲವು ಉಪಮುಖ್ಯಮಂತ್ರಿಗಳನ್ನು ಮಾಡಬೇಕು ಎನ್ನುವ ಪ್ರಸ್ತಾವನೆ ಮತ್ತು ಪ್ರಯತ್ನಗಳು ಇದ್ದಾಗ್ಯೂ ಅದಕ್ಕೆ ಡಿ.ಕೆ.ಶಿವಕುಮಾರ್ ಬಣ ಅವಕಾಶ ಕೊಡಲಿಲ್ಲ. ಹೀಗಾಗಿ ಸರ್ಕಾರದಲ್ಲಿ ಎರಡು ಶಕ್ತಿ ಕೇಂದ್ರಗಳು ಚಾಲನೆಗೆ ಬಂದುವು.

ಇದೇನಿದ್ದರೂ ಜನತೆಯ ನಿರೀಕ್ಷೆಯಂತೆ ಒಂದು ಉತ್ತಮ ಆಡಳಿತ ಕೊಡಬೇಕೆನ್ನುವ ದೃಷ್ಟಿಯಲ್ಲಿ ಆಂತರಿಕ ಭಿನ್ನಾಭಿಪ್ರಾಯ ಬೇಗುದಿಗಳಿದ್ದರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ ಎನ್ನುವ ಸಂದೇಶವನ್ನು ಜನತೆಯ ನಡುವೆ ಹೋಗುವಂತೆ ಪ್ರಯತ್ನ ಮಾಡಿದ್ದು ನಿಜ. ಜನತೆಯ ನಿರೀಕ್ಷೆಗಳಿಗೆ ಸ್ಪಂದಿಸುತ್ತಾ ಈ ಅಪಾರ ಬೆಂಬಲವನ್ನು ಉಳಿಸಿ, ಬಳಸಿ ಸಂಸತ್ತಿನ ಚುನಾವಣೆಯವರೆಗೂ ಕಾಯ್ದುಕೊಂಡು ಹೋಗುವ ಮಾತು ಎಲ್ಲ ನಾಯಕರಲ್ಲಿತ್ತು. ಕರ್ನಾಟಕದಿಂದ ಕನಿಷ್ಠ 20 ಸಂಸದರನ್ನು ಆಯ್ಕೆ ಮಾಡಿ ಕಳಿಸುವ ಒಂದು ರಾಜಕೀಯ, ಸಂಘಟನಾತ್ಮಕ ತೀರ್ಮಾನಕ್ಕೂ ಕಾಂಗ್ರೆಸ್ ನಾಯಕತ್ವ ಬಂದಿತ್ತು. ಅದಕ್ಕಾಗಿ ಕಾರ್ಯ ಯೋಜನೆಯನ್ನು ರೂಪಿಸಿತ್ತು. ಕಾಂಗ್ರೆಸ್ಸಿನ ಗಟ್ಟಿಯಾದ ಈ ನಡೆ ಬಿಜೆಪಿ ಮತ್ತು ಜೆಡಿಎಸ್ ಗಳಲ್ಲೂ ಆತಂಕವನ್ನು ಸೃಷ್ಟಿಸಿತ್ತು. ಬಿಜೆಪಿ ಮತ್ತು ಜೆಡಿಎಸ್ಸಿನ ಹಲವಾರು ಶಾಸಕರು ಪಕ್ಷ ತೊರೆದು ಕಾಂಗ್ರೆಸ್ಸಿನತ್ತ ಬರುವ ಪ್ರಬಲ ಸೂಚನೆಗಳು ಇದ್ದವು. ಹಾಗೆಂದೇ ಬಹಳ ದೊಡ್ಡ ಧ್ವನಿಯಲ್ಲಿ ಶಾಸಕರನ್ನು ಆಪರೇಷನ್ ಮಾಡುವ ಮಾತುಗಳನ್ನು ಆಡಿದ್ದು ಉಂಟು. ಅಂದರೆ ಒಂದರ್ಥದಲ್ಲಿ ಕರ್ನಾಟಕದ ಮಟ್ಟಿಗೆ ರಾಜಕೀಯವಾಗಿ ಕಾಂಗ್ರೆಸ್ಸಿನ ಕೈ ಮೇಲಾಗಿದ್ದು ಮತ್ತು ವಿರೋಧ ಪಕ್ಷಗಳ ದೌರ್ಬಲ್ಯಗಳು ಹೆಚ್ಚು ಹೆಚ್ಚು ಪ್ರಕಟಗೊಳ್ಳುತ್ತಿದ್ದವು. ಆದರೆ ಇಂತಹ ಒಂದು ಅತ್ಯುತ್ತಮ ರಾಜಕೀಯ ಸಂದರ್ಭವನ್ನು ಬಳಸಿಕೊಳ್ಳುವ ಕಡೆಗೆ ಗಮನ ನೀಡದೇ ಈಗ ಮತ್ತೆ ಮುಖ್ಯಮಂತ್ರಿ ಯ ಅಧಿಕಾರವಧಿಯ ಪ್ರಶ್ನೆ ಸಣ್ಣ ಪ್ರಮಾಣದಲ್ಲಿ ಆರಂಭಗೊಂಡು ಈಗ ಅದು ಬಹುದೊಡ್ಡ ಪ್ರಶ್ನೆಯಾಗಿ ನಿಂತಿದೆ. ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯನವರು ಬಹಿರಂಗವಾಗಿ ಇಂತಹ ವಿಷಯಗಳನ್ನು ಮಾತನಾಡುವುದಿಲ್ಲ. ಆದರೂ ಅವರವರ ಬೆಂಬಲಿಗರು ಬಹುದೊಡ್ಡ ಹರಕು ಬಾಯಿಯಲ್ಲಿ ಆಡುತ್ತಿರುವುದನ್ನು ಹೈಕಮಾಂಡ್ ಸಹ ಮುಚ್ಚಲು ಆಗುತ್ತಿಲ್ಲ. ಒಂದು ಬಣದ ಮೇಲೆ ಇನ್ನೊಂದು ಬಣ ಮೇಲುಗೈ ಸಾಧಿಸುವ ಪ್ರಯತ್ನಗಳು ಪ್ರಜ್ಞಾಪೂರ್ವಕವಾಗಿಯೇ ನಡೆಯುತ್ತಿವೆ. ಇಂತಹ ವರ್ತನೆಗಳಿಂದ ಜನರ ಮನಸ್ಸಿನಲ್ಲಿ ಅಸ್ಥಿರತೆಯ ಭಾವ ಮೂಡುತ್ತಿದೆ. ಪರಿಣಾಮ ಆಡಳಿತದಲ್ಲಿ ಬಿಗಿ ಇಲ್ಲದೆ, ಅಧಿಕಾರಶಾಹಿಗಳ ಆಟಗಳೇ ನಡೆಯುವ, ಮುನ್ನಡೆ ಇಲ್ಲದೆ ಕಾಲಹರಣ ಮಾಡುವ ಸೂಚನೆಗಳೇ ಕಾಣುತ್ತವೆ. ಸಹಜವಾಗಿ ಇಂತಹ ಬೆಳವಣಿಗೆಗಳಿಂದ ಬಿಜೆಪಿ ಮತ್ತು ಅದರ ಮಿತ್ರನಾಗಿರುವ ಜೆಡಿಎಸ್ ಗಳು ಬಹಳ ಸಂತೋಷದಂತಿರುವಂತೆ ಕಾಣುತ್ತದೆ. ಅಥವಾ ಅವುಗಳೆಲ್ಲವೂ ಸೇರಿ ಒಳ ರಾಜಕೀಯದ ಒಂದು ಸುತ್ತಿನ ಆಟ ಆಡುತ್ತಿರುವ ಅನುಮಾನಗಳು ಇವೆ. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರಂತೂ ಜನವರಿ ಒಳಗೆ ಈ ಸರ್ಕಾರ ಪತನವಾಗುತ್ತದೆ ಎಂದು ಭವಿಷ್ಯ ನುಡಿಯುತ್ತಲೇ ಇದ್ದಾರೆ. ಅವರು ಅದ್ಯಾವ ಶಕುನದ ಹಕ್ಕಿಯನ್ನು ಸಾಕಿಕೊಂಡಿದ್ದಾರೋ ತಿಳಿಯದು! ಅಂತೂ, ಇಂತೂ ಗೃಹ ಮಂತ್ರಿ ಅಮಿತ್ ಶಾ ರವರನ್ನು ಪದೇ ಪದೇ ಭೇಟಿ ಮಾಡುವುದು ಯಾಕೆ ಎನ್ನುವುದೂ ಅಷ್ಟು ಸುಲಭದಲ್ಲಿ ಅರ್ಥವಾಗದು.

ಜಾತಿ ಗಣತಿಯನ್ನು ಪೂರ್ಣವಾಗಿ ರಾಷ್ಟ್ರಮಟ್ಟದಲ್ಲಿ ಬೆಂಬಲಿಸಿ ಸಮರ್ಥಿಸಿರುವ ಕಾಂಗ್ರೆಸ್ ಸ್ವಪಕ್ಷೀಯರಿಂದಲೇ ವಿರೋಧವನ್ನು ಎದುರಿಸಬೇಕಾದ ಸಂದರ್ಭಗಳು ರಾಜ್ಯದಲ್ಲಿ ಹುಟ್ಟುತ್ತಿವೆ. ಈಗಾಗಲೇ ಆದಿಚುಂಚನಗಿರಿಯ ಮಠಾಧೀಶರು ಕಾಂತರಾಜ್ ಅವರ ವರದಿಯನ್ನು ತಿರಸ್ಕರಿಸಿ ಎಂದು ಹೇಳುತ್ತಿದ್ದಾರೆ. ವರದಿಯೇ ಇನ್ನು ಸಾರ್ವಜನಿಕವಾಗಿ ಮಂಡಿಸದೆ ಇರುವಾಗ ಅದರ ಬಗ್ಗೆ ಮಠಾಧೀಶರು ಹೇಗೆ ಮಾತನಾಡುತ್ತಾರೆ ಎನ್ನುವುದೇ ಕುತೂಹಲ! ಅದರ ಲೋಪದೋಷಗಳನ್ನು ಕಾರಣವಾಗಿ ಹೇಳುತ್ತಾರೆಂದರೆ ಏನರ್ಥ?!

ಕಾಂಗ್ರೆಸ್ ಪಕ್ಷದೊಳಗಿನ ಕುರ್ಚಿಗಾಗಿ ನಡೆದಿರುವ ಬಡಿದಾಟ ಖಂಡಿತಕ್ಕೂ ಒಪ್ಪುವಂಥದ್ದಲ್ಲ. ಮತ್ತು ಅತ್ಯಂತ ಬೇಜಾರಿತನದ ನಡೆಯಾಗಿದೆ. ಅದರ ಮುಖ್ಯಮಂತ್ರಿ ಯಾರಿರಬೇಕು, ಮಂತ್ರಿಗಳು ಯಾರಿರಬೇಕು ಇತ್ಯಾದಿ ಪ್ರಶ್ನೆಗಳು ಅವರ ಆಂತರಿಕ ವಿಷಯ ಎನ್ನುವುದು ನಿಜ. ಆದರೆ ಈ ಪ್ರಶ್ನೆ ಸಾರ್ವಜನಿಕವಾಗಿ ಬೀದಿ ಬಡಿದಾಟವಾಗಿ ಮಾರ್ಪಡಿಸುವುದನ್ನು ಯಾರು ಒಪ್ಪಲಾಗುವುದಿಲ್ಲ. ಕಾಂಗ್ರೆಸ್ ನಾಯಕತ್ವ ಕೂಡಲೇ ಇದಕ್ಕೆ ಇತಿಶ್ರೀ ಹಾಡಬೇಕು. ಜನರ ಸಂಕಷ್ಟಗಳಿಗೆ ಅಧಿಕಾರವನ್ನು ಬಳಸಬೇಕು. ಕೋಮುವಾದಿಗಳನ್ನು ಅಧಿಕಾರದಿಂದ ಕಿತ್ತೆಸೆಯಬೇಕು. ದೇಶ–ಜನರನ್ನು ಉಳಿಸಬೇಕು.

ಸವದತ್ತಿಯಲ್ಲಿ ಎಪಿಎಂಸಿ ಹಮಾಲಿ ಕಾರ್ಮಿಕರ 3ನೇ ರಾಜ್ಯ ಸಮಾವೇಶ

ಎಪಿಎಂಸಿ ಹಮಾಲಿ ಕಾರ್ಮಿಕರಿಗೆ ನಿವೃತ್ತಿ ಪರಿಹಾರಕ್ಕೆ ಒತ್ತಾಯ



ನವೆಂಬರ್ 29ರಂದು ಯಲ್ಲಮ್ಮನ ಸವದತ್ತಿಯಲ್ಲಿ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್ ನೇತೃತ್ವದಲ್ಲಿ ಎಪಿಎಂಸಿ ಹಮಾಲಿ ಕಾರ್ಮಿಕರ 3ನೇ ರಾಜ್ಯ ಸಮಾವೇಶ ಯಶಸ್ವಿಯಾಗಿ ನಡೆಯಿತು. ಎಪಿಎಂಸಿಯಲ್ಲಿ ದುಡಿಯುವ 60 ವರ್ಷ ಪೂರೈಸಿದ ಹಮಾಲಿ ಕಾರ್ಮಿಕರಿಗೆ ಕನಿಷ್ಟ ಒಂದು ಲಕ್ಷ ನಿವೃತ್ತಿ ಪರಿಹಾರ ನೀಡುವುದು ಸೇರಿದಂತೆ ವಸತಿ, ಭವಿಷ್ಯನಿಧಿ ಯೋಜನೆ, ಕನಿಷ್ಟ ವೇತನ ಮುಂತಾದ ಸೌಲಭ್ಯಗಳನ್ನು ಜಾರಿಮಾಡಲು ಹಾಗೂ ಈ ಹಿಂದಿನ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ಕೂಡಲೇ ರದ್ದುಪಡಿಸಲು ಸಮಾವೇಶ ಸರಕಾರವನ್ನು ಒತ್ತಾಯಿಸಿತು.

ಬೇಡಿಕೆಗಳ ಈಡೇರಿಕೆಗೆ ಪ್ರಯತ್ನ ಮಾಡುವೆ ಎಂದ ಶಾಸಕ

ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವರ ಅನುಪಸ್ಥಿತಿಯಲ್ಲಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರದ ಶಾಸಕ ವಿಶ್ವಾಸ ವೈದ್ಯ 'ನಮ್ಮ ಸರಕಾರ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ವಾಪಸ್ ಪಡೆದು ಮೊದಲಿನಂತೆ ಎಪಿಎಂಸಿ ವ್ಯವಸ್ಥೆಯನ್ನು ಮರು ಸ್ಥಾಪಿಸಲು ಬದ್ಧವಾಗಿದೆ. ನಾನು ಬಾಲ್ಯದಿಂದಲೇ ಹಮಾಲಿ ಕಾರ್ಮಿಕರೊಂದಿಗೆ ಒಡನಾಟ ಇದ್ದವನು. ಅವರ ಸಂಕಷ್ಟಗಳ ಬಗ್ಗೆ ನನಗೆ ಅರಿವಿದೆ. ಅವರ ಬೇಡಿಕೆಗಳ ಕುರಿತು ಸರಕಾರ ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವರೊಂದಿಗೆ ಮಾತನಾಡಿ ಬೇಡಿಕೆಗಳ ಈಡೇರಿಕೆಗೆ ಪ್ರಯತ್ನ ಮಾಡುವೆ' ಎಂದರು.



ಕಾರ್ಪೋರೇಟ್ ಕಂಪನಿಗಳಿಗೆ ಸ್ವಾತಂತ್ರ್ಯ

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಟಿ. ಯಶವಂತ್ ಮಾತನಾಡಿ 'ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಮೋದಿ ಸರಕಾರ ಸ್ವಾತಂತ್ರ್ಯ ನೀಡಿದೆ ಎಂದು ಕೇಂದ್ರ ಕೃಷಿ ಸಚಿವರು ಜಂಭ ಕೊಚ್ಚಿಕೊಂಡಿದ್ದರು. ಆದರೇ ವಾಸ್ತವ ಏನೆಂದರೆ ಕೃಷಿ ಕ್ಷೇತ್ರದಲ್ಲಿ ಲೂಟಿ ಮಾಡಲು ಕಾರ್ಪೋರೇಟ್ ಕಂಪನಿಗಳಿಗೆ ಮೋದಿ ಸರಕಾರ ಸ್ವಾತಂತ್ರ್ಯ ನೀಡಿದೆ. ರಾಜ್ಯದಲ್ಲಿ ಈ ಹಿಂದಿನ ಬಿಜೆಪಿ ಸರಕಾರ ಎಪಿಎಂಸಿ ತಿದ್ದುಪಡಿ ಕಾಯ್ದೆ ಜಾರಿಮಾಡಿದ್ದರಿಂದ ಎಪಿಎಂಸಿಗಳು ಇಂದು ಸ್ಮಶಾನಗಳಾಗಿ ಮಾರ್ಪಡುತ್ತಿವೆ. ಜನವಿರೋಧಿ ಕೇಂದ್ರದ ನೀತಿಗಳ ವಿರುದ್ದ ರೈತ ಕಾರ್ಮಿಕರು ನವೆಂಬರ್‌ನಲ್ಲಿ ನಡೆಸುವ ಹೋರಾಟವನ್ನು ಯಶಸ್ವಿಗೊಳಿಸಲು ಮುಂದಾಗೋಣ' ಎಂದರು.

ಹೋರಾಟ ನಮ್ಮ ಬದುಕು ರೂಪಿಸುತ್ತದೆ

ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್ ಅಧ್ಯಕ್ಷರಾದ ಕೆ. ಮಹಾಂತೇಶ್ ರವರು 'ಸಂಘಟಿತ ಹೋರಾಟಗಳಿಂದ ಮಾತ್ರ ನಮ್ಮ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯ. ನಮ್ಮ ಹೋರಾಟದ ಫಲವಾಗಿ ಹಲವಾರು ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಿದೆ. ನೆನಗುದಿಗೆ ಬಿದ್ದಿರುವ ನಮ್ಮ ನ್ಯಾಯೋಚಿತವಾದ ಬೇಡಿಕೆಗಳನ್ನು ಪಡೆಯಲು ಹಮಾಲಿ ಕಾರ್ಮಿಕರ ಬಲಿಷ್ಠವಾದ ಚಳುವಳಿ ಕಟ್ಟಲು ಈ ಸಮಾವೇಶ ಸ್ಪೂರ್ತಿಯಾಗಲಿ' ಎಂದರು.

ದುಡಿಯುವ ಜನರ ಮಹಾಧರಣಿ ಯಶಸ್ವಿಗೆ ಕರೆ

ಎಪಿಎಂಸಿ ಉಪಸಮಿತಿ ಸಂಚಾಲಕ ನಿರುಪಾದಿ ಬೆಣಕಲ್ ಮಂಡಿಸಿದ ಕರಡು ಘೋಷಣೆ ಮೇಲೆ ಚರ್ಚೆ ನಡೆದ ನಂತರ ಸಮಾವೇಶ ನಿರ್ಣಯಗಳನ್ನು ಅಂಗಿಕರಿಸಿತು.

1. ಎಪಿಎಂಸಿ ಹಮಾಲಿ ಕಾರ್ಮಿಕರ ಬೇಡಿಕೆಗಳ ಕುರಿತು ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಕೂಡಲೆ ಸಭೆ ನಡೆಸಿ ಚರ್ಚೆ ನಡೆಸಿ ಕ್ರಮವಹಿಸಬೇಕು.
2. ಹಮಾಲಿ ಕಾರ್ಮಿಕರ ಬೇಡಿಕೆಗಳು ಸೇರಿದಂತೆ ರೈತ ಕಾರ್ಮಿಕರ ಬೇಡಿಕೆಗಳ ಕುರಿತು ನವೆಂಬರ್ 06 ರಿಂದ 20 ರವರೆಗೆ ಎಲ್ಲ ಕೃಷಿ ಮಾರುಕಟ್ಟೆಗಳಲ್ಲಿ ಪ್ರಚಾರ ಸಭೆಗಳನ್ನು ನಡೆಸುವುದು.
3. ನವೆಂಬರ್ 20 ರಂದು ಎಲ್ಲ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸುವುದು.
4. ನವೆಂಬರ್ 27–28 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರೈತರು ಕಾರ್ಮಿಕರು ನಡೆಸುತ್ತಿರುವ ದೇಶವ್ಯಾಪಿ ಮಹಾ ಧರಣಿಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸುವುದು.
5. 2023 ಡಿಸೆಂಬರ್ ಹಾಗೂ 2024 ರ ಜನವರಿಯಲ್ಲಿ ಜಿಲ್ಲಾ ಮಟ್ಟದ ಎಪಿಎಂಸಿ ಕಾರ್ಮಿಕರ ಸಮಾವೇಶಗಳನ್ನು ನಡೆಸುವುದು ಮತ್ತು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸುವುದು.
6. 2024ರ ಬಜೆಟ್ ಪೂರ್ವದಲ್ಲಿ ರಾಜ್ಯಾದ್ಯಂತ ಬೇಡಿಕೆಗಳ ಈಡೇರಿಸಲು ಹೋರಾಟ ಸಂಘಟಿಸುವುದು.

ಫೆಡರೇಶನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ ಪ್ರಸ್ತಾವಿಕವಾಗಿ ಮಾತನಾಡಿದರು. ಎಪಿಎಂಸಿ ಅಧ್ಯಕ್ಷ ಚಂದ್ರಶೇಖರ ಪೂಜೇರ, ಕೃಷಿ ಮಾರಾಟ ಮಂಡಳಿ ಕಲಬುರ್ಗಿ ವಿಭಾಗೀಯ ಪ್ರಧಾನ ವ್ಯವಸ್ಥಾಪಕ ಡಾ. ಜಿ.ಕೆ.ವೆಂಕಟೇಶ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೈಬು ಜೈನೇಖಾನ್ ಮಾತನಾಡಿದರು. ವರ್ತಕರ ಸಂಘದ ಅಧ್ಯಕ್ಷರಾದ ಮದನಲಾಲ್ ಛೋಪ್ರಾ, ವ್ಯಾಪಾರಸ್ಥರಾದ ಸದಾಶಿವ ಕೌಜಲಗಿ, ಬಸವರಾಜ ಕಾರದಗಿ, ಚಂದ್ರು ಶ್ಯಾಮರಾಯನವರ, ಸಂಗಯ್ಯ ವಡೆಯರ, ಬಸಣ್ಣ ಹೂಲಿಕಟ್ಟಿ, ರೈತ ಕಾರ್ಮಿಕ ಮುಖಂಡರಾದ ಎಲ್.ಎಸ್. ನಾಯಕ, ಎಪಿಎಂಸಿ ಕಾರ್ಯದರ್ಶಿ ಕೃಷ್ಣಾನಂದ ನಾಯಕ, ಮುಖಂಡರಾದ ಟಿ. ತಿಪ್ಪೇಸ್ವಾಮಿ, ನಿಂಗಣ್ಣ, ಗುರುಸಿದ್ದಪ್ಪ ಅಂಬಿಗೇರ, ಬಸವಣ್ಣೆಪ್ಪ ನೀರಲಗಿ, ಟಿ. ನಭಿಸಾಬ, ಕಲ್ಲಪ್ಪ ಕಡಬಲ್ಲನವರ, ಎಚ್. ತಿಪ್ಪಯ್ಯ, ಯಂಕಪ್ಪ ಕೆಂಗಲ್, ಮರಿಸ್ವಾಮಿ, ಕೃಷ್ಣಪ್ಪ ನಾಯಕ, ಅಣ್ಣಪ್ಪ ಪೂಜಾರಿ, ಗೀತಾ ಚಕ್ರಸಾಲಿ, ನಾಗರಾಜ ಮಾದರ, ಸಿದ್ದಪ್ಪ ನಡುವಿನಹಳ್ಳಿ, ಮಲ್ಲಿಕಸಾಬ ಬಾಗೂಜಕೊಪ್ಪ ಮುಂತಾದವರು ಉಪಸ್ಥಿತರಿದ್ದರು.


ಸಮಾವೇಶದ ಮೊದಲು ಮುಖ್ಯದ್ವಾರದಿಂದ ಮೆರವಣಿಗೆ ನಡೆಸಲಾಯಿತು. ರಾಜ್ಯದ ವಿವಿದ ಎಪಿಎಂಸಿಗಳಿಂದ ಹದಿನೈದು ನೂರರಷ್ಟು ಹಮಾಲಿ ಕಾರ್ಮಿಕರು ಭಾಗವಹಿಸಿದ್ದರು.

–ಮಹೇಶ್ ಪತ್ತಾರ್

ಯಹೂದಿಗಳ ಕುರಿತಾಗಿ ಗಾಂಧೀಜಿಯವರ ಚಿಂತನೆ ಏನಾಗಿತ್ತು? ಪ್ಯಾಲೆಸ್ಟೀನ್‌ಗೆ ಬೆಂಬಲವಾಗಿ ನಿಂತಿದ್ದ ಭಾರತದ ನೀಲುವು ಬದಲಾದದ್ದು ಯಾಕೆ?

ಯಹೂದಿಗಳಿಗೆ ಪ್ರತ್ಯೇಕ ರಾಷ್ಟ್ರವನ್ನು ಬೆಂಬಲಿಸುವುದಿಲ್ಲ ಎಂದಿದ್ದ ಗಾಂಧಿ

ವಿವಿಧ ದೇಶಗಳ ಯಹೂದಿಗಳು ಪ್ಯಾಲೆಸ್ತೀನ್ಗೆ ಹಿಂತಿರುಗಬೇಕಾದರೆ, ಅರಬ್ಬರ ಒಪ್ಪಿಗೆಯೊಂದಿಗೆ ಪ್ಯಾಲೆಸ್ತೀನ್ನಲ್ಲಿ ನೆಲೆಸಲು ಅರಬ್ಬರ ಸಂಪೂರ್ಣ ಸ್ನೇಹವನ್ನು ಹೊಂದಿರಬೇಕು ಎಂದು ಗಾಂಧೀಜಿಯವರು ಹರಿಜನ ಪತ್ರಿಕೆ(1938) ಯಲ್ಲಿ ಬರೆದಿದ್ದರು. 'ಅರಬ್ಸ್ ವರ್ಸಸ್ ಯಹೂದಿಗಳು' ಎಂಬ ಪ್ರಬಂಧದಲ್ಲಿ, ನಾನು ಹಿಟ್ಲರನ ಯಹೂದಿಗಳ ಹತ್ಯಾಕಾಂಡವನ್ನು ಟೀಕಿಸುತ್ತೇನೆ; ಆದರೆ ಯಹೂದಿಗಳಿಗೆ ಪ್ರತ್ಯೇಕ ರಾಷ್ಟ್ರವನ್ನು ಬೆಂಬಲಿಸುವುದಿಲ್ಲ ಎಂದು ಅವರು ಹೇಳಿದರು. "ಇಂಗ್ಲೆಂಡ್ ಬ್ರಿಟಿಷರಿಗೆ ಸೇರಿದ್ದಂತೆ, ಪ್ಯಾಲೆಸ್ತೀನ್ ಅರಬ್ಬರಿಗೆ ಸೇರಿದೆ. ಯಹೂದಿಗಳು ಜರ್ಮನ್ನರ ಮನಸ್ಸನ್ನು ಗೆಲ್ಲಬೇಕು. ಅರಬ್ ಭೂಮಿಯಲ್ಲಿ ಯಹೂದಿಗಳನ್ನು ಬಲವಂತವಾಗಿ ಹೇರುವುದು ದೊಡ್ಡ ತಪ್ಪು" ಎಂದಿದ್ದರು.



ಗಾಂಧಿಗೆ ಕೆಲವು ನಿಕಟ ಯಹೂದಿ ಸ್ನೇಹಿತರಿದ್ದರು. ಅವರ ಅತ್ಯುತ್ತಮ ಗುಣಗಳನ್ನು ಅವರು ಶ್ಲಾಘಿಸಿದರು. ಈ ಹಿಂದೆ ಜಗತ್ತಿನ ವಿವಿಧ ಭಾಗಗಳಲ್ಲಿ ಯಹೂದಿಗಳನ್ನು ಕಗ್ಗೊಲೆ ಮಾಡಲಾಗಿತ್ತು. ಯಹೂದಿಗಳು ಭಾರತದಲ್ಲಿಯೂ ಬಂದು ನೆಲೆಸಿದರು. ಅಸಹಕಾರ ಚಳವಳಿಯ (1919–24) ಸಮಯದಲ್ಲಿ, ಹಿಂದೂ–ಮುಸ್ಲಿಂ ಜನರ ನಡುವಿನ ಭಿನ್ನಾಭಿಪ್ರಾಯದಿಂದಾಗಿ ಮುಂಬೈನಲ್ಲಿ ಯಹೂದಿಗಳು ಅಸಹಕಾರ ಚಳವಳಿಯಿಂದ ದೂರವಿದ್ದರು. ಗಾಂಧೀಜಿ ಯಹೂದಿಗಳೊಂದಿಗೆ ಮಾತುಕತೆ ನಡೆಸಿ ಸಮಾಧಾನಪಡಿಸಿದರು. "ವಿಮೋಚನೆಗೊಂಡ ಭಾರತದಲ್ಲಿ ಎಲ್ಲ ಧರ್ಮದವರು ಸ್ವಾತಂತ್ರ್ಯ ಮತ್ತು ಭದ್ರತೆಯಿಂದ ಬದುಕುತ್ತಾರೆ" ಎಂದು ಹೇಳಿದರು.

ಇದು ಅನೈತಿಕ ಎಂದರು

ಪ್ಯಾಲೆಸ್ಟೈನ್‌ನಲ್ಲಿ ಯಹೂದಿ ರಾಷ್ಟ್ರದ ಬಗ್ಗೆ ಗಾಂಧಿಯವರ ಸಂದೇಹಗಳು ಪ್ಯಾಲೆಸ್ಟೈನ್‌ನಲ್ಲಿ ಅರಬ್ಬರನ್ನು ಹೊರಹಾಕುವ ಮತ್ತು ಯಹೂದಿಗಳ ತಾಯ್ನಾಡನ್ನು ಸೃಷ್ಟಿಸುವ ಬ್ರಿಟಿಷ್ ಆಕ್ರಮಣ–ಸೆಮಿಟಿಕ್ (ಜಿಯೋನಿಸ್ಟ್) ಯೋಜನೆಯನ್ನು ಗಾಂಧಿ ವಿರೋಧಿಸಿದರು. ಇದು ಅನೈತಿಕ ಎಂದರು. ಅರಬ್ಬರು ಶತಮಾನಗಳಿಂದ ಸಾರ್ವಭೌಮತ್ವ ಹೊಂದಿದ್ದ ದೇಶವನ್ನು ಯಹೂದಿಗಳು ಆನುವಂಶಿಕವಾಗಿ ಪಡೆಯಲು ಸಾಧ್ಯವಿಲ್ಲ ಎಂದು ಗಾಂಧಿ ಹೇಳಿದರು. 'ಯಹೂದಿ ಕ್ರಾನಿಕಲ್' ನಲ್ಲಿ ಗಾಂಧಿ, "ಜಿಯೋನಿಸಂ (ಯಹೂದಿ ಜನಾಂಗೀಯತೆ) ಎಂದರೆ ಯಹೂದಿಗಳು ಪ್ಯಾಲೆಸ್ತೀನ್ ಅನ್ನು ವಶಪಡಿಸಿಕೊಳ್ಳುವುದು ಎಂಬ ಬೇಡಿಕೆಯ ಬಗ್ಗೆ ನನಗೆ ಯಾವುದೇ ಸಹಾನುಭೂತಿ ಇಲ್ಲ." ಎಂದು ಹೇಳಿದ್ದರು.

ಜಗತ್ತು ಯೆಹೂದ್ಯರನ್ನು ಮೋಸ ಮಾಡಿದೆ ಎಂದು ನನಗೆ ತಿಳಿದಿದೆ. ಆದರೆ ಅದಕ್ಕಾಗಿ ಅವರು ಪ್ಯಾಲೆಸ್ತೀನ್‌ಗೆ ಹಿಂದಿರುಗುವ ಪ್ರಶ್ನೆಯೇ ಇರಲಿಲ್ಲ. ಇಂದು ಜಗತ್ತಿನಲ್ಲಿ ಯಹೂದಿಗಳು ವಾಸಿಸುವ ದೇಶಗಳು ಅವರ ತಾಯ್ನಾಡು. ಜಗತ್ತು ಅವರ ಮನೆಯಾಗಿದೆ ಎಂದು ಅವರು ಹೇಳಿದರು.

"ಅಮೆರಿಕ ಮತ್ತು ಇಂಗ್ಲೆಂಡ್‌ನ ಬಲದೊಂದಿಗೆ ಪ್ಯಾಲೆಸ್ತೀನ್‌ನಲ್ಲಿ ನೆಲೆಸಬೇಕು ಎಂದು ಯಹೂದಿಗಳು ಭಾವಿಸಿದರೆ, ಅವರು ಗಂಭೀರ ತಪ್ಪು ಮಾಡುತ್ತಿದ್ದಾರೆ. ತಮ್ಮನ್ನು ಸ್ವಾಗತಿಸದ ದೇಶದಲ್ಲಿ ಬಲ ಮತ್ತು ಹಣದ ಪುಟ 07 ಕ್ಕೆ

ತಮ್ಮ ಹಕ್ಕುಗಳಿಗಾಗಿ ಮತ್ತೆ ಹೋರಾಟಕ್ಕಿಳಿದ ಬಿಸಿಯೂಟ ನೌಕರರು

“ನಮಗೆ ಸಂಬಳ ಬರ್ತಿರೋದು ಕಡಿಮೆ. ನಾವು ಮೊದಲು ತಿಂಗಳಿಗೆ 300 ರೂಪಾಯಿಗೆ ದುಡಿದಿದ್ದೇವೆ. ಅಂದ್ರೆ, ದಿನಕ್ಕೆ 10 ರೂಪಾಯಿ. ಈಗ ನಮಗೆ ದಿನಕ್ಕೆ ನೂರು ರೂಪಾಯಿ ಸಂಬಳ ಮಾತ್ರ. ಅದ್ರಲ್ಲಿ ನಮ್ ಮಕ್ಳಿಗೆ ವಿದ್ಯಾಭ್ಯಾಸ ಕೊಡ್ಸೋಕಾಗ್ತಿಲ್ಲ, ನಮ್ ಮಕ್ಳಿಗೆ ಬಟ್ಟೆ ತರೋಕಾಗ್ತಾಯಿಲ್ಲ, ನಮ್ ಮಕ್ಳ ಆರೋಗ್ಯಾನೂ ಸರಿಯಾಗಿ ನೋಡ್ಕೊಳ್ಳೊಕಾಗ್ತಾಯಿಲ್ಲ. ಆ ಯೋಜನೆ ಈ ಯೋಜನೆ ಅಂತ ತರ್ತಾರೆ, ಖರೆ, ಒಳ್ಳೆದು, ತರೋದು ಬೇಡ ಅಂತಲ್ಲ, ಈ ಯೋಜನೆನೂ ಸಹ ನಮ್ ಹೆಣ್ಮಕ್ಳಿಗೆ ಒಳ್ಳೇದಾಗ್ಲಿ ಅಂತೇಳಿ ತಿಂಗಳಿಗೆ ಕನಿಷ್ಟ ವೇತನ ಒಂಬತ್ತು ಸಾವಿರ, ಅಂದ್ರೆ, ದಿನಕ್ಕೆ 300 ರೂಪಾಯಿ ಆದ್ರೂ ಕೊಡ್ಲಿ ನಮ್ಗೆ, ಇದರಿಂದಾದ್ರೂ, ನಮ್ ಮಕ್ಳಿಗೆ ಒಳ್ಳೆ ವಿದ್ಯಾಭ್ಯಾಸ ಕೊಡಿಸ್ತೀವೆ” ಇದು ಬಿಸಿಯೂಟ ನೌಕರರಾದ ಈರಮ್ಮ ಅವರ ಮಾತುಗಳು.

ಮತ್ತೊಬ್ಬ ನೌಕರರಾದ ಕೊಪ್ಪಳ ಜಿಲ್ಲೆಯ ಅನ್ನಪೂರ್ಣ ಅವರು ಹೇಳಿದ್ದು ಹೀಗೆ, “ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ಈ ಮೂರು ತಿಂಗಳ ವೇತನ ಆಗಿಲ್ಲ. ಅಕ್ಷರದಾಸೋಹದಲ್ಲಿ ಕೆಲಸ ಮಾಡುವವರೆಲ್ಲರೂ ಬಡ ಮಹಿಳೆಯರೇ ಇದ್ದಾರೆ. ಅವರು ವಿಧವೆಯರಿದ್ದಾರೆ, ವಿಚ್ಛೇಧನ ಪಡೆದವರಿದ್ದಾರೆ, ಅದರಲ್ಲೇ ಬದುಕುವವರು ಬಾಳಾ ಜನರಿದ್ದಾರೆ. ಮನೆ ಬಾಡಿಗೆ ಕಟ್ಬೇಕು, ಮಕ್ಕಳ ಸ್ಕೂಲ್ ಫೀಜ್ ಕಟ್ಬೇಕು, ಎಲ್ಲಾ ಅದ್ರಲ್ಲೇ ಮಾಡ್ಬೇಕು. ಸರ್ಕಾರದವ್ರು ಇದರ ಬಗ್ಗೆ ಗಮನಾನೇ ಕೊಡ್ತಿಲ್ಲ. ಜಿಲ್ಲಾ ಅಕೌಂಟ್ ಗೆ ದುಡ್ ಬಂದಿರುತ್ತೆ ಅಂತ ಹೇಳ್ತಾರೆ, ಆದ್ರೆ ನಮ್ ಅಕೌಂಟ್ಗೆ ಮೂರು ತಿಂಗಳಾದ್ರೂ ಪೇಮೆಂಟ್ ಜಮಾ ಮಾಡ್ತಿಲ್ಲ.”

ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಬಿಸಿಯೂಟ ನೌಕರರ ಹೋರಾಟದಲ್ಲಿ ಭಾಗಿಯಾಗಿದ್ದ ಇಬ್ಬರು ಮಹಿಳೆಯರ ಮಾತುಗಳಿವು. ವೇತನ ಹೆಚ್ಚಳ, ನಿವೃತ್ತಿ ಸಮಯದಲ್ಲಿ ಇಡಗಂಟು ಜಾರಿ, ಬಿಸಿಯೂಟದ ಗುಣಮಟ್ಟ ಸೇರಿದಂತೆ ತಮ್ಮ ಹಲವು ದೀರ್ಘಾವಧಿಯ ಬೇಡಿಕೆಗಳನ್ನು ಆಳುವವರ ಕಿವಿಗೆ ಮತ್ತೊಮ್ಮೆ ಮುಟ್ಟಿಸಲು, ಮತ್ತು ಬೇಡಿಕೆ ಈಡೇರಿಸಿಕೊಳ್ಳುವ ಗುರಿಯೊಂದಿಗೆ ರಾಜ್ಯದ ಬಿಸಿಯೂಟ ನೌಕರರು, ವಿಧಾನಸೌಧದಿಂದ ಕೂಗಳತೆಯ ದೂರದಲ್ಲಿರುವ ಸ್ವಾಂತಂತ್ರ ಉದ್ಯಾನವನದಲ್ಲಿ ಹೋರಾಟ ನಡೆಸುತ್ತಿದ್ದರು. ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ನೇತೃತ್ವದಲ್ಲಿ ರಾಜ್ಯದ ಹಲವು ಜಿಲ್ಲೆಗಳಿಂದ ಬಂದಿದ್ದ ಸಹಸ್ರಾರು ಬಿಸಿಯೂಟ ನೌಕರರು ಅಕ್ಟೋಬರ್ 30ರಂದು ಅನಿರ್ದಿಷ್ಟಾವಧಿ ಪ್ರತಿಭಟನೆ ಮಾಡುವ ನಿರ್ಧಾರದೊಂದಿಗೆ ಧರಣಿ ಕುಳಿತಿದ್ದರು.

ಕೆಲಸ 6 ಗಂಟೆ, ನಮೂದಿಸುವುದು 4 ಗಂಟೆ!!

ಇವರು ದಿನವೊಂದರಲ್ಲಿ 6ರಿಂದ ಆರೂವರೆ ಗಂಟೆ ಕೆಲಸ ಮಾಡುವ ಕಾರ್ಮಿಕರು. ಆದರೆ, ಸರ್ಕಾರ ಇವರನ್ನು ‘ಕಾರ್ಮಿಕರು’ ಎಂದು ಪರಿಗಣಿಸುವುದಿಲ್ಲ! ಆರೂವರೆ ಗಂಟೆ ಕೆಲಸ ಮಾಡಿದರೂ ಇವರ ಕೆಲಸದ ಅವಧಿಯನ್ನು 4 ಗಂಟೆ ಎಂಬು ನಮೂದಿಸಲಾಗುತ್ತಿದೆ! ಸರ್ಕಾರ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸಿದೆ, ಆದರೆ, ಸರ್ಕಾರವೇ ನಿಗಧಿ ಪಡಿಸಿದ ಕನಿಷ್ಠ ವೇತನ ಈ ನೌಕರರಿಗೆ ಅನ್ವಯ ಮಾಡುವುದಿಲ್ಲ! ಎಲ್ಲಾ ಕಾರ್ಮಿಕರಿಗೂ ಇರುವಂತೆ ಇವರಿಗೂ ನಿವೃತ್ತಿ ವಯಸ್ಸಿದೆ. ನಿವೃತ್ತಿ ವಯಸ್ಸಿಗೆ ಕೆಲಸದಿಂದ ಬಿಡುಗಡೆ ಆಗುತ್ತಾರೆ. ಆದರೆ, ಕಾರ್ಮಿಕರಿಗೆ ಸಿಗಬೇಕಾದ ಮತ್ತು ನಿವೃತ್ತಿ ಬದುಕಿಗೆ ಅವಶ್ಯಕವಾದ ನಿವೃತ್ತಿ ವೇತನ ಅಥವಾ ‘ಹಿಡಿಗಂಟು ಹಣ’ ಸಿಗುವುದಿಲ್ಲ.

ಉದ್ಯೋಗಿಗಳಲ್ಲ, ಪಾರ್ಟ್ ಟೈಮ್ ವರ್ಕರ್!

ದಿನದಲ್ಲಿ 6 ಗಂಟೆ, ವಾರದಲ್ಲಿ 36



ಗಂಟೆ ಕೆಲಸ ಮಾಡುವ, ನಿವೃತ್ತಿಯವರೆಗೂ ಹತ್ತಾರು ವರ್ಷಗಳ ಕಾಲ ದುಡಿಯುವ ಬಿಸಿಯೂಟ ನೌಕರರು ಹಣಕಾಸು ಇಲಾಖೆಯ ಪ್ರಕಾರ ಅರೆಕಾಲಿಕ (ಪಾರ್ಟ್ ಟೈಮ್) ಉದ್ಯೋಗಿಗಳಂತೆ! ಮತ್ತು ಸ್ಕೀಮ್ ನೌಕರರಂತೆ! ಇವರನ್ನು ಉದ್ಯೋಗಿಗಳು ಎಂದು ತೆಗೆದುಕೊಂಡಿಲ್ಲ. ಶಾಲೆ ನಡೆಯುವ ಸಮಯದಲ್ಲಿ ಅಡುಗೆ ಮಾಡಿ ಕೊಡಲು ಮಾತ್ರ ಇವರನ್ನು ತೆಗೆದುಕೊಂಡಿರುವುದರಿಂದ ನಿವೃತ್ತಿ ವೇತನ ಅಥವಾ ಕಾರ್ಮಿಕರಿಗೆ ಸಿಗಬೇಕಾದ ಕಾನೂನು ಬದ್ದವಾದ ಸವಲತ್ತುಗಳನ್ನು ಕೊಡಲು ಸಾಧ್ಯವಿಲ್ಲ ಎಂಬುದು ಹಣಕಾಸಿನ ಇಲಾಖೆಯ ವಾದ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂತಹ ಹಲವು ಯೋಜನೆಗಳನ್ನು ರೂಪಿಸುತ್ತವೆ. ಆದರೆ, ಅದನ್ನು ಜಾರಿಮಾಡಲು ಬೇಕಾದ ಮಾನವ ಸಂಪನ್ಮೂಲಗಳನ್ನು ಸ್ವಯಂ ಸೇವೆ ಅಥವಾ ಸ್ಕೀಂ ಹೆಸರುಗಳಲ್ಲಿ ನೇಮಕ ಮಾಡಿಕೊಳ್ಳಲು ಅವಕಾಶ ಕೊಡುತ್ತದೆ. ಇವರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಸರ್ಕಾರ ಒಂದು ಶಾಸ್ವತ ಪರಿಹಾರವನ್ನು ರೂಪಿಸಬೇಕಲ್ಲವೇ? ಇದನ್ನು ಮಾಡುತ್ತಿಲ್ಲ ಎಂದರೆ, ಇದು ನೌಕರರನ್ನು ಕಾನೂನು ಸೌಲಭ್ಯಗಳಿಂದ ವಂಚಿಸಲೆಂದೇ ಮಾಡಲಾಗಿದೆ ಎಂದರ್ಥ.

“ಹಣಕಾಸು ಇಲಾಖೆ ಬಿಸಿಯೂಟ ನೌಕರರ ಕಾರ್ಮಿಕ ಕಾನೂನುಗಳ ಬಗ್ಗೆ ಮಾತನಾಡುತ್ತದೆ. ಆದರೆ, ಹಣಕಾಸು ಇಲಾಖೆ ಯಾರ ನಿಯಂತ್ರಣದಲ್ಲಿದೆ? ಅದು ಸರ್ಕಾರದ ನಿಯಂತ್ರಣದಲ್ಲಿದೆ ತಾನೆ? ಈ ನೌಕರರ ನ್ಯಾಯಬದ್ಧ ಬೇಡಿಕೆಗಳನ್ನು ಪೂರೈಸಲು ಸರ್ಕಾರ ಮುಂದಾಗಬೇಕಷ್ಟೆ. ಶಿಕ್ಷಣ ಎಂಬುದು ಸೇವೆಯ ಉದ್ದೇಶದಿಂದ ಬಂದಿದೆ ವಿನಃ ಇದು ಸರಕಲ್ಲ. 1.20 ಲಕ್ಷ ಹೆಣ್ಣುಮಕ್ಕಳನ್ನು ಒಂದು ಯೋಜನೆಯಲ್ಲಿ, ಒಂದು ಇಲಾಖೆಯಲ್ಲಿ ದುಡಿಮೆ ಮಾಡಿಸಿಕೊಳ್ಳುವಾಗ, ಅದಕ್ಕೆ ಬೇಕಾದಂತಹ ಜವಾಬ್ದಾರಿಗಳನ್ನು ಸರ್ಕಾರ ತೆಗೆದುಕೊಳ್ಳುಬೇಕು. ರಾಜ್ಯ ಸರ್ಕಾರ ಮತ್ತು ಇಲಾಖೆಯ ಸಚಿವರು ನಿರ್ಧಾರ ತೆಗೆದುಕೊಳ್ಳಬೇಕು. ಹಣಕಾಸು ಇಲಾಖೆ ಇರುವುದು ರಾಜ್ಯ ಸರ್ಕಾರದ ನಿಯತ್ರಣದಲ್ಲಿ ವಿನಃ, ರಾಜ್ಯ ಸರ್ಕಾರ ಹಣಕಾಸು ಇಲಾಖೆಯ ನಿಯಂತ್ರಣದಲ್ಲಿಲ್ಲ” ಎನ್ನುತ್ತಾರೆ ಸಿಐಟಿಯು ರಾಜ್ಯಧ್ಯಕ್ಷೆ ಎಸ್ ವರಲಕ್ಷ್ಮಿ ಯವರು.

ರಾಜ್ಯದಲ್ಲಿ 1 ಲಕ್ಷದ 19 ಸಾವಿರ ಬಿಸಿಯೂಟ ನೌಕರರು, ಸರ್ಕಾರಿ ಶಾಲೆಗಳ 55,80,000 ವಿದ್ಯಾರ್ಥಿಗಳಿಗೆ ಬಿಸಿಯೂಟ ತಯ್ಯಾರಿಸಿ ಊಟ ಬಡಿಸುವ ಕೆಸಲದಲ್ಲಿ ತೊಡಗಿದ್ದಾರೆ. 60 ವರ್ಷ ತುಂಬಿದ ಹುದ್ದೆಯಿಂದ ವಜಾಗೊಂಡವರ ಪಿಂಚಣಿಗಾಗಿ 1 ಲಕ್ಷ ರೂಪಾಯಿ ಹಿಡಿಗಂಟು ಹಣ ನೀಡಬೇಕು, ಕೆಲಸದ ಸ್ಥಳದಲ್ಲಿ ಮರಣ ಹೊಂದಿದಲ್ಲಿ 25 ಲಕ್ಷ ರೂಪಾಯಿ ಪರಿಹಾರ ಕೊಡಬೇಕು ಮತ್ತು ಕಳೆದ ಬಜೆಟ್‌ನಲ್ಲಿ ಪ್ರಸ್ತಾಪಿಸಲಾದ 1,000 ರೂಗಳ ವೇತನ ಹೆಚ್ಚಳವನ್ನು ಜನವರಿಯಿಂದ ಜಾರಿಗೊಳಿಸಬೇಕು, 45 ಮತ್ತು 46 ನೇ ಭಾರತೀಯ ಕಾರ್ಮಿಕ ಕಾನೂನುಗಳ ಅಡಿಯಲ್ಲಿ ಸರ್ಕಾರವು ತಮ್ಮನ್ನು ಕಾರ್ಮಿಕರೆಂದು ಗುರುತಿಸಬೇಕು ಮತ್ತು ಶಾಲೆಗಳಲ್ಲಿ ಅಡುಗೆಯವರನ್ನು ಗ್ರೂಪ್ ಡಿ ಕಾರ್ಮಿಕರಾಗಿ ನೇಮಿಸಬೇಕು. ಬೆಲೆ ಏರಿಕೆಯ ಆಧಾರದಲ್ಲಿ ವೇತನ ಹೆಚ್ಚಳ 12 ಸಾವಿರ ನೀಡಬೇಕು. ಅಕ್ಷರ ದಾಸೋಹ ಮಾರ್ಗಸೂಚಿಯಲ್ಲಿ 4 ಗಂಟೆ ಕೆಲಸ ಮಾತ್ರವಿದೆ. ಮಾರ್ಗದರ್ಶಿ ಕೈಪಿಡಿಯಲ್ಲಿ 6 ಗಂಟೆ ಕೆಲಸ ಎಂದು ತಿದ್ದುಪಡಿ ಮಾಡಬೇಕು. ಅಕ್ಷರ ದಾಸೋಹ ಯೋಜನೆಸಂಪೂರ್ಣವಾಗಿ ಶಿಕ್ಷಣ ಇಲಾಖೆಯಡಿಯಲ್ಲಿ ನಡೆಯಬೇಕು. ಸಾದಿಲ್ವಾರು ಜಂಟಿಖಾತೆ ಜವಾಬ್ದಾರಿಯನ್ನು ಮುಖ್ಯ ಅಡುಗೆ ನೌಕರರಿಗೆ ಬದಲಿಸಬೇಕು ಎಂಬಿತ್ಯಾದಿ ಬೇಡಿಕೆಗಳು ಪಟ್ಟಿಯಲ್ಲಿವೆ.

ಅಡುಗೆ ತಯಾರಿಕೆ ಒಂದು ಉತ್ಪಾದನಾ ಚಟುವಟಿಕೆ

ಕನಿಷ್ಠ ವೇತನ ಕಾಯ್ದೆಯ ಪ್ರಕಾರ ‘ಅಡುಗೆ ತಯಾರಿಕೆ’ ಒಂದು ಉತ್ಪಾದನಾ ಚಟುವಟಿಕೆಯಾಗಿದೆ. ರಾಜ್ಯದಲ್ಲಿ ಹೋಟೆಲುಗಳು, ಹಾಸ್ಟೆಲ್‌ಗಳಲ್ಲಿ ಮತ್ತು ಮನೆಗೆಲಸಗಾರರು ಅಡುಗೆ ತಯಾರಿಕೆಗೆ ಕನಿಷ್ಠ 375 ರೂ ರಿಂದ 455 ರೂ. ದಿನದ ಕೂಲಿಯಲ್ಲಿ ಮೂಲವೇತನವಾಗಿ ಪಡೆಯುತ್ತಿದ್ದಾರೆ. ಬಿಸಿಯೂಟ ನೌಕರರು ಬೆಳಿಗ್ಗೆ 9–00 ರಿಂದ 3–30 ರವರೆಗೆ ಕೆಲಸ ಮಾಡುತ್ತಾರೆ. ದಿನಕ್ಕೆ 6 ರಿಂದ 6.30 ಗಂಟೆ ಕೆಲಸ ಮಾಡಿದರೂ ಕೂಡ ಎಮ್.ಡಿ.ಎಮ್. ಕೈಪಿಡಿಯಲ್ಲಿ 4 ಗಂಟೆ ಎಂದೂ ನಮೂದಿಸಲಾಗಿದೆ. ಇದರಿಂದಾಗಿ ಇವರು ವೇತನ ಹೆಚ್ಚಳದಿಂದ ವಂಚಿತರಾಗಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ ಕೇಂದ್ರ ಸರ್ಕಾರಕ್ಕೆ ಕೆಲಸದ ಅವಧಿಯ ಬದಲಾವಣೆ ಮಾಡಲು ಒತ್ತಾಯ ಮಾಡಬೇಕು. ಇದೊಂದು ಕೇಂದ್ರ ಸರ್ಕಾರಿ ಯೋಜನೆ ಎನ್ನುತ್ತ ಬದುಕುಳಿಯುವ ವೇತನದಿಂದಲೂ ಈ ಮಹಿಳೆಯರನ್ನು ವಂಚಿಸಲಾಗುತ್ತಿದೆ. ದುಬಾರಿ ಬೆಲೆಯೇರಿಕೆಯ ದಿನಗಳಲ್ಲಿ ಇವರು ಅತ್ಯಂತ ನಿಕೃಷ್ಟವಾಗಿ ಬದುಕುತ್ತಿದ್ದಾರೆ. 20 ವರ್ಷಗಳಿಂದ ದುಡಿದ ಮಹಿಳೆಯರನ್ನು 60 ವರ್ಷ ದಾಟಿದೆ ಎಂದು ಅಮಾನವೀಯವಾಗಿ ಒಂದು ಬಿಡಿಗಾಸನ್ನು ಕೊಡದೆ, ಸುಮಾರು 6500 ಕ್ಕೂ ಹೆಚ್ಚಿನ ಮಹಿಳೆಯರನ್ನು ಕೆಲಸದಿಂದ ಹೊರದಬ್ಬಲಾಗಿದೆ. ಈ ಹಿಂದೆ ಇಲಾಖೆಯ ಜೊತೆ ಹಲವಾರು ಬಾರಿ ಮಾತುಕತೆ ನಡೆದಿದೆ. ನಿವೃತ್ತಿ ಹೊಂದಿದ ಮತ್ತು ಹೊಂದುತ್ತಿರುವ ಈ ನೌಕರರಿಗೆ 1 ಲಕ್ಷ ಪರಿಹಾರ ನೀಡಲು ಆದೇಶಿಸಬೇಕು ಎಂದು ಎಸ್. ವರಲಕ್ಷ್ಮಿ ಯವರು ಆಗ್ರಹಿಸಿದರು.

ಭರವಸೆ ಮೂಡಿಸದ ಅಧಿಕಾರಿಗಳ ಭೇಟಿ

ಅನಿರ್ಧಿಷ್ಟಾವಧಿ ಪ್ರತಿಭಟನೆಯ 2ನೆಯ ದಿನ ಯೋಜನಾ ನಿರ್ದೇಶಕರಾದ ಶುಭಂ ಕಲ್ಯಾಣ ಅವರು ಧರಣಿ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿ ಬೇಡಿಕೆಗಳ ಕುರಿತು ಸರ್ಕಾರದ ಜೊತೆಗೆ ಚರ್ಚಿಸಲಾಗುವುದು ಎಂದು ಹೇಳಿದರು. ಆದರೆ, ಇದರಿಂದ ನಮಗೆ ಯಾವುದೇ ರೀತಿಯ ಭರವಸೆ ದೊರೆತಿಲ್ಲ, ಆದರಿಂದ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳು, ಸಚಿವರು ಖುದ್ದಾಗಿ ಧರಣಿ ಸ್ಥಳಕ್ಕೆ ಭೇಟಿ ನೀಡಿ ಬಿಸಿಯೂಟ ನೌಕರರ ಬೇಡಿಕೆಗಳನ್ನು ಈಡೇರಿಸುವವರೆಗೆ ಧರಣಿ ಮುಂದುವರಿಯಲಿದೆ. ಸರ್ಕಾರಗಳು ಪದೆ ಪದೇ ವಂಚಿಸುವ ಕೆಲಸ ಮಾಡುತ್ತಿವೆ. ಹಾಗಾಗಿ ನಮಗೆ ಅನಿರ್ದಿಷ್ಟಾವಧಿ ಮುಷ್ಕರ ಬಿಟ್ಟು ಬೇರೆ ದಾರಿ ಇಲ್ಲ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಮಾಲಿನಿ ಮೆಸ್ತಾ ಅವರು ಸರ್ಕಾರದ ವಿರುದ್ದ ಪ್ರತಿಭಟನೆಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಯಮುನಾ ಗಾಂವ್ಕರ್, ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯಾಧ್ಯಕ್ಷೆ ಲಕ್ಷ್ಮೀದೇವಿ, ಸಂಘಟನೆಯ ನಾಯಕರಾದ ಲಲಿತಾ, ಅನ್ನಪೂರ್ಣ, ಗಂಗಮ್ಮ, ಈರಮ್ಮ, ರವೀಂದ್ರ, ಅನುಸೂಯ, ಜಯಶ್ರೀ ಸೇರಿದಂತೆ ಸಾವಿರಾರು ಮಂದಿ ಭಾಗಿಯಾಗಿದ್ದರು. ಪತ್ರಿಕೆ ಮುದ್ರಣಕ್ಕೆ ಹೋಗುವ ಮುನ್ನ ಪ್ರತಿಭಟನೆ 6ನೇ ದಿನಕ್ಕೂ ಮುಂದುವರೆದಿತ್ತು. ●

ನವೆಂಬರ್ 6–ನ್ಯೂಸ್‌ಕ್ಲಿಕ್‌ನ ಮೇಲಿನ ಸುಳ್ಳು ಎಫ್.ಐ.ಆರ್.ನ ಪ್ರತಿಗಳನ್ನು ಸುಟ್ಟುಹಾಕಿ ಪ್ರತಿಭಟಿಸಲು–ಸಂಯುಕ್ತ ಕಿಸಾನ್ ಮೋರ್ಚಾ ಕರೆ

"ರೈತರ ಆಂದೋಲನದ ವಿರುದ್ಧ ಸುಳ್ಳು ಕಥನಗಳನ್ನು ಹರಡುವುದನ್ನು ನಿಲ್ಲಿಸಿ"

ರೈತರ ಆಂದೋಲನವನ್ನು ವಿದೇಶಿ ಮತ್ತು ಭಯೋತ್ಪಾದಕ ಶಕ್ತಿಗಳಿಂದ ಹಣ ಪಡೆದಿರುವ ದೇಶವಿರೋಧಿ ಎಂದು ಆರೋಪಿಸಿರುವ ನ್ಯೂಸ್‌ಕ್ಲಿಕ್ ವಿರುದ್ಧದ ಸುಳ್ಳು ಎಫ್‌ಐಆರ್ ನ್ನು ಹಿಂಪಡೆಯಬೇಕು ಮತ್ತು ನ್ಯೂಸ್‌ಕ್ಲಿಕ್ ಪತ್ರಕರ್ತರಾದ ಪ್ರಬೀರ್ ಪುರಕಾಯಸ್ಥ ಮತ್ತು ಅಮಿತ್ ಚಕ್ರವರ್ತಿ ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ 2023 ರ ನವೆಂಬರ್ 1 ರಿಂದ 5 ರವರೆಗೆ ಸುಳ್ಳು ಎಫ್‌ಐಆರ್ ಮತ್ತು ಮೋದಿ ಸರ್ಕಾರದ ಕಾರ್ಪೊರೇಟ್–ಪರ ನೀತಿಗಳ ವಿರುದ್ಧ ಗ್ರಾಮ ಮಟ್ಟದ ಅಭಿಯಾನ ಮತ್ತು ನವಂಬರ್ 6ರಂದು ಅಖಿಲ ಭಾರತ ಪ್ರತಿಭಟನಾ ದಿನದ ಆಚರಣೆಗೆ ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.) ಕರೆ ನೀಡಿದೆ.

ಎಫ್‌ಐಆರ್‌ನ ದುರುದ್ದೇಶವನ್ನು ವಿವರಿಸಲು ಮತ್ತು ಕಾರ್ಪೊರೇಟ್ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಸಹಾಯ ಮಾಡಲು ಮೋದಿ ಸರ್ಕಾರವು ರೈತರ ಅರ್ಥವ್ಯವಸ್ಥೆಯ ಕತ್ತು ಹಿಸುಕುವುದನ್ನು ತಡೆಯಲು ರೈತರನ್ನು ಒಟ್ಟುಗೂಡಿಸಲು ಕರಪತ್ರಗಳನ್ನು ಗ್ರಾಮಗಳಲ್ಲಿ ಮನೆ ಮನೆಗೆ ಹೋಗಿ ಹಂಚಲಾಗುತ್ತದೆ ಎಂದಿರುವ ಎಸ್‌ಕೆಎಂ ನವೆಂಬರ್ 6, 2023 ಅನ್ನು ಅಖಿಲ ಭಾರತ ಪ್ರತಿಭಟನಾ ದಿನವಾಗಿ ಆಚರಿಸಲಾಗುತ್ತದೆ ಮತ್ತು ಸುಳ್ಳು ಎಫ್‌ಐಆರ್‌ನ ಪ್ರತಿಗಳನ್ನು ತಹಸಿಲ್ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಸುಡಲಾಗುತ್ತದೆ ಎಂದು ಹೇಳಿದೆ.

ಚುನಾವಣೆ ನಡೆಯಲಿರುವ ಐದು ರಾಜ್ಯಗಳಲ್ಲಿ "ಕಾರ್ಪೊರೇಟ್ ಅನ್ನು ವಿರೋಧಿಸಿ, ಬಿಜೆಪಿಯನ್ನು ಶಿಕ್ಷಿಸಿ, ದೇಶವನ್ನು ಉಳಿಸಿ" ಎಂಬ ಘೋಷಣೆಗಳೊಂದಿಗೆ ಪ್ರಚಾರ ಮಾಡಲು ಕೂಡ ಎಸ್‌ಕೆಎಂ ನಿರ್ಧರಿಸಿದೆ.

ಎಸ್‌ಕೆಎಂ ಮತ್ತು ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಒಕ್ಕೂಟಗಳ ಜಂಟಿ ವೇದಿಕೆಯ ಬ್ಯಾನರ್ ಅಡಿಯಲ್ಲಿ 2023 ರ ನವೆಂಬರ್ 26ರಿಂದ 28 ರ ವರೆಗೆ ಎಲ್ಲ ರಾಜ್ಯ ರಾಜಧಾನಿಗಳಲ್ಲಿ ರಾಜಭವನದ ಮುಂದೆ ರೈತರು ಮತ್ತು ಕಾರ್ಮಿಕರ 72 ಗಂಟೆಗಳ ಹಗಲು ರಾತ್ರಿ ಧರಣಿ ಹೋರಾಟವನ್ನು ಆಯೋಜಿಸಲಾಗುವುದು ಎಂದೂ ಅದು ಹೇಳಿದೆ.

ರೈತರು ಮತ್ತು ಕಾರ್ಮಿಕರು ಈ ಪ್ರತಿಭಟನಾ ಹೋರಾಟಗಳಲ್ಲಿ ಬೃಹತ್ ಪ್ರಮಾಣದಲ್ಲಿ ಪಾಲ್ಗೊಂಡು ರೈತ ವಿರೋಧಿ, ಕಾರ್ಮಿಕ ವಿರೋಧಿ ನರೇಂದ್ರ ಮೋದಿ ಸರ್ಕಾರವನ್ನು ಜನರ ನಡುವೆ ಬಯಲಿಗೆಳೆಯಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾ ವಿನಂತಿಸಿದೆ.

ಅಭಿಯಾನದ ಕರಪತ್ರ

2023 ರ ಅಕ್ಟೋಬರ್ 20 ರಂದು ನವದೆಹಲಿಯಲ್ಲಿ ನಡೆದ ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರೀಯ ಸಭೆಯು ಐತಿಹಾಸಿಕ ರೈತರ ಹೋರಾಟದ ವಿರುದ್ಧ ನ್ಯೂಸ್‌ಕ್ಲಿಕ್ ಎಫ್‌ಐಆರ್‌ನಲ್ಲಿ ಆಧಾರರಹಿತ, ಅಪ್ರಾಮಾಣಿಕ ಮತ್ತು ಸುಳ್ಳು ಆರೋಪಗಳ ಬಗ್ಗೆ ನರೇಂದ್ರ ಮೋದಿ ನೇತೃತ್ವದ ಆರ್‌ಎಸ್‌ಎಸ್–ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿತ್ತು. ನಿಜಸಂಗತಿಯೆಂದರೆ, "ಕಆಸ್ತಿ ಹಾನಿ ಮತ್ತು ನಾಶಕ್ಕೆ ಪ್ರಚೋದನೆ" ನೀಡಿರುವುದು ನ್ಯೂಸ್‌ಕ್ಲಿಕ್ ಎಫ್‌ಐಆರ್ ಹೇಳುವಂತೆ ರೈತರ ಪ್ರತಿಭಟನೆಯಲ್ಲ, ರೈತರು ದಿಲ್ಲಿ ಪ್ರವೇಶಿಸದಂತೆ ಮತ್ತು ಪ್ರವೇಶಿಸಿದ ಮೇಲೂ ಚಳುವಳಿಗೆ ವಿಘ್ನ ತರುವಂತೆ ನಾನಾ ಪ್ರಯತ್ನಗಳನ್ನು ಮಾಡಿದ್ದು ಸರಕಾರವೇ, "ಭಾರತದ ಅರ್ಥವ್ಯವಸ್ಥೆಗೆ ನೂರಾರು ಕೋಟಿಗಳಷ್ಟು ಅಪಾರ ನಷ್ಟವನ್ನು ಉಂಟುಮಾಡುವ ಮತ್ತು ಭಾರತದಲ್ಲಿ ಆಂತರಿಕ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಗಳನ್ನು" ಉಂಟು ಮಾಡಿದ್ದು ಕೂಡ ರೈತ ಚಳುವಳಿಯಲ್ಲ, ಬದಲಿಗೆ ಕಾರ್ಪೊರೇಟ್–ಪರ ಕ್ರಮಗಳ ಮೂಲಕ ಸ್ವತಃ ಸರಕಾರವೇ ಎಂದು ಅದು ಹೇಳಿತ್ತು.

ರೈತರ ಈ ಆಂದೋಲನವು 1857 ಮತ್ತು ವಿದೇಶಿ ಲೂಟಿಯ ವಿರುದ್ಧದ ಸ್ವಾತಂತ್ರ್ಯ ಚಳುವಳಿಯಂತಹ ಬದ್ಧತೆಯುಳ್ಳ, ದೇಶಪ್ರೇಮಿ ಚಳುವಳಿ ಎಂದು ಎಫ್‌ಐಆರ್‌ನಲ್ಲಿ ಹೇಳಿರುವುದನ್ನು ಸಂಪೂರ್ಣವಾಗಿ ನಿರಾಕರಿಸುತ್ತ ಎಸ್.ಕೆ.ಎಂ ಹೇಳಿದೆ. ಕೃಷಿಗೆ ಸರ್ಕಾರದ ಬೆಂಬಲವನ್ನು ಹಿಂತೆಗೆದುಕೊಳ್ಳಲು ಮತ್ತು ಕೃಷಿ, ಮಂಡಿಗಳು ಮತ್ತು ಆಹಾರ ವಿತರಣೆಯನ್ನು ಅದಾನಿ, ಅಂಬಾನಿ, ಟಾಟಾ, ಕಾರ್ಗಿಲ್, ಪೆಪ್ಸಿ, ವಾಲ್ಮಾರ್ಟ್, ಬೇಯರ್, ಅಮೆಜಾನ್ ಮತ್ತು ಇತರರ ನೇತೃತ್ವದ ಕಾರ್ಪೊರೇಟ್‌ಗಳಿಗೆ ಹಸ್ತಾಂತರಿಸುವ 3 ಕೃಷಿ ಕಾನೂನುಗಳ ನೀಚ ಯೋಜನೆಯನ್ನು ಅದು ಸರಿಯಾಗಿಯೇ ಗ್ರಹಿಸಿದೆ ಎಂದು ಈ ಅಭಿಯಾನಕ್ಕೆಂದು ಎಸ್.ಕೆ.ಎಂ. ಪ್ರಕಟಿಸಿರುವ ಕರಪತ್ರ ಹೇಳಿದೆ.

ಕರಪತ್ರ ಮುಂದುವರೆದು "3 ಕೃಷಿ ಕಾನೂನುಗಳು ದೇಶದ ಮೇಲೆ ಹೇರಲ್ಪಟ್ಟವು, ಕಾಂಟ್ರಾಕ್ಟ್ ಕಾಯ್ದೆಯು ಕಾರ್ಪೊರೇಟ್ ಗಳು ಖರೀದಿಸುವ ಬೆಳೆಗಳನ್ನೇ ಬೆಳೆಯಲು, ದುಬಾರಿ ಲಾಗುವಾಡುಗಳನ್ನು(ಬೀಜಗಳು, ರಸಗೊಬ್ಬರಗಳು, ಕೀಟನಾಶಕಗಳು, ಇಂಧನ, ನೀರಾವರಿ, ತಂತ್ರಜ್ಞಾನ, ಸೇವೆಗಳು) ಖರೀದಿಸಲು ಮತ್ತು ತಮ್ಮ ಬೆಳೆಗಳನ್ನು ಕಾರ್ಪೊರೇಟ್‌ಗಳಿಗೆ ಮಾರಲು ಬದ್ಧಗೊಳಿಸಿತು; ಮಂಡಿಕಾಯ್ದೆ ಆನ್‌ಲೈನ್ ನೆಟ್‌ವರ್ಕಿಂಗ್ ಮತ್ತು ಖಾಸಗಿ ಹಗೇವುಗಳೊಂದಿಗೆ ಕಡಿಮೆ ಬೆಲೆಯಲ್ಲಿ ಬೆಳೆ ವ್ಯಾಪಾರದಲ್ಲಿ ಪ್ರಾಬಲ್ಯ ಸಾಧಿಸಲು ದೊಡ್ಡ ಕಂಪನಿಗಳ ನಂಟಿಗೆ ಅವಕಾಶ ಕೊಡುವುದಕ್ಕಾಗಿ ಸರ್ಕಾರಿ ಕಾರ್ಯಾಚರಣೆ, ಸರ್ಕಾರಿ ಸಂಗ್ರಹಣೆ ಮತ್ತು ಬೆಲೆ ನಿಗದಿಯನ್ನು (ಕನಿಷ್ಟ ಬೆಂಬಲ ಬೆಲೆ)) ನಿಷೇಧಿಸಿತು. ಅಗತ್ಯ ಸರಕುಗಳ ತಿದ್ದುಪಡಿ ಕಾಯಿದೆಯು ಕಳ್ಳದಾಸ್ತಾನುಗಾರರಿಗೆ ಮತ್ತು ಕಾಳಸಂತೆಕೋರರಿಗೆ ಸ್ವಾತಂತ್ರ್ಯವನ್ನು ನೀಡಿತು" ಎಂದು ವಿಶ್ಲೇಷಿಸಿದೆ.

"ಭಾರತದ ರೈತರು ಈ ಕುತಂತ್ರವನ್ನು ಅರಿತುಕೊಂಡರು. ಭಾರತದ ಜನರನ್ನು ಆಹಾರ ಭದ್ರತೆಯಿಂದ ವಂಚಿತಗೊಳಿಸುವ, ರೈತರನ್ನು ದರಿದ್ರರಾಗಿಸುವ, ಕಾರ್ಪೊರೇಟ್‌ಗಳ ಅನುಕೂಲಕ್ಕೆ ತಕ್ಕಂತೆ ಬೆಳೆ ಪದ್ಧತಿಯನ್ನು ಬದಲಾಯಿಸುವ ಮತ್ತು ಭಾರತದ ಆಹಾರ ಸಂಸ್ಕರಣಾ ಮಾರುಕಟ್ಟೆಗೆ ಬಹುರಾಷ್ಟ್ರೀಯ ಕಂಪನಿಗಳ ಮುಕ್ತ ಪ್ರವೇಶಕ್ಕೆ ಅವಕಾಶ ಕಲ್ಪಿಸುವ ಆರ್‌ಎಸ್‌ಎಸ್–ಬಿಜೆಪಿ –ಕಾರ್ಪೊರೇಟ್‌ಗಳ ಯೋಜನೆಯನ್ನು ಬಯಲಿಗೆಳೆದರು. ಅವರು ಒಂದಾಗಿ ಎದ್ದು ನಿಂತರು, ಪ್ರಕ್ಷುಬ್ಧ ಸಾಗರದಲ್ಲಿ ಅಲೆಯಂತೆ ಎದ್ದು ಬಂದರು, ದಿಲ್ಲಿಯನ್ನು ಸುತ್ತುವರೆದರು ಮತ್ತು ಮೊಂಡು ಮೋದಿ ಸರ್ಕಾರ ಮಣಿಯುವಂತೆ ಮಾಡಿದರು"ಎಂದು ಈ ಕರಪತ್ರ ನೆನಪಿಸುತ್ತಿದೆ.

"ಈ ಪ್ರಕ್ರಿಯೆಯಲ್ಲಿ ರೈತರು ಜಲಫಿರಂಗಿ, ಅಶ್ರುವಾಯು, ಶೆಲ್ ದಾಳಿ, ಬೃಹತ್ ಕಂಟೈನರ್‌ಗಳೊಂದಿಗೆ ರಸ್ತೆ ತಡೆ, ಆಳವಾಗಿ ಅಗೆದ ರಸ್ತೆ ಗುಂಡಿಗಳು, ಲಾಠಿ ಪ್ರಹಾರ, ಚಳಿ ಮತ್ತು ಬಿಸಿಲ ಬೇಗೆಯನ್ನು ಎದುರಿಸಿದರು. 13 ತಿಂಗಳುಗಳಲ್ಲಿ ಅವರು 732 ಹುತಾತ್ಮರ ಬಲಿ ನೀಡಿದರು. ಅವರು ಭಾರತದ ಅತ್ಯಂತ ಅಸಹಾಯಕ ಮತ್ತು ವಂಚಿತ ವರ್ಗಗಳಿಗೆ ಮತ್ತು ಮಾಧ್ಯಮಗಳು ಮತ್ತು ನ್ಯಾಯಾಲಯಗಳಲ್ಲಿ ನ್ಯಾಯಕ್ಕೆ ದನಿ ನೀಡಿದರು. ಇದು ಸಾಮ್ರಾಜ್ಯಶಾಹಿ ಶೋಷಕರ ಹಿತಾಸಕ್ತಿಗಳನ್ನು ಪೂರೈಸುವ ಒಂದು ಫ್ಯಾಸಿಸ್ಟ್ ಸರ್ಕಾರದ ದಮನವನ್ನೂ ಎದುರಿಸಿದ ಒಂದು ಅತ್ಯುನ್ನತ ಗುಣಮಟ್ಟದ ದೇಶಪ್ರೇಮಿ ಆಂದೋಲನವಾಗಿತ್ತು" ಎಂದಿರುವ ಎಸ್.ಕೆ.ಎಂ., "ಭಾರತೀಯ ರೈತರು 140 ಕೋಟಿ ಜನರಿಗೆ ಉಣಬಡಿಸುತ್ತಾರೆ. ಅವರು 68.6% ಜನಸಂಖ್ಯೆಗೆ ಜೀವನಾಧಾರ ಮತ್ತು ಕೆಲಸವನ್ನು ಒದಗಿಸುತ್ತಾರೆ. ಕೃಷಿ ಮೂಲಸೌಕರ್ಯಗಳಲ್ಲಿ ಸರ್ಕಾರದ ಹೂಡಿಕೆ, ಲಾಭದಾಯಕ ಕೃಷಿಗೆ ಉತ್ತೇಜನ, ಹಳ್ಳಿಯ ಬಡವರ ಜೀವನದ ಅಭಿವೃದ್ಧಿ ಮತ್ತು ಆಧುನಿಕ ಆಹಾರ ಸಂಸ್ಕರಣೆ, ಮಾರುಕಟ್ಟೆ ಮತ್ತು ಗ್ರಾಹಕ ಜಾಲವನ್ನು ಸುಗಮಗೊಳಿಸುವುದು ಮತ್ತು ರೈತ–ಕಾರ್ಮಿಕ ಸಹಕಾರ ಸಂಘಗಳ ಸಾಮೂಹಿಕ ಮಾಲೀಕತ್ವ ಮತ್ತು ನಿಯಂತ್ರಣದಡಿಯಲ್ಲಿ ಸುರಕ್ಷಿತಗೊಳಿಸುವುದು ಜನರ ಆರ್ಥಿಕತೆಯಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತರುತ್ತದೆ. ಇದು ಭಾರತವನ್ನು ಮತ್ತು ಭಾರತದ ಜನರನ್ನು ಶ್ರೀಮಂತರನ್ನಾಗಿ ಮಾಡುತ್ತದೆ" ಎಂದು ಹೇಳಿದೆ.

ಆದಾಗ್ಯೂ, ಕಾರ್ಪೊರೇಟ್ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಸೇವೆಯಲ್ಲಿ, ಮೋದಿ ಸರ್ಕಾರವು ರೈತರ ಮೇಲೆ ಮತ್ತೊಂದು ದಾಳಿಯನ್ನು ಪ್ರಾರಂಭಿಸಿದೆ. ಅದು ಪ್ರಜಾಸತ್ತಾತ್ಮಕವಲ್ಲದ ಕಾನೂನಾದ ಯು.ಎ.ಪಿ.ಎ.ಯನ್ನು, ನಾಗರಿಕರನ್ನು ಭಯೋತ್ಪಾದಕರು ಎಂದು, ಆಮೂಲಕ ನಿಸ್ಸಂಶಯವಾಗಿ ರಾಷ್ಟ್ರ–ವಿರೋಧಿಗಳೆಂದು ಆರೋಪಿಸಲು, ಆ ಆರೋಪವನ್ನು ದಶಕಗಳ ವರೆಗೂ ಸಾಬೀತುಪಡಿಸದೆ, ಜಾಮೀನು ಸಹ ನಿರಾಕರಿಸಲು ಸರ್ಕಾರಕ್ಕೆ ಅವಕಾಶ ನೀಡುವ ಕಾಯ್ದೆಯನ್ನು ಬಳಸಿದೆ ಎಂದು ಎಸ್.ಕೆ.ಎಂ.ನ ಈ ಅಭಿಯಾನದ ಕರಪತ್ರ ಹೇಳುತ್ತದೆ.

ರೈತರ ಆಂದೋಲನವನ್ನು ಬೆಂಬಲಿಸಿ ಬರೆದ ನ್ಯೂಸ್‌ಕ್ಲಿಕ್ ಮಾಧ್ಯಮ ಸಂಸ್ಥೆಯ ಮೇಲೆ ಅವರು ಯುಎಪಿಎಯನ್ನು

ಪುಟ 14 ಕ್ಕೆ

ಗಾಜಾದಲ್ಲಿ ನರಮೇಧದ ಆಕ್ರಮಣವನ್ನು ನಿಲ್ಲಿಸಿ: ಸಿಪಿಐ(ಎಂ)–ಸಿಪಿಐ ಜಂಟಿ ಆಗ್ರಹ

"ಸಾಮ್ರಾಜ್ಯಶಾಹಿಯ ಅಡಿಯಾಳು ಮಿತ್ರತ್ವದಿಂದಾಗಿ ವಿಶ್ವಸಂಸ್ಥೆಯ ಕದನವಿರಾಮ ನಿರ್ಣಯದಲ್ಲಿ ಗೈರು ಹಾಜರಿ"

ಗಾಜಾದಲ್ಲಿ ನಡೆಯುತ್ತಿರುವ ಇಸ್ರೇಲಿ ದಾಳಿಯಲ್ಲಿ "ನಾಗರಿಕರ ರಕ್ಷಣೆ ಮತ್ತು ಕಾನೂನು ಹಾಗೂ ಮಾನವೀಯ ಜವಾಬ್ದಾರಿಗಳನ್ನು ಎತ್ತಿಹಿಡಿಯುವುದು" ಎಂಬ ಮಾನವೀಯ ದೃಷ್ಟಿಯ ಕದನ ವಿರಾಮಕ್ಕೆ ಕರೆ ನೀಡುವ ನಿರ್ಣಯವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಭಾರೀ ಬೆಂಬಲದೊಂದಿಗೆ ಅಂಗೀಕರಿಸಿದೆ. ಆದರೆ ಭಾರತ ಇದರಲ್ಲಿ ಗೈರು ಹಾಜರಾಯಿತು ಎಂಬುದು ಆಘಾತಕರ ಸಂಗತಿ ಎಂದು ಸಿಪಿಐ(ಎಂ) ಮತ್ತು ಸಿಪಿಐ ಒಂದು ಜಂಟಿ ಹೇಳಿಕೆಯಲ್ಲಿ ಖೇದ ವ್ಯಕ್ತಪಡಿಸಿವೆ.

ಭಾರೀ ಬೆಂಬಲದೊಂದಿಗೆ ಅಂಗೀಕರಿಸಿದ ಒಂದು ನಿರ್ಣಯದಲ್ಲಿ ಭಾರತವು ಗೈರುಹಾಜರಾಗಿರುವುದು, ಎಷ್ಟರ ಮಟ್ಟಿಗೆ ಭಾರತದ ವಿದೇಶಾಂಗ ಧೋರಣೆಯು ಯುಎಸ್ ಸಾಮ್ರಾಜ್ಯಶಾಹಿಯ ಅಡಿಯಾಳು ಮಿತ್ರತ್ವದಿಂದ ಮತ್ತು ಯುಎಸ್–ಇಸ್ರೇಲ್–ಭಾರತದ ನಂಟನ್ನು ಕ್ರೋಢೀಕರಿಸುವ ಮೋದಿ ಸರ್ಕಾರದ ಕ್ರಮಗಳಿಂದ ರೂಪುಗೊಳ್ಳುತ್ತಿದೆ ಎಂಬುದನ್ನು ತೋರಿಸುತ್ತದೆ. ಇದು ಪ್ಯಾಲೇಸ್ತಿನಿಯನ್ ಗುರಿಸಾಧನೆಗೆ ಭಾರತದ ದೀರ್ಘಕಾಲದ ಬೆಂಬಲಕ್ಕೆ ತದ್ವಿರುದ್ಧವಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ ಸಹಿಮಾಡಿರುವ ಜಂಟಿ ಹೇಳಿಕೆ ಅಭಿಪ್ರಾಯ ಪಟ್ಟಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಈ ನಿರ್ಣಯವನ್ನು ಅಂಗೀಕರಿಸುತ್ತಿದ್ದಂತೆ, ಇಸ್ರೇಲ್ ಗಾಜಾ ಪಟ್ಟಿಯಲ್ಲಿ ತನ್ನ ನರಹಂತಕ ವಾಯು ಮತ್ತು ಭೂ ದಾಳಿಯನ್ನು ಹೆಚ್ಚಿಸಿದೆ. ಇದು 22ಲಕ್ಷ ಪ್ಯಾಲೆಸ್ಟೀನಿಯನ್ನರಿಗೆ ನೆಲೆಯಾಗಿರುವ ಗಾಜಾದಲ್ಲಿ ಎಲ್ಲಾ ಸಂವಹನಗಳನ್ನು ಕಡಿದು ಹಾಕಿದೆ.

ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ ಭಾರೀ ಬೆಂಬಲ ಪಡೆದ ಆದೇಶವನ್ನು ಗೌರವಿಸಿ ತಕ್ಷಣವೇ ಕದನ ವಿರಾಮ ನಡೆಯಬೇಕು. 1967– ಪೂರ್ವದ ಗಡಿಗಳೊಂದಿಗೆ, ಪೂರ್ವ ಜೆರುಸಲೇಂನ್ನು ಪ್ಯಾಲೆಸ್ತೀನಿನ ರಾಜಧಾನಿಯಾಗುಳ್ಳ 2–ಪ್ರಭುತ್ವಗಳ ಭದ್ರತಾ ಸಮಿತಿಯ ಆದೇಶವನ್ನು ಜಾರಿಗೆ ತರಲು ವಿಶ್ವಸಂಸ್ಥೆ ತನ್ನನ್ನು ತಾನೇ ಪುನಶ್ಚೇತನಗೊಳಿಸಬೇಕು ಎಂದು ಜಂಟಿ ಹೇಳಿಕೆ ಆಗ್ರಹಿಸಿದೆ.

ಸೀತರಾಮ ಯೆಚೂರಿಯವರಿಗೆ 'ಪ್ರಭುತ್ವ–ಪ್ರಾಯೋಜಿತ ದಾಳಿ'ಯ ಆಪಲ್ ಅಲರ್ಟ್: ಇದು ಪ್ರಜಾಪ್ರಭುತ್ವವೋ, ಗೂಢಚಾರಿ ಪ್ರಭುತ್ವವೋ– ಪ್ರಧಾನಿಗಳಿಗೆ ಪತ್ರ

ಅಕ್ಟೋಬರ್ 30 ರ ರಾತ್ರಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿಯವರಿಗೆ ಆಪಲ್ ನಿಂದ "ನೀವು ಪ್ರಭುತ್ವ ಪ್ರಾಯೋಜಿತ ದಾಳಿಕಾರರಿಗೆ ಗುರಿಯಾಗಿದ್ದೀರಿ ಎಂದು ಆಪಲ್ ಭಾವಿಸುತ್ತದೆ, ಅವರು ನಿಮ್ಮ ಆಪಲ್ ಐ.ಡಿ.ಯೊಂದಿಗೆ ಸಂಯೋಜಿತವಾಗಿರುವ ಐ ಫೋನ್ ಗೆ ದೂರದಿಂದಲೇ ಭಂಗ ಒಡ್ಡಲು ಪ್ರಯತ್ನಿಸುತ್ತಿದ್ದಾರೆ" ಎಂಬ ಒಂದು ಎಚ್ಚರಿಕೆ ಸಂದೇಶ ಬಂದಿತ್ತು.

ಈ ಬಗ್ಗೆ ಅವರು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು "ಇದು ಭಾರತದ ಸಂವಿಧಾನವು ತನ್ನ ಎಲ್ಲಾ ನಾಗರಿಕರಿಗೆ ಖಾತರಿಪಡಿಸಿರುವ ಮೂಲಭೂತ ಹಕ್ಕುಗಳ ನೇರ ಉಲ್ಲಂಘನೆಯಾಗಿದೆ. ಪ್ರಜಾಪ್ರಭುತ್ವಕ್ಕೆ ಕಣ್ಗಾವಲು ಪ್ರಭುತ್ವ ತದ್ವಿರುದ್ಧವಾಗಿರುವಂತದ್ದು" ಎಂದು ಹೇಳಿದ್ದಾರೆ.

"ನನ್ನ ಕೆಲಸವು ತೆರೆದ ಪುಸ್ತಕವಾಗಿದೆ. ಅದರಲ್ಲಿ ಮರೆಮಾಚಲು ಏನೂ ಇಲ್ಲ. ಆದ್ದರಿಂದ, ಇಂತಹ ಗೂಢಚಾರಿಕೆ ಮತ್ತು ನಾನು ಬಳಸುವ ಉಪಕರಣಗಳನ್ನು ದೂರದಿಂದಲೇ ಒಳಗೆ ಸೇರಿಸಿ, ನನ್ನ ಸಾಧನಗಳಲ್ಲಿ ಕೆಲವು ಮಾಹಿತಿಯನ್ನು ದೂರದಿಂದಲೇ ನೆಡುವುದೆಂದರೆ, ನಂತರ ಅಂತಹ ನೆಟ್ಟ ಸುಳ್ಳು ವಸ್ತು ಮಾಹಿತಿಗಳ ಆಧಾರದ ಮೇಲೆ ನನ್ನನ್ನು ದೋಷಿಯಾಗಿಸುವ ಉದ್ದೇಶದಿಂದಲೇ ಮಾಡಲಾಗುತ್ತಿದೆ ಎಂದು ಅರ್ಥೈಸಬಹುದು. ನಿಮ್ಮ ನೇತೃತ್ವದ ಈ ಸರ್ಕಾರದಿಂದ ಆಗುತ್ತಿರುವ ಕೇಂದ್ರೀಯ ಸಂಸ್ಥೆಗಳ ಸಂಪೂರ್ಣ ದುರುಪಯೋಗವನ್ನು ಗಮನಿಸಿದರೆ, ಅಂತಹ ಸಾಧ್ಯತೆಯು ತುಂಬಾ ನಿಜವಾಗಿದೆ" ಎಂದು ಯೆಚೂರಿ ತಮ್ಮ ಪತ್ರದಲ್ಲಿ ಬರೆದಿದ್ದಾರೆ.

ಮುಂದುವರೆದು 'ನೀವು ಭಾರತದ ಸಂವಿಧಾನವನ್ನು ಎತ್ತಿಹಿಡಿಯುವ ಪ್ರಮಾಣ ವಚನ ಸ್ವೀಕರಿಸಿ ಪ್ರಧಾನ ಮಂತ್ರಿ ಹುದ್ದೆಗೇರಿರುವಿರಿ. ಆದರೆ ಅದರ ಬದಲು, ಪ್ರಜಾಪ್ರಭುತ್ವದ ಮತ್ತು ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕುಗಳ ಸಂಪೂರ್ಣ ಧ್ವಂಸ ನಡೆಯುತ್ತಿದೆ. ಇದು ಸ್ವೀಕಾರಾರ್ಹವಲ್ಲ" ಎನ್ನುತ್ತಾ ಯೆಚೂರಿಯವರು ಈ ವಿಷಯದ ಬಗ್ಗೆ ಪ್ರಧಾನ ಮಂತ್ರಿಗಳು ಸ್ಪಂದಿಸುತ್ತಾರೆ ಎಂದು ನಿರೀಕ್ಷಿಸುವುದಾಗಿ ಪತ್ರ ಬರೆದಿದ್ದಾರೆ.

ಗಾಜಾ ಮೇಲೆ ಇಸ್ರೇಲ್ ಯುದ್ಧ: ಕೋಮುವಾದಿ ನಿಲುವು

ಕೇರಳದ ಚರ್ಚೊಂದರ ಬಳಿ ನಡೆದ ಸ್ಫೋಟದ ಪ್ರಕರಣ ಮತ್ತು ಇಸ್ರೇಲ್ – ಹಮಾಸ್ ನಡುವೆ ನಡೆಯುತ್ತಿರುವ ಯುದ್ಧವನ್ನು ತನ್ನ ಕೋಮುವಾದಿ ಉದ್ದೇಶಗಳಿಗೆ ಬಳಸಿ ಭಾರತೀಯರ ಮನಸ್ಸಿನಲ್ಲಿ ಇಸ್ಲಾಮೋಫೋಬಿಯಾವನ್ನೂ ಬೆಳೆಸಲು ಪ್ರಯತ್ನಿಸಲಾಗುತ್ತಿದೆ! ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್‌ರವರ ಹೇಳಿಕೆ ಅಂತಹ ಪ್ರಯತ್ನವಾಗಿದೆ. ಸಂಘ ಪರಿವಾರಕ್ಕೆ ಇಸ್ರೇಲ್ ಆದರ್ಶವಾಗಿರುವುದೇ ಯಾಕೆ?

ಪ್ರಕಾಶ್ ಕಾರತ್

ಕೇರಳದ ಕಲಮಶೇರಿಯಲ್ಲಿ ಕ್ರೈಸ್ತ ಗುಂಪೊಂದರ ಧಾರ್ಮಿಕ ಕಾರ್ಯಕ್ರಮದ ವೇಳೆ ನಡೆದ ಬಾಂಬ್ ಸ್ಫೋಟಗಳ ಪ್ರಕರಣವನ್ನು ಕೋಮುವಾದೀಕರಿಸಲು ಪ್ರಯತ್ನಿಸುವ ಮೂಲಕ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಗಾಜಾ ಮೇಲಿನ ಇಸ್ರೇಲ್ ಯುದ್ಧದ ಕುರಿತ ಬಿಜೆಪಿ–ಆರ್‌ಎಸ್‌ಎಸ್ ವಲಯದ ವಿಷಮಯ ಪ್ರಚಾರದ ಸ್ವರೂಪವನ್ನು ಬಹಿರಂಗಪಡಿಸಿದ್ದಾರೆ.

ಜಿಹಾದಿ ಶಕ್ತಿಗಳು ಕ್ರೈಸ್ತ ಸಮಾವೇಶವನ್ನು ಟಾರ್ಗೆಟ್ ಮಾಡಿವೆ ಎಂದು ಸ್ಫೋಟಗಳು ನಡೆದ ಬೆನ್ನಲ್ಲೇ ಚಂದ್ರಶೇಖರ್ ಹೇಳಿದರು. ಇದಕ್ಕೆ ಕೇರಳ ಸರಕಾರವೇ ಹೊಣೆ ಎಂದು ಅವರು ಆರೋಪಿಸಿದರು. ಸಮಾವೇಶವೊಂದರಲ್ಲಿ ವರ್ಚುವಲ್ ಭಾಷಣ ಮಾಡಲು ಹಮಾಸ್ ನಾಯಕರೊಬ್ಬರಿಗೆ ಸರಕಾರ ಅವಕಾಶ ನೀಡಿತ್ತು. ಅದರ ಪರಿಣಾಮವಾಗಿ ಅದಾದ 24 ಗಂಟೆಯೊಳಗೆ ಬಾಂಬ್ ಸ್ಫೋಟ ನಡೆದಿದೆ ಎಂಬುದು ಚಂದ್ರಶೇಖರ್ ಅಂಬೋಣವಾಗಿದೆ. ಸಿಪಿಐ (ಎಂ) ಮತ್ತು ಕಾಂಗ್ರೆಸ್ "ಓಲೈಕೆ ರಾಜಕಾರಣ" ಮಾಡುತ್ತಿದೆ ಎಂದೂ ಕೇಂದ್ರ ಮಂತ್ರಿ ಆರೋಪಿಸಿದ್ದಾರೆ. ಹಮಾಸ್ ನಾಯಕನಿಗೆ ಭಾಷಣ ಮಾಡಲು 'ಅವಕಾಶ ಕೊಟ್ಟ' ಪ್ರಶ್ನೆಯೇ ಉದ್ಭವಿಸುವುದಿಲ್ಲ. ಯಾಕೆಂದರೆ ಹಮಾಸ್‌ನ ಮಾಜಿ ಮುಖ್ಯಸ್ಥ ಇಸ್ಮಾಯಿಲ್ ಹನಿಯೆ ಅವರ ಆ ನಿರ್ದಿಷ್ಟ ಭಾಷಣ ಇಂಟರ್‌ನೆಟ್‌ನಲ್ಲಿ ಲಭ್ಯವಿದೆ ಹಾಗೂ ಯಾರು ಬೇಕಾದರೂ ಅದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಅಲ್ಲದೆ, ಚಂದ್ರಶೇಖರ್ ಮತ್ತು ಅವರ ಪಕ್ಷ ಹೇಳುವಂತೆ ಹಮಾಸ್‌ಅನ್ನು ಒಂದು ನಿಯೋಜಿತ ಭಯೋತ್ಪಾದಕ ಸಂಘಟನೆಯೆಂದು ವಿಶ್ವ ಸಂಸ್ಥೆ ಘೋಷಿಸಿಲ್ಲ.

ಚಂದ್ರಶೇಖರ್‌ರ ದುರಾದೃಷ್ಟಕ್ಕೆ, ಸ್ಫೋಟ ಸಂಭವಿಸಿದ ಕೆಲವೇ ಗಂಟೆಗಳಲ್ಲಿ ಪೊಲೀಸರ ಮುಂದೆ ಶರಣಾದ ವ್ಯಕ್ತಿಯೊಬ್ಬ ದಾಳಿಗೆ ತಾನೇ ಹೊಣೆಯೆಂದು ಹೇಳಿದ್ದಾನೆ. ಆತ ಚಿಕ್ಕ ಕ್ರೈಸ್ತ ಗುಂಪಿನ ಭಿನ್ನಮತೀಯ ಸದಸ್ಯನಂತೆ ಕಾಣುತ್ತಾನೆ. ಇದರಿಂದಾಗಿ ಚಂದ್ರಶೇಖರ್ ಹಾಸ್ಯಾಸ್ಪದರಾದರು. ಆದರೆ, ಅವರು ಮಾಡಿದ ಟಿಪ್ಪಣಿಗಳ ವಿಷಕಾರಿ ಅಂಶಗಳನ್ನು ನಿರ್ಲಕ್ಷಿಸುವಂತಿಲ್ಲ. ಯಾಕೆಂದರೆ ಅದು ಬಿಜೆಪಿ ಮತ್ತು ಹಿಂದೂತ್ವ ಶಕ್ತಿಗಳೊಂದಿಗೆ ಗುರುತಿಸಿಕೊಂಡಿರುವ ಸಾಮಾಜಿಕ ಮಾಧ್ಯಮ ಗುಂಪುಗಳು ಮಾಡುತ್ತಿರುವಂಥ ಪ್ಯಾಲೆಸ್ತೀನ್–ವಿರೋಧಿ ಕೋಮುವಾದಿ ಪ್ರಚಾರದಂತೇ ಇದೆ. ಅವರು ಎಲ್ಲಾ ಪ್ಯಾಲೆಸ್ತೀನಿಯರನ್ನು ಜಿಹಾದಿಗಳು ಮತ್ತು ಹಮಾಸ್ ಅನ್ನು ಭಯೋತ್ಪಾದಕ ಸಂಘಟನೆ ಎಂದು ಹಣೆಪಟ್ಟಿ ಕಟ್ಟುತ್ತಾರೆ. ಇಸ್ರೇಲ್ ಅನುಭವಿಸುತ್ತಿರುವ ಹಿಂಸಾಚಾರದಂತೆ, ಭಾರತದಲ್ಲಿ ಮುಸ್ಲಿಮರಿಂದ ಇದೇ ರೀತಿಯ ಅಪಾಯಗಳನ್ನು ಎದುರಿಸಬೇಕಾದೀತೆಂದು ಅವರು ಹಿಂದೂಗಳಿಗೆ ಎಚ್ಚರಿಕೆ ನೀಡುತ್ತಾರೆ. ಪ್ಯಾಲೆಸ್ತೀನಿಯರು ಮತ್ತು ಹಮಾಸ್ ನಡೆಸಿದ ಹಿಂಸಾಚಾರಗಳೆಂದು ಕಪೋಲಕಲ್ಪಿತ ವರದಿಗಳನ್ನು ವ್ಯಾಪಕವಾಗಿ ಹರಿಬಿಡಲಾಗುತ್ತಿದೆ. ಇಸ್ಲಾಮೋಫೋಬಿಯಾವನ್ನು (ಇಸ್ಲಾಂ ಕುರಿತ ಭೀತಿ) ಹರಡುವುದು ಇದರ ಉದ್ದೇಶವಾಗಿದೆ. ಇಸ್ಲಾಮಿಕ್ ಭಯೋತ್ಪಾದನೆಯನ್ನು ಎದುರಿಸುವಲ್ಲಿ ಇಸ್ರೇಲ್ ಒಂದು ಆದರ್ಶ ಎಂದು ಬಿಂಬಿಸಲಾಗುತ್ತಿದೆ.

ಈ ಕೋಮುವಾದಿ ಲೋಕದೃಷ್ಟಿಯು ಒಂದು ಸ್ವತಂತ್ರ ದೇಶಕ್ಕಾಗಿ ಪ್ಯಾಲೆಸ್ತೀನಿಯರು ನಡೆಸುತ್ತಿರುವ ಹೋರಾಟವನ್ನು ಒಂದು ಮುಸ್ಲಿಂ ವಿಷಯವನ್ನಾಗಿ ಕಾಣುತ್ತದೆ ಹಾಗೂ ಪ್ಯಾಲೆಸ್ತೀನಿಯರನ್ನು ಅವರದೇ ಮಾತೃಭೂಮಿಯಿಂದ ಜನಾಂಗೀಯವಾಗಿ ನಾಶ ಮಾಡುವ ಝಿಯೋನಿಸ್ಟ್ ಯೋಜನೆಯನ್ನು ಬೆಂಬಲಿಸುತ್ತದೆ. ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವ ಪ್ಯಾಲೆಸ್ತೀನಿಯರನ್ನು 'ಭಯೋತ್ಪಾದಕರು' ಎಂದು ಯೆಹೂದಿ ಉಗ್ರಗಾಮಿಗಳು ಮತ್ತು ಇಸ್ರೇಲ್ ಪ್ರಭುತ್ವ ವರ್ಣಿಸುವ ಪದಪುಂಜವನ್ನೇ ಆರೆಸ್ಸೆಸ್–ಬಿಜೆಪಿ ಬಳಸುತ್ತದೆ. ಹಿಂದೂತ್ವದ ಸಂಸ್ಥಾಪಕ ವಿ.ಡಿ. ಸಾವರ್ಕರ್ ದಿನಗಳಿಂದಲೂ ಹಿಂದು ಬಲಪಂಥೀಯ ರಾಷ್ಟ್ರೀಯವಾದಿಗಳು ಸದಾ ಝಿಯೋನಿಸಂ ಮತ್ತು ಅರಬ್ಬರು ಹಾಗೂ ಪ್ಯಾಲೆಸ್ತೀನಿಯರನ್ನು ಓಡಿಸಿ ಇಸ್ರೇಲಿ ಪ್ರಭುತ್ವ ಸ್ಥಾಪಿಸುವುದನ್ನು ಬೆಂಬಲಿಸುತ್ತಾ ಬಂದಿದ್ದಾರೆ.

ಮೋದಿ ಸರ್ಕಾರದ ಧೋರಣೆಗೆ ಆಧಾರ

ಈ ಹಿಂದೂತ್ವ ವಿಶ್ವದೃಷ್ಟಿಯೇ ಇಂದು ಮೋದಿ ಸರಕಾರದ ನಿಲುವನ್ನು ನಿರ್ದೇಶಿಸುತ್ತಿದೆ. ಇಸ್ರೇಲನ್ನು ಪೂರ್ಣವಾಗಿ ಬೆಂಬಲಿಸುವಲ್ಲಿ ಹಾಗೂ ಗಾಜಾ ಮೇಲಿನ ಯುದ್ಧದಲ್ಲಿ ಸಮರವಿರಾಮಕ್ಕೆ ನೀಡುವ ಕರೆಯನ್ನು ವಿರೋಧಿಸುವಲ್ಲಿ ಜೋ ಬೈಡೆನ್, ರಿಷಿ ಸುನಕ್ ಮತ್ತು ಒಲಾಫ್ ಷೋಲ್ಸ್ ಅವರೊಂದಿಗೆ ನರೇಂದ್ರ ಮೋದಿ ಕೈಜೋಡಿಸಿದ್ದಾರೆ. 'ಮಾನವೀಯ ನೆಲೆಯ ಕದನವಿರಾಮ'ಕ್ಕೆ ಕರೆ ನೀಡುವ ವಿಶ್ವ ಸಂಸ್ಥೆ ಮಹಾಧಿವೇಶನದ ಗೊತ್ತುವಳಿಯ ಮತದಾನದಲ್ಲಿ ಭಾಗವಹಿಸದೆ ಭಾರತ ದೂರವುಳಿದಿದೆ. ಹೀಗೆ ಮಾಡುವ ಮೂಲಕ ಅದು ಭೌಗೋಳಿಕ ದಕ್ಷಿಣದ ನಿಲುವಿನಿಂದ ದೂರ ಸರಿದಂತಾಗಿದೆ ಮತ್ತು ಇಸ್ರೇಲ್‌ಗೆ ಅಂಥ ಬೆಂಬಲ ನೀಡುವ ಪಾಶ್ಚಿಮಾತ್ಯರೊಂದಿಗೆ ಶಾಮೀಲಾದಂತಾಗಿದೆ. ವಿಶ್ವ ಸಂಸ್ಥೆ ಗೊತ್ತುವಳಿಯು 120 ದೇಶಗಳ ಬೆಂಬಲದಿಂದ ಅಂಗೀಕಾರವಾಗಿದೆ ಎನ್ನುವುದು ಗಮನಾರ್ಹ.

ಭಾರತ ಸರಕಾರದ ದಿವ್ಯ ಮೌನ

ಗಾಜಾ ಮೇಲಿನ ಬರ್ಬರ ಆಕ್ರಮಣ ಒಂದೊಂದಾಗಿಯೇ ಅನಾವರಣಗೊಳ್ಳುತ್ತಿರುವಾಗ ಇಸ್ರೇಲ್‌ನ ಸಶಸ್ತ್ರ ಪಡೆಗಳು ನಡೆಸುತ್ತಿರುವ ಯುದ್ಧಾಪರಾಧಗಳ ಬಗ್ಗೆ ಭಾರತ ಸರ್ಕಾರ ದಿವ್ಯ ಮೌನ ತಳೆದಿದೆ. ನೂರಾರು ನಾಗರಿಕರ ಸಾವಿಗೆ ಕಾರಣವಾದ, ಉತ್ತರ ಗಾಜಾದಲ್ಲಿನ ಜಬಾಲಿಯಾ ನಿರಾಶ್ರಿತ ಶಿಬಿರದ ಮೇಲಿನ ಘೋರ ಬಾಂಬ್ ದಾಳಿಯ ನಂತರ ಐರೋಪ್ಯ ಒಕ್ಕೂಟದ ದೇಶಗಳ ಕೆಲವು ವಿದೇಶಾಂಗ ಸಚಿವರು ಕೂಡ ಯುದ್ಧದ ಅಂತಾರಾಷ್ಟ್ರೀಯ ನಿಯಮಗಳಿಗೆ ಬದ್ಧವಾಗಿರುವಂತೆ ಇಸ್ರೇಲ್‌ಗೆ ಕರೆ ನೀಡಿದ್ದಾರೆ. ಆದರೆ ಭಾರತದ ವಿದೇಶಾಂಗ ಸಚಿವಾಲಯ ಈ ವಿಚಾರದಲ್ಲಿ ಮೌನವಾಗಿದೆ.

ಪ್ರತ್ಯೇಕ ಸ್ವತಂತ್ರ ದೇಶದ ಪ್ಯಾಲೆಸ್ತೀನಿ ಉದ್ದೇಶಕ್ಕೆ ಬದ್ಧತೆ ಜೊತೆಯಲ್ಲೇ ಇಸ್ರೇಲ್‌ಗೆ ಬೆಂಬಲದ ಸಮತೋಲಿತ ನೀತಿಯ ನಟನೆಯನ್ನೂ ಕೂಡ ಮೋದಿ ಸರಕಾರ ಕೈಬಿಟ್ಟಿದೆ. ಸಾಮೂಹಿಕ ಹತ್ಯೆಗಳನ್ನು ನಡೆಸಲು ಮತ್ತು ಮಹಿಳೆಯರು ಮತ್ತು ಮಕ್ಕಳ ಸಹಿತ ಗಾಜಾದ ನಾಗರಿಕರನ್ನು ಸಾಮೂಹಿಕ ಹಸಿವು ಹಾಗೂ ಕುಡಿಯುವ ನೀರಿಗೂ ಕೊರತೆಯ ಪರಿಸ್ಥಿತಿಗೆ ತಳ್ಳಲು ಬೆಂಜಮಿನ್ ನೇತನ್ಯಾಹುರ ಅಸಹ್ಯಕರ ಆಡಳಿತಕ್ಕೆ ಅಮೆರಿಕ ಮುಕ್ತ ಪರವಾನಗಿ ನೀಡಿದೆ.

ಅಮಾನವೀಯ ದುರಂತಕ್ಕೆ ಶಾಮೀಲು

ಈ ಅಮಾನವೀಯ ದುರಂತದಲ್ಲಿ ಮೋದಿ ಸರಕಾರ ಶಾಮೀಲಾಗಿದೆ. ಪ್ಯಾಲೆಸ್ತೀನಿ ಜನರ ಈ ಸಂಕಟದ ಸಮಯದಲ್ಲಿ ಅದು ಬೆಂಬಲ ನೀಡದಿರುವುದು ಮಾತ್ರವಲ್ಲದೆ ಕೇಂದ್ರ ಮತ್ತು ರಾಜ್ಯಗಳಲ್ಲಿರುವ ಬಿಜೆಪಿ ಸರಕಾರಗಳು ಇಸ್ರೇಲಿ ಆಕ್ರಮಣದ ವಿರುದ್ಧದ ಹಾಗೂ ಪ್ಯಾಲೆಸ್ತೀನಿಯರ ಪರವಾದ ಪ್ರತಿಭಟನೆಗಳನ್ನು ಬಗ್ಗುಬಡಿಯುತ್ತಿವೆ. ಪ್ಯಾಲೆಸ್ತೀನಿ ಜನರ ಬೆಂಬಲಾರ್ಥ ಸಭೆಯೊಂದನ್ನು ಆಯೋಜಿಸಲು ಹೊರಟಿದ್ದ 92 ವರ್ಷ ಪ್ರಾಯದ ಜನ ಸಂಘದ ಮಾಜಿ ನಾಯಕ ಶೇಖ್ ಅಬ್ದುಲ್ ರೆಹಮಾನ್‌ರನ್ನು ಜಮ್ಮುನಲ್ಲಿ ಬಂಧಿಸಿದ್ದು ಇದಕ್ಕೆ ತಾಜಾ ಉದಾಹರಣೆಯಾಗಿದೆ.

ಕದನವಿರಾಮವನ್ನು ಅಂಗೀಕರಿಸಲು ಇಸ್ರೇಲ್ ನಿರಾಕರಿಸಿರುವುದರಿಂದ ಗಾಜಾದಲ್ಲಿನ ಯುದ್ಧ ದೀರ್ಘ ಕಾಲ ಲಂಬಿಸುವ ಸಾಧ್ಯತೆಯಿದೆ. ಹೀಗಾಗಿ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು, ಪ್ಯಾಲೆಸ್ತೀನಿ ಜನರಿಗೆ ಸೌಹಾರ್ದತೆ ಸೂಚಿಸುವ ಅಭಿಯಾನವನ್ನು ವಿಶಾಲಗೊಳಿಸಿ ತೀವ್ರಗೊಳಿಸಬೇಕಿದೆ ಹಾಗೂ ಈ ವಿಷಯದಲ್ಲಿ ಮೋದಿ ಸರಕಾರದ ಪ್ರತಿಗಾಮಿ ಹಾಗೂ ಕೋಮುವಾದಿ ನಿಲುವನ್ನು ಅನಾವರಣಗೊಳಿಸಬೇಕಿದೆ.

ಅನು: ವಿಶ್ವ

ಯಹೂದಿಗಳಿಗೆ ಪ್ರತ್ಯೇಕ ರಾಷ್ಟ್ರವನ್ನು ಬೆಂಬಲಿಸುವುದಿಲ್ಲ ಎಂದಿದ್ದ ಗಾಂಧಿ........ ಪುಟ 4 ರಿಂದ

ಬಲದಿಂದ ನೆಲೆಸುತ್ತಿದ್ದಾರೆ ಎಂದು ಅವರು ಭಾವಿಸಿದರೆ, ಅದು ತಪ್ಪು ಉದ್ದೇಶವಾಗಿದೆ.

ಅಗತ್ಯವಿದ್ದರೆ, ಯಹೂದಿಗಳು ಅರಬ್ಬರನ್ನು ಉಳಿಸಲು ಕೇಳಬಹುದು. ವಿವಿಧ ದೇಶಗಳಲ್ಲಿ ಜನಾಂಗೀಯ–ಧಾರ್ಮಿಕ ದಬ್ಬಾಳಿಕೆಗೆ ಒಳಗಾದ ಯಹೂದಿಗಳು ವಿಶ್ವದ ಸಹಾನುಭೂತಿ ಹೊಂದಿದ್ದಾರೆ.

ಅರಬ್ಬರು ಐತಿಹಾಸಿಕ ಪರಂಪರೆ ಹೊಂದಿದ್ದಾರೆ

ಯಹೂದಿಗಳು ಕ್ರಿಯಾಶೀಲರು ಮತ್ತು ಬುದ್ಧಿವಂತರು. ಅರಬ್ಬರು ದೊಡ್ಡ ಐತಿಹಾಸಿಕ ಪರಂಪರೆಯನ್ನು ಹೊಂದಿದ್ದಾರೆ. ಆದ್ದರಿಂದ ಯಹೂದಿಗಳು ಯಾವುದೇ ದೇಶದ ಹಸ್ತಕ್ಷೇಪವಿಲ್ಲದೆ ಅರಬ್ಬರಿಂದ ಆಶ್ರಯ ಪಡೆಯಬೇಕು. "ಅರಬ್ಬರು ಯಹೂದಿಗಳ ಬಗ್ಗೆ ಸಹಾನುಭೂತಿ ಹೊಂದಿದ್ದರೆ, ಅದು ಅವರ ಉದಾತ್ತ ಪರಂಪರೆಗೆ ಹೆಮ್ಮೆಯನ್ನು ನೀಡುತ್ತದೆ" ಎಂದು ಗಾಂಧಿ ಬರೆದಿದ್ದಾರೆ. ಪ್ಯಾಲೆಸ್ತೀನ್‌ನಲ್ಲಿ ಯಹೂದಿಗಳ ವಸಾಹತು ಅರಬ್ಬರ ಸೌಹಾರ್ದತೆ ಮತ್ತು ಔದಾರ್ಯವನ್ನು ಆಧರಿಸಿರಬೇಕು ಎಂಬುದು ಗಾಂಧಿಯವರ ಅಂತಿಮ ಅಭಿಪ್ರಾಯವಾಗಿತ್ತು.ಮುಂಬೈ ಯಹೂದಿ ಸಂಘಟನೆಯ ಮುಖ್ಯಸ್ಥ ಎ.ಇ. ಶೋಲಾಟ್ ಅವರು ಪ್ಯಾಲೆಸ್ತೀನ್‌ನಲ್ಲಿ ಪ್ರತ್ಯೇಕ ಯಹೂದಿ ರಾಷ್ಟ್ರದ ಬೇಡಿಕೆಗೆ ಗಾಂಧಿಯವರ ಬೆಂಬಲವನ್ನು ಪಡೆಯಲು ಸಾಧ್ಯವಾಗಲಿಲ್ಲ. ಗಾಂಧಿಯವರು ಅರಬ್ಬರು–ಮುಸಲ್ಮಾನರ ದೃಷ್ಟಿಕೋನದಿಂದ ಪ್ಯಾಲೆಸ್ತೀನ್ ಸಮಸ್ಯೆಯನ್ನು ಕಂಡರು. ಸಾಮ್ರಾಜ್ಯಶಾಹಿ ರಾಷ್ಟ್ರಗಳ ಹಸ್ತಕ್ಷೇಪವನ್ನು ಅವರು ತಿರಸ್ಕರಿಸಿದರು.1930–40ರ ದಶಕದಲ್ಲಿ ಪ್ಯಾಲೆಸ್ತೀನ್‌ನಲ್ಲಿ ಅರಬ್ಬರು ಸಹ ದುಃಖವನ್ನು ಎದುರಿಸಿದರು ಎಂದು ಹೇಳಿದರು.

ಹರ್ಮನ್ ಕಲ್ಲೆನ್‌ಬಾಚ್, ಅಮೇರಿಕದ ಜಾನ್ ಹೇನ್ಸ್, ಬ್ರಿಟಿಷ್ ಸಂಸತ್ ಸದಸ್ಯರಾದ ಸಿಡ್ನಿ ಸಿಲ್ವರ್‌ಮ್ಯಾನ್ ಮತ್ತು ಲೂಯಿಸ್ ಫಿಶರ್ ಅವರು ಯಹೂದಿ ತಾಯ್ನಾಡಿನ (ಪ್ಯಾಲೆಸ್ಟೈನ್) ದೇಶದೊಳಗೆ ಒಂದು ದೇಶವಾಗಿ ತಮ್ಮ ಬೇಡಿಕೆಯನ್ನು ಬೆಂಬಲಿಸುವಂತೆ ಗಾಂಧಿಯನ್ನು ಒತ್ತಾಯಿಸಿದರು. ಗಾಂಧಿ ಅದನ್ನು ನಿರಾಕರಿಸಿದರು.

ಕೇಂದ್ರ ಬಿಜೆಪಿ ಸರ್ಕಾರದ ಇಸ್ರೇಲ್ ಸ್ನೇಹಪರತೆ

ಸ್ವತಂತ್ರ ಭಾರತದಲ್ಲಿ, ನೆಹರು ಅವರು ಪ್ಯಾಲೆಸ್ತೀನ್ ನೀತಿಯಲ್ಲಿ ಗಾಂಧಿಯವರ ಸಂಪ್ರದಾಯವನ್ನು ಮುಂದುವರೆಸಿದರು ಮತ್ತು ಪ್ಯಾಲೆಸ್ತೀನ್ ಅನ್ನು ವಿಭಜನೆ ಮಾಡುವ ವಿಶ್ವ ಸಂಸ್ಥೆಯ ನಿಲುವನ್ನು ವಿರೋಧಿಸಿದರು. ಭಾರತವು ಇಸ್ರೇಲ್ ಅನ್ನು 1950 ರಲ್ಲಿ ಮಾತ್ರ ಗುರುತಿಸಿತು. ನರಸಿಂಹರಾವ್ ಪ್ರಧಾನಿಯಾಗಿದ್ದಾಗ 1992 ರಲ್ಲಿ ಇಸ್ರೇಲ್ ಜೊತೆ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪಿಸಲಾಯಿತು.

ಆದರೆ ಅದಕ್ಕೂ ಮುಂಚೆಯೇ, ಭಾರತವು 1988 ರಲ್ಲಿ ಯಾಸರ್ ಅರಾಫತ್ ಅವರ ಪ್ಯಾಲೆಸ್ತೀನ್ ವಿಮೋಚನಾ ಚಳವಳಿಯನ್ನು ಪ್ಯಾಲೆಸ್ತೀನ್‌ನ ಏಕೈಕ ಪ್ರತಿನಿಧಿಯಾಗಿ ಗುರುತಿಸಿತ್ತು. ಭಾರತದ ನೀತಿಯು ಸಂಪೂರ್ಣ ಸಾರ್ವಭೌಮ ಪ್ಯಾಲೆಸ್ತೀನ್ ಮತ್ತು ಪೂರ್ವ ಜೆರುಸಲೆಮ್ ಅದರ ರಾಜಧಾನಿಯಾಗಿತ್ತು.

ಈಗ, ಇಸ್ರೇಲ್ ಗಾಜಾ ಮೇಲೆ ನಿರ್ದಯವಾಗಿ ಬಾಂಬ್ ದಾಳಿ ನಡೆಸುತ್ತಿರುವಾಗ, ಮೋದಿ ಕೇವಲ ಭಯೋತ್ಪಾದನೆಯ ಹೆಸರಿನಲ್ಲಿ ಇಸ್ರೇಲ್ ಅನ್ನು ಬೆಂಬಲಿಸಿದರು. ಇಸ್ರೇಲ್–ಹಮಾಸ್ ಕದನ ವಿರಾಮ ಘೋಷಿಸಬೇಕು; ಶಾಂತಿ ಮರಳಬೇಕು ಎಂದು ಸಾಂಕೇತಿಕವಾಗಿಯಾದರೂ ಮೋದಿ ಹೇಳಿಲ್ಲ. ಈ ಮೂಲಕ ಗಾಂಧಿ ಮತ್ತು ನೆಹರೂ ರೂಪಿಸಿದ ಪ್ಯಾಲೆಸ್ತೀನ್ ಬೆಂಬಲ ನೀತಿಯನ್ನು ಮೋದಿ ನಾಶ ಮಾಡಿದ್ದಾರೆ. ಯಹೂದಿ ಜನಾಂಗೀಯ–ಪಂಥೀಯ ರಾಜ್ಯವು ಹಿಂದುತ್ವ ರಾಜ್ಯದ ಸಹಜ ಮಿತ್ರ.

ಮೋದಿಯವರ ಹಳಿತಪ್ಪಿದ ವಿದೇಶಾಂಗ ನೀತಿಯನ್ನು ಕಮ್ಯೂನಿಸ್ಟ್ ಪಕ್ಷ ಮತ್ತು ಕಾಂಗ್ರೆಸ್ ಸೇರಿದಂತೆ ಇತರ ಪಕ್ಷಗಳು ತೀವ್ರವಾಗಿ ಟೀಕಿಸಿದ ನಂತರ, ಅಕ್ಟೋಬರ್ 19 ರಂದು ಗಾಜಾದ ಆಸ್ಪತ್ರೆಯ ಮೇಲೆ ಇಸ್ರೇಲ್ ಬಾಂಬ್ ದಾಳಿ ನಡೆಸಿದ ನಂತರ, ಮೋದಿ ಪ್ಯಾಲೆಸ್ತೀನ್ ಅಧ್ಯಕ್ಷ ಮೊಹಮ್ಮದ್ ಅಬ್ಬಾಸ್ ಅವರೊಂದಿಗೆ ಮಾತನಾಡಿದರು. ಪ್ಯಾಲೆಸ್ತೀನ್‌ಗೆ ಭಾರತದ ಸಾಂಪ್ರದಾಯಿಕ ಬೆಂಬಲ ನೀತಿ ಮುಂದುವರಿಯಲಿದೆ ಎಂದು ಘೋಷಿಸಿದ್ದಾರೆ.

ಕೃಪೆ: ಗಾಂಧಿ ಮಾರ್ಗ, ಏಪ್ರಿಲ್–ಜೂನ್ 2023 ತ್ರೈಮಾಸಿಕ (ತಿಕದೀರ್ ಪತ್ರಿಕೆಯಿಂದ)

70 ಗಂಟೆಗಳ ದುಡಿಮೆ: ಯೌವ್ವನಿಗರ ಬೆವರು ಬಯಸಿದೆ ಕಾರ್ಪೊರೇಟ್ ದುಡ್ಡಿನ ದಾಹ!

ಇನ್ಫೋಸಿಸ್ ಸಹ-ಸಂಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿಯವರ 'ವಾರದಲ್ಲಿ 70 ಗಂಟೆಗಳ ಕೆಲಸ'ದ ಸಲಹೆಯು ಚರ್ಚೆಗೆ ಗ್ರಾಸವಾಗಿದೆ. ಇದು ನಾರಾಯಣ ಮೂರ್ತಿಯವರ ಬಯಕೆ ಮಾತ್ರವಲ್ಲ, ಭಾರತದ ಬಂಡವಾಳಶಾಹಿಗಳ ಮತ್ತು ನಮ್ಮನ್ನು ಆಳುವವರ ಬಯಕೆಯೂ ಆಗಿದೆ. ಉದ್ಯೋಗ ಮಾಡುತ್ತಿರುವವರೇ ದಿನದ ಹೆಚ್ಚು ಸಮಯ ದುಡಿಯುವುದರಿಂದ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಿಕೊಟ್ಟು, ಅವರಿಂದ ದುಡಿಸಿಕೊಳ್ಳಲು ಮುಂದಾಗಿ, ಅಗಾದವಾದ ಮಾನವ ಸಂಪನ್ಮೂಲವನ್ನು ಬಳಕೆ ಮಾಡಿಕೊಂಡಾಗ ಮಾತ್ರ ದೇಶದ ಮತ್ತು ಜನತೆಯ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧ್ಯ. ವಾರದಲ್ಲಿ 70 ಗಂಟೆ ಅಥವಾ ದಿನದಲ್ಲಿ 12 ಗಂಟೆ ದುಡಿಮೆಯಿಂದ ದೇಶದ ಅಭಿವೃದ್ಧಿ ಆಗುತ್ತದೆಯೋ ಅಥವಾ ಉದ್ಯಮಗಳ ಮಾಲೀಕರ/ಬಂಡವಾಳಗಾರರ ಅಭಿವೃದ್ಧಿ ಆಗುತ್ತದೆಯೋ ಎಂಬ ಚರ್ಚೆ ಆಗಬೇಕಿದೆ.



ಸಿ. ಸಿದ್ದಯ್ಯ

ಇನ್ಫೋಸಿಸ್ ಸಹ-ಸಂಸ್ಥಾಪಕ ಎನ್. ಆರ್. ನಾರಾಯಣಮೂರ್ತಿ ಅವರು ಮೋಹನ್ ದಾಸ್ ಪೈ ಜೊತೆಗಿನ ಪಾಡ್ಕ್ಯಾಸ್ಟ್ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಭಾರತೀಯ ಉದ್ಯೋಗಿಗಳ ಉತ್ಪನ್ನಶೀಲತೆ (productivity) ಬಹಳ ಕಡಿಮೆ ಇದೆ. ಚೀನಾದಂತಹ ದೇಶಗಳ ಜೊತೆ ಪೈಪೋಟಿ ನಡೆಸಬೇಕಾದರೆ ಭಾರತೀಯರ ಉತ್ಪನ್ನಶೀಲತೆ ಹೆಚ್ಚಬೇಕು. ವಾರಕ್ಕೆ 70 ಗಂಟೆ ಕೆಲಸ ಮಾಡಬೇಕು. ಎರಡನೇ ವಿಶ್ವ ಮಹಾಯುದ್ಧದ ಬಳಿಕ ಜರ್ಮನಿ ಮತ್ತು ಜಪಾನೀಯರು ಹಾಕಿದ ರೀತಿಯಲ್ಲಿ ಭಾರತೀಯರು ಶ್ರಮ ಹಾಕಬೇಕು ಎಂದು ಮೂರ್ತಿ ಹೇಳಿದ್ದಾರೆ. ಇಷ್ಟೇ ಅಲ್ಲದೆ, "ಭಾರತದ ಕೆಲಸದ ಅವಧಿಯು ವಿಶ್ವದಲ್ಲೇ ಅತ್ಯಂತ ಕಡಿಮೆಯಾಗಿದೆ" ಎಂದೂ ನಾರಾಯಣ ಮೂರ್ತಿ ಹೇಳಿದ್ದಾರೆ.

JSW ಗ್ರೂಪ್ CMD ಸಜ್ಜನ್ ಜಿಂದಾಲ್, Ola ಕ್ಯಾಬ್ಸ್ ಸಹ-ಸಂಸ್ಥಾಪಕ Ola ನ ಭವಿಶ್ ಅಗರ್ವಾಲ್ ಮತ್ತು ಪೈ ಅವರಂತಹ ಹಲವಾರು ಉದ್ಯಮದ ನಾಯಕರು ನಾರಾಯಣಮೂರ್ತಿಯವರ ಅಭಿಪ್ರಾಯಗಳನ್ನು ಬೆಂಬಲಿಸಿದರು ಮತ್ತು ನೆಟ್ಟಿಗರಿಂದ ಟೀಕೆಗಳನ್ನು ಎದುರಿಸಿದರು. ಕಳೆದ ವರ್ಷ, ಬಾಂಬೆ ಶೇವಿಂಗ್ ಕಂಪನಿಯ ಸಿಇಒ ಶಾಂತನು ದೇಶಪಾಂಡೆ ಒಬ್ಬರ ವೃತ್ತಿಜೀವನದ ಆರಂಭಿಕ ಹಂತದಲ್ಲಿ 18 ಗಂಟೆಗಳ ಕೆಲಸದ ದಿನಗಳನ್ನು ಬೆಂಬಲಿಸಿದರು. ಅವರ ಲಿಂಕ್ಡ್‌ಇನ್ ಪೋಸ್ಟ್ ಅವರಿಗೆ ಗಂಭೀರ ಹಿನ್ನಡೆಯನ್ನು ತಂದುಕೊಟ್ಟಿತು, ಅಂತಿಮವಾಗಿ ಅವರು ಕ್ಷಮೆಯಾಚಿಸುವ ಒತ್ತಾಯಕ್ಕೆ ಒಳಗಾದರು.

ಭಾರತದಲ್ಲಿ ಹೆಚ್ಚಿನ ಅವಧಿಯ ದುಡಿಮೆ

ನಾರಾಯಣಮೂರ್ತಿಯವರು ಹೇಳುವಂತೆ ಭಾರತದಲ್ಲಿ ಕೆಲಸದ ಅವಧಿಯು ವಿಶ್ವದಲ್ಲೇ ಅತ್ಯಂತ ಕಡಿಮೆಯಾಗಿದೆ ಎಂಬುದು ಸತ್ಯವಲ್ಲ. ಒಂದು ಕಾಲದಲ್ಲಿ ಸ್ವತಃ ಉದ್ಯಮಿಯಾಗಿದ್ದ ಐಟಿ ಉದ್ಯಮದ ಡೊಯೆನ್ ಮೂರ್ತಿ, ಭಾರತವು ಕಡಿಮೆ ಉತ್ಪಾದಕತೆಯ ಮಟ್ಟವನ್ನು ಹೊಂದಿದೆ ಎಂದು ತರ್ಕಿಸಿದರು. ILO ದ ದತ್ತಾಂಶ ಮತ್ತು ತಲಾವಾರು GDP ಅನ್ನು ನೋಡಿದಾಗ, ಸಂಪತ್ತು ಮತ್ತು ವಾರದ ಕೆಲಸದ ಸಮಯದ ನಡುವೆ ತಿರುಗುಮುರುಗಾದ ಸಂಬಂಧವಿದೆ. ಹೆಚ್ಚಿನ ತಲಾವಾರು ಜಿಡಿಪಿ ಹೊಂದಿರುವ ದೇಶಗಳು ಕಡಿಮೆ ಕೆಲಸದ ಸಮಯವನ್ನು ಹೊಂದಿವೆ.

2023 ರಲ್ಲಿ ನವೀಕರಿಸಿದ ಇಂಟರ್ನ್ಯಾಷನಲ್ ಲೇಬರ್ ಆರ್ಗನೈಸೇಶನ್ ಡೇಟಾದ ಪ್ರಕಾರ, ಪ್ರತಿ ಭಾರತೀಯ ಉದ್ಯೋಗಿ ವಾರಕ್ಕೆ ಸರಾಸರಿ 47.7 ಗಂಟೆಗಳ ಕಾಲ ಈಗಾಗಲೇ ವಿಶ್ವದ ಅತ್ಯಂತ ಕಠಿಣ ಕೆಲಸಗಾರರಾಗಿದ್ದಾರೆ. ವಾಸ್ತವವಾಗಿ, 10 ದೊಡ್ಡ ಆರ್ಥಿಕತೆಗಳೊಂದಿಗೆ ಹೋಲಿಸಿದರೆ, ಭಾರತೀಯರು ದೀರ್ಘಾವಧಿಯ ಸರಾಸರಿ ಕೆಲಸದ ವಾರವನ್ನು ಹೊಂದಿದ್ದಾರೆ.

ಮೊದಲ 10 ದೊಡ್ಡ ಆರ್ಥಿಕತೆಯುಳ್ಳ ರಾಷ್ಟ್ರಗಳಲ್ಲಿ, ಭಾರತವು ಅತಿ ಹೆಚ್ಚು ವಾರದ ಕೆಲಸದ ಸಮಯವನ್ನು ಹೊಂದಿದೆ ಮತ್ತು ಕಡಿಮೆ ತಲಾವಾರು GDP (8,379 ಡಾಲರ್) ಹೊಂದಿದೆ. ಇದಕ್ಕೆ ವ್ಯತಿರಿಕ್ತವಾಗಿ, 30.1 ಗಂಟೆಗಳಲ್ಲಿ ಕಡಿಮೆ ಕೆಲಸದ ವಾರವನ್ನು ಹೊಂದಿರುವ ಫ್ರಾನ್ಸ್ 55,493 ಡಾಲರ್ ನಲ್ಲಿ ಅತಿ ಹೆಚ್ಚು ತಲಾ GDP ಹೊಂದಿದೆ. ವಾರದಲ್ಲಿ 46.1 ಗಂಟೆಗಳಲ್ಲಿ ಚೀನಾ 21,476 ಡಾಲರ್ ಜಿಡಿಪಿ ಹೊಂದಿದೆ. (ಚಿತ್ರ ನೋಡಿ)

ಕಾರ್ಮಿಕರ ಕೆಲಸದ ಸಮಯ ಮತ್ತು ಹೆಚ್ಚುವರಿ ಮೌಲ್ಯ

ಕಾರ್ಮಿಕನು ತನ್ನ ಸಂಸ್ಥೆಯ ಮಾಲೀಕನಿಗೆ ಮಾರುವ ಶ್ರಮಶಕ್ತಿಯು, ಎಂಟು ಗಂಟೆಗಳ ಈ ನಿರ್ದಿಷ್ಟ ಕೆಲಸದ ದಿನದಂದು ಕೆಲಸಗಾರನು ನಿರ್ವಹಿಸುವ ಶ್ರಮವಾಗಿದೆ. ಈ ಶ್ರಮಶಕ್ತಿಯನ್ನು ತನ್ನ ಮಾಲೀಕನಿಗೆ ಮಾರುವ ಮೂಲಕ ಕಾರ್ಮಿಕನು ತನ್ನ ಕೂಲಿಯನ್ನು ಪಡೆಯುತ್ತಾನೆ. ಕಾರ್ಮಿಕ ತನ್ನ ಮೊದಲ ಐದು ಗಂಟೆಗಳ ಶ್ರಮದಲ್ಲಿ ತಾನು ಪಡೆಯುವ ಕೂಲಿಗೆ ಸಮನಾದ ದುಡಿಮೆಯನ್ನು ಕೊಟ್ಟರೆ, ಅದನ್ನು ಸಾಮಾಜಿಕವಾಗಿ ಅಗತ್ಯವಾದ ಕಾರ್ಮಿಕ ಸಮಯ ಎಂದು ಮಾರ್ಕ್ಸ್ ಕರೆಯುತ್ತಾರೆ. ಅದರ ನಂತರ ಅವರು ಮಾಡುವ ನಂತರದ ಮೂರು ಗಂಟೆಗಳ ಶ್ರಮವು ಹೆಚ್ಚುವರಿ ದುಡಿಮೆಯಾಗಿದೆ ಮತ್ತು ಈ ಹೆಚ್ಚುವರಿ ಶ್ರಮದ ಸಮಯದಿಂದ ಪಡೆದ ಮೌಲ್ಯವು ಹೆಚ್ಚುವರಿ ಮೌಲ್ಯವಾಗಿದೆ, ಅದು ಮಾಲೀಕರಿಗೆ ಹೆಚ್ಚಿನ ಲಾಭವಾಗುತ್ತದೆ ಎಂದು ಮಾರ್ಕ್ಸ್ ವಿವರಿಸಿದ್ದಾರೆ.



ಈ ಕೆಲಸದ ದಿನವನ್ನು 12 ಗಂಟೆಗೆ ವಿಸ್ತರಿಸಿದಾಗ, ಕಾರ್ಮಿಕರ ಶ್ರಮವು ಹೆಚ್ಚುವರಿ ನಾಲ್ಕು ಗಂಟೆಗಳ ಕಾಲ ಶೋಷಣೆಯಾಗುತ್ತದೆ. ಈ ಹಿಂದೆ ಮೂರು ಗಂಟೆಯಷ್ಟಿದ್ದ ಶೋಷಣೆಯ ಅವಧಿ ಈಗ ಏಳು ಗಂಟೆಗಳಿಗೆ ಏರಿಕೆಯಾಗುತ್ತದೆ. ಆ ಮೂಲಕ ಮಾಲೀಕರಿಗೆ ಹೆಚ್ಚುವರಿ ಲಾಭದ ಮೌಲ್ಯವು ಮತ್ತಷ್ಟು ಹೆಚ್ಚಾಗುತ್ತದೆ. ಉದ್ಯೋಗದಾತರಿಗೆ ಹೆಚ್ಚುವರಿ ಲಾಭವು ಕೆಲಸಗಾರನ ಹೆಚ್ಚುವರಿ ಶ್ರಮದ ಸಮಯದಿಂದ ಮಾತ್ರ ಬರುತ್ತದೆ. ಕೆಲಸದ ಸಮಯವನ್ನು ಕಡಿಮೆ ಮಾಡುವುದು ಮತ್ತು ವೇತನವನ್ನು ಹೆಚ್ಚಿಸುವುದು ಶೋಷಣೆಯ ಮಟ್ಟವನ್ನು ಕಡಿಮೆ ಮಾಡುತ್ತದೆ. ಇದಕ್ಕೆ ವಿರುದ್ಧವಾಗಿ, ಕೆಲಸದ ಸಮಯವನ್ನು ಹೆಚ್ಚಿಸುವುದು ಮತ್ತು ವೇತನವನ್ನು ಕಡಿಮೆ ಮಾಡುವುದು ಕಾರ್ಮಿಕರ ಶೋಷಣೆಯ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸುವ ಕ್ರಮಗಳಾಗುತ್ತವೆ.

ಕೆಲಸದ ಅವಧಿ ಕಡಿತವಾದರೆ ಹೆಚ್ಚಿನ ಯುವಜನತೆಗೆ ಉದ್ಯೋಗ ಸಿಗುತ್ತದೆ

ಕೆಲಸದ ಸಮಯ ಹೆಚ್ಚು ಮಾಡಿದರೆ ನಿರುದ್ಯೋಗ ಹೆಚ್ಚಾಗಿ, ಜನರ ಆದಾಯ ಮತ್ತು ಜನರ ಕೊಳ್ಳುವ ಶಕ್ತಿ ಮತ್ತಷ್ಟು ಕಡಿಮೆಯಾಗುತ್ತದೆ. ಇದು ಉತ್ಪಾಧನಾ ವಸ್ತುಗಳ ಮಾರಾಟದ ಮೇಲೆ ಪರಿಣಾಮ ಬೀರುತ್ತದೆ. ಈ ಕಾರಣದಿಂದ ಕೆಲಸದ ಸಮಯವನ್ನು ಹೆಚ್ಚಿಸುವುದಕ್ಕಿಂತ, ಕೆಲಸದ ಸಮಯವನ್ನು ಕಡಿಮೆ ಮಾಡುವುದು ಉತ್ತಮ. ಪ್ರಸ್ತುತ, ತಲಾ 8 ಗಂಟೆಗಳಂತೆ ಮೂರು ಪಾಳಿಗಳಲ್ಲಿ ಕೆಲಸ ಮಾಡಲಾಗುತ್ತಿದೆ. ಕೆಲಸದ ಸಮಯವನ್ನು 12 ಗಂಟೆಗೆ ಹೆಚ್ಚಿಸಿದರೆ, ಕೇವಲ 2 ಪಾಳಿಗಳನ್ನು ಮಾಡಲಾಗುತ್ತದೆ. ಇದರಿಂದ ಹೆಚ್ಚು ಉದ್ಯೋಗ ನಷ್ಟವಾಗುತ್ತದೆ. ಅಂದರೆ, ಕೆಲಸದ ಸಮಯವನ್ನು ಆರು ಗಂಟೆಗೆ ಇಳಿಸಿದರೆ, ದಿನಕ್ಕೆ 4 ಪಾಳಿಗಳನ್ನು ಮಾಡಬಹುದು. ಈ ರೀತಿ ಮಾಡಿದರೆ, ಪ್ರಸ್ತುತ ಉತ್ಪಾದನಾ ಪರಿಸ್ಥಿತಿಯಲ್ಲಿ, ಉದ್ಯೋಗವು ಶೇ. 33 ರಷ್ಟು ಹೆಚ್ಚಾಗುತ್ತದೆ. ಇದರಿಂದ ಯುವಕರಿಗೆ ಉದ್ಯೋಗವೂ ಹೆಚ್ಚಾಗುತ್ತದೆ. ಕೈಗಾರಿಕೋದ್ಯಮಿಗಳು ನಡೆಸುತ್ತಿರುವ ಕಾರ್ಮಿಕರ ಶೋಷಣೆಯ ಪ್ರಮಾಣವು ಕಡಿಮೆಯಾಗುತ್ತದೆ. ಇದರಿಂದ ಮಾಲೀಕರಿಗೆ ನಷ್ಟವಾಗುತ್ತದೆ ಎಂದು ಉದ್ಯಮಿಗಳ ಪರ ಇರುವವರು ವಾದಿಸಬಹುದು. ಇಂತಹ ವಾದವು ಕೇವಲ ಹೆಚ್ಚುವರಿ ಲಾಭವನ್ನು ಆಧರಿಸಿದ ಬಂಡವಾಳಶಾಹಿ ವಾದವಾಗಿದೆ. ಶೇ. 33 ರಷ್ಟು ಉದ್ಯೋಗವು ಹೆಚ್ಚಾದಂತೆ, ಶಕ್ತಿಯುತ, ಉತ್ಸಾಹ ತುಂಬಿದ ಯುವ ಕಾರ್ಮಿಕರೊಂದಿಗೆ ಉತ್ಪಾದಕತೆ ಹೆಚ್ಚಾಗುತ್ತದೆ, ಅವರು ಪಡೆಯುವ ವೇತನದ ಹಣ ಅಗತ್ಯ ವಸ್ತುಗಳನ್ನು ಖರೀದಿಸಲು ಮಾರುಕಟ್ಟೆಗೆ ಹೋಗುತ್ತದೆ. ಇದರಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚುತ್ತದೆ. ಬೇಡಿಕೆ ಹೆಚ್ಚಾದಂತೆ ಮತ್ತಷ್ಟು ಉತ್ಪಾದನೆಯನ್ನು ಹೆಚ್ಚಿಸುತ್ತದೆ.

ಪುಟ 14 ಕ್ಕೆ

ಐಟಿ ಉದ್ಯೋಗಿಗಳಿಂದ, ಕಾರ್ಮಿಕ ಸಂಘಗಳಿಂದ ವ್ಯಾಪಕ ಟೀಕೆ

ಭಾರತದ ಅಭಿವೃದ್ಧಿಗಾಗಿ ದೇಶದ ಯುವಕರು ವಾರಕ್ಕೆ 70 ಗಂಟೆಗಳ ಕಾಲ ಸ್ವಯಂಪ್ರೇರಿತರಾಗಿ ಕೆಲಸ ಮಾಡಬೇಕು ಎಂಬ ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ ಅವರ ಸಲಹೆಗೆ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಮತ್ತು ಮಾಹಿತಿ ತಂತ್ರಜ್ಞಾನ (ಐಟಿ) ಉದ್ಯಮದ ಮಾನವ ಸಂಪನ್ಮೂಲ ವೃತ್ತಿಪರರಿಂದ, ಕಾರ್ಮಿಕ ಸಂಘಗಳಿಂದ ವ್ಯಾಪಕ ಟೀಕೆ ವ್ಯಕ್ತವಾಗಿದೆ.

"ಇದು ಭಾರತೀಯ ಕಾರ್ಮಿಕ ವರ್ಗದ ಹೆಚ್ಚು ಅಮಾನವೀಯ ಶೋಷಣೆಯ ತೆಳುವಾದ ಮುಸುಕಿನ ಅನುಮೋದನೆಯಾಗಿದೆ. ನೌಕರರನ್ನು ಹೆಚ್ಚು ಸಮಯ ಕೆಲಸ ಮಾಡುವಂತೆ ಒತ್ತಾಯಿಸುವುದು ದೈಹಿಕ ಮತ್ತು ಮಾನಸಿಕ ಬಳಲಿಕೆಗೆ ಕಾರಣವಾಗುವುದಲ್ಲದೆ ಅವರ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದು ಕರ್ನಾಟಕ ರಾಜ್ಯ ಐಟಿ/ಐಟಿಇಎಸ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸೂರಜ್ ನಿಡಿಯಂಗ ಹೇಳಿದ್ದಾರೆ.

ಹ್ಯೂಮನ್ ಕ್ಯಾಪಿಟಲ್‌ನ ಸಿಇಒ ಮತ್ತು ಮಾನವ ಸಂಪನ್ಮೂಲ ವಿಶ್ಲೇಷಕರಾದ ಬಿ.ಎಸ್. ಮೂರ್ತಿಯವರು, "ಭಾರತೀಯ ಉದ್ಯೋಗಿಗಳ ಪ್ರಯತ್ನಗಳನ್ನು ಇನ್ನೂ ಗಂಟೆಗಳಲ್ಲಿ ಅಳೆಯಲಾಗುತ್ತದೆ ಮತ್ತು ಮಾಡಿದ ಸ್ಮಾರ್ಟ್ ಕೆಲಸದ ವಿಷಯದಲ್ಲಿ ಅಲ್ಲ ಎಂದು ತಿಳಿಯುವುದು ನಿರಾಶಾದಾಯಕವಾಗಿದೆ. ಬದಲಾಗುತ್ತಿರುವ ಜಗತ್ತು ನಿಮ್ಮ ವೈಯಕ್ತಿಕ ಮತ್ತು ಕೆಲಸದ ಉತ್ಪಾದಕತೆಯನ್ನು ಹೆಚ್ಚಿಸಲು ಹಲವಾರು ಸಾಧನಗಳು ಲಭ್ಯವಿರುವ ಋಚಿಣಉಕಖಿ ಯುಗದಲ್ಲಿ, ನಾರಾಯಣ ಮೂರ್ತಿಯವರು ಹೇಳಿದ್ದನ್ನು ಇಂದಿನ ವೃತ್ತಿಜೀವನದ ಸಂದರ್ಭದಲ್ಲಿ ಗುಲಾಮಗಿರಿ ಎಂದು ಅರ್ಥೈಸಲಾಗುತ್ತದೆ" ಎಂದು ಟೀಕಿಸಿದ್ದಾರೆ.

"70 ಗಂಟೆಗಳ ಕೆಲಸವು ತುಂಬಾ ಪ್ರಯೋಜನಕಾರಿಯಾಗಿದ್ದರೆ, ನಾರಾಯಣ ಮೂರ್ತಿಯವರ ಸಮಯದಲ್ಲಿ ಇನ್ಫೋಸಿಸ್ ಸಂಸ್ಥೆಯಲ್ಲಿ ಅದನ್ನು ಏಕೆ ಪರಿಚಯಿಸಲಿಲ್ಲ ಎಂದು ನಾನು ಆಶ್ಚರ್ಯ ಪಡುತ್ತೇನೆ. 70 ಗಂಟೆಗಳ ಕೆಲಸವನ್ನು ಪರಿಚಯಿಸಿದರೆ, ಜನರು ಸಾಮೂಹಿಕವಾಗಿ ವಲಸೆ ಹೋಗುತ್ತಾರೆ ಮತ್ತು ಕ್ಷೀಣತೆ ಛಾವಣಿಯ ಮೇಲೆ ಬೀಳುತ್ತದೆ" ಎಂದು ಬೆಂಗಳೂರಿನ ಎಂಎನ್‌ಸಿಯ ಹಿರಿಯ ಯೋಜನಾ ವ್ಯವಸ್ಥಾಪಕ ಸತೀಶ್ ಸದಾಶಿವನ್ ಹೇಳಿದ್ದಾರೆ.

"ಪ್ರತಿ ವಾರ 70 ಗಂಟೆಗಳ ಕೆಲಸ ಮಾಡಲು, ಒಬ್ಬರು ವಾರದಲ್ಲಿ ಆರು ದಿನಗಳವರೆಗೆ ದಿನಕ್ಕೆ 11.66 ಗಂಟೆಗಳ ಕಾಲ ಅಥವಾ ವಾರದ 7 ದಿನದಲ್ಲಿ ಪ್ರತಿದಿನ 10 ಗಂಟೆಗಳ ಕಾಲ ಕೆಲಸ ಮಾಡಬೇಕು. ಅಂತಹ ಕ್ರೇಜಿ ಕೆಲಸದ ವೇಳಾಪಟ್ಟಿ ವೈಯಕ್ತಿಕ ಜೀವನ ಅಥವಾ ಕುಟುಂಬದ ಯೋಗಕ್ಷೇಮಕ್ಕೆ ಯಾವುದೇ ಅವಕಾಶವನ್ನು ಬಿಡುವುದಿಲ್ಲ. ಟನ್‌ಗಟ್ಟಲೆ ಹಣದಲ್ಲಿ ಕುಳಿತುಕೊಳ್ಳುವ ನಿವೃತ್ತ ಜನರು ಇಂತಹ ಕಾರ್ಯಸಾಧ್ಯವಲ್ಲದ ಸಲಹೆಗಳನ್ನು ನೀಡುವುದು ಸುಲಭ," ಎಂದು ನಗರ ಮೂಲದ ಸಾಫ್ಟ್‌ವೇರ್ ಎಂಜಿನಿಯರ್ ಅರುಣಾ ಲಾಲ್ ಹೇಳಿದರು.

ಇತ್ತೀಚೆಗೆ ಕರ್ನಾಟಕದಲ್ಲಿ ಕಾರ್ಖಾನೆಗಳಿಗೆ ಅನ್ವಯಿಸುವ ಕಾನೂನುಬಾಹಿರವಾದ ಕಾರ್ಮಿಕ ಕಾನೂನುಗಳನ್ನು ದಿನಕ್ಕೆ 12 ಗಂಟೆಗಳವರೆಗೆ ಕೆಲಸದ ಸಮಯವನ್ನು ಅನುಮತಿಸಲು ತಿದ್ದುಪಡಿ ಮಾಡಲಾಗಿದೆ, ಆದರೆ ಇದನ್ನು ವಾರಕ್ಕೆ 48 ಗಂಟೆಗಳವರೆಗೆ ನಿರ್ಬಂಧಿಸಲಾಗಿದೆ. ಅದನ್ನು ಮೀರಿ ಕಂಪನಿಗಳು ಅಧಿಕಾವಧಿ ವೇತನವನ್ನು ಪಾವತಿಸಬೇಕಾಗುತ್ತದೆ. ಈ ತಿದ್ದುಪಡಿಯು ಐಟಿ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ, ಈ ತಿದ್ದುಪಡಿ ಸ್ವತಃ ತೀವ್ರ ಟೀಕೆಗೆ ಒಳಗಾಗಿದೆ. 70 ಗಂಟೆಗಳ ಕೆಲಸದ ವಾರವು ಶೋಷಣೆ ಮಾತ್ರವಲ್ಲದೆ ಕಾನೂನುಬಾಹಿರವಾಗಿದೆ ಎಂದು ಕಾರ್ಮಿಕ ಸಂಘಟನೆಗಳ ಮುಖಂಡರು ಹೇಳುತ್ತಾರೆ.



ಭಾಷಾವಾರು ರಾಜ್ಯಗಳನ್ನು ಪ್ರಾದೇಶಿಕವಾದ ಎಂದು ಕರೆಯುವುದು, ಭಾಷಾವಾರು ರಾಜ್ಯಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಿತ್ತುಕೊಳ್ಳುವುದು ಭಾಷಾವಾರು ರಾಷ್ಟ್ರೀಯತೆಯ ಭಾವನೆಯನ್ನು ಧಿಕ್ಕರಿಸಿದಂತೆ. ಅಷ್ಟೇ ಅಲ್ಲ, ಪ್ರಜಾಪ್ರಭುತ್ವವನ್ನೇ ಕುಂಠಿತಗೊಳಿಸುವ ಕುಕೃತ್ಯ.

ಭಾಷೆಗಳ ರಾಷ್ಟ್ರೀಯತೆಯನ್ನು ಪ್ರಾದೇಶಿಕತೆ ಎಂದು ಹೀಗಳೆದ ಮೋದಿ

ಕರ್ನಾಟಕ ರಾಜ್ಯೋತ್ಸವ–ವಿಶೇಷ ಲೇಖನ

ಜಿ.ಎನ್.ನಾಗರಾಜ್

ಮೊನ್ನೆ ವಿಜಯ ದಶಮಿಯ ದಿನ ರಾವಣನ ಪ್ರತಿಕೃತಿಯನ್ನು ಸುಡುತ್ತಾ ಮೋದಿಯವರು ಕೆಲವು ಆಕ್ರಮಣಕಾರಿ ಘೋಷಣೆಗಳನ್ನು ಮಾಡಿದರು. ಹಿಂದೆ ಸಾಮ್ರಾಟರುಗಳು ದಸರೆಯ ನಂತರ ವಿಜಯದಶಮಿಯ ದಿನ ಬೇರೆ ರಾಜ್ಯಗಳ ಮೇಲೆ ಆಕ್ರಮಣ ಆರಂಭಿಸಿದರೆ ವಿಜಯ ಸಿದ್ಧವೆಂದು ಭಾವಿಸಿ ಯುದ್ಧ ಘೋಷಣೆ ಮಾಡುತ್ತಿದ್ದರಂತೆ. ತಾನು ಭಾರತದ ಸಾಮ್ರಾಟನೆಂದು ನಂಬಿರುವ, ಹಾಗೆಂದು ಬಿಂಬಿಸಿಕೊಳ್ಳುತ್ತಿರುವ ಮೋದಿಯವರು ಕೂಡಾ ಭಾರತದ ವಿವಿಧ ಜಾತಿ ಸಮುದಾಯಗಳ ಹಕ್ಕುಗಳು, ಸವಲತ್ತುಗಳ ಮೇಲೆ ಒಂದು ಕಡೆ, ಮತ್ತೊಂದು ಕಡೆ ವಿವಿಧ ಭಾಷಾವಾರು ರಾಜ್ಯಗಳ ಮೇಲೆ ಆಕ್ರಮಣವನ್ನು ಘೋಷಿಸಿದರು. ಅವರು ಅದನ್ನು ಜನರನ್ನು ಒಪ್ಪಿಸುವ ಭಾಷೆಯಲ್ಲಿ ಜಾತಿವಾದ ಮತ್ತು ಪ್ರಾದೇಶಿಕವಾದ ಎಂದು ಹೆಸರಿಸಿದರು. ಕೇವಲ ಮೂರು ನಾಲ್ಕು ರಾಜ್ಯಗಳಲ್ಲಿ ಮಾತ್ರ ಚುನಾವಣಾ ಗೆಲುವಿನ ಪ್ರಜಾಪ್ರಭುತ್ವೀಯ ಮಾರ್ಗ ಹಿಡಿದು ಬಿಜೆಪಿ ಗೆದ್ದಿರುವ ವಾಸ್ತವ ಅವರ ಕಣ್ಣಿಗೆ ದಿನವೂ ರಾಚುತ್ತಿದೆ. ಇನ್ನು ಕೆಲವು ರಾಜ್ಯಗಳನ್ನು ಶಾಸಕರ ಮಾರಾಟದಲ್ಲಿ ಖರೀದಿಸಿ ಅಕ್ರಮವಾಗಿ ಅಧಿಕಾರ ಹಿಡಿದಿರುವುದು ಲೋಕಕ್ಕೇ ಗೊತ್ತಿದೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಈ ರಾಜ್ಯಗಳನ್ನೂ ಕಳೆದುಕೊಳ್ಳುವ ಭಯ ಕಾಡುತ್ತಿದೆ.

ಅಂತಹ ಸಂದರ್ಭದಲ್ಲಿ ಇಡೀ ಭಾರತವನ್ನು ತಮ್ಮ ಮುಷ್ಟಿಯೊಳಗೆ ಹಿಡಿದುಕೊಳ್ಳಬೇಕೆಂಬ ತಹ ತಹ ಅವರದು.

ಭಾಷಾವಾರು ರಾಜ್ಯಗಳನ್ನು ಪ್ರಾದೇಶಿಕವಾದ ಎಂದು ಕರೆಯುವುದು, ಭಾಷಾವಾರು ರಾಜ್ಯಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಿತ್ತುಕೊಳ್ಳುವುದು ಭಾಷಾವಾರು ರಾಷ್ಟ್ರೀಯತೆಯ ಭಾವನೆಯನ್ನು ಧಿಕ್ಕರಿಸಿದಂತೆ. ಅಷ್ಟೇ ಅಲ್ಲ, ಪ್ರಜಾಪ್ರಭುತ್ವವನ್ನೇ ಕುಂಠಿತಗೊಳಿಸುವ ಕುಕೃತ್ಯ.

ಆದರೆ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಪಸರಿಸಿದ ರಾಷ್ಟ್ರೀಯ ಭಾವನೆಯ ಜನನದ ಮೂಲವೇ ಭಾಷಾವಾರು ರಾಷ್ಟ್ರೀಯತೆ. ಮೋದಿ ಮತ್ತು ಅವರ ಚಿಂತನೆಯ ಅಡಿಪಾಯ ಆರೆಸ್ಸೆಸ್‌ಗೆ ಇದನ್ನು ನೆನಪಿಸಬೇಕಾಗಿದೆ. ಭಾರತದ ಮೊತ್ತ ಮೊದಲ ಸ್ವಾತಂತ್ರ್ಯ ಚಳುವಳಿ ಕ್ರಿ.ಶ.1905 ರ 'ವಂಗ ಭಂಗ' ಚಳುವಳಿ. ಬಂಗಾಲವನ್ನು ಹಿಂದು, ಮುಸ್ಲಿಂ ಬಂಗಾಲಗಳೆಂದು ಎರಡಾಗಿ ವಿಭಜಿಸಿದ ಬ್ರಿಟಿಷರ ಕುತಂತ್ರದ ವಿರುದ್ಧ ಹಿಂದೂ, ಮುಸ್ಲಿಂ ಬಂಗಾಲಿ ಭಾಷಿಕರು ಒಟ್ಟಾಗಿ ಮಾಡಿದ ಹೋರಾಟದಿಂದ ಇಡೀ ದೇಶದಲ್ಲಿ ರಾಷ್ಟ್ರೀಯ ಭಾವನೆಯ ಉದ್ದೀಪನವಾಯಿತು . ಆ ಚಳುವಳಿಯ ತೀವ್ರತೆ ಕೊನೆಗೆ ಬ್ರಿಟಿಷರು ವಿಭಜನೆಯನ್ನು ಹಿಂತೆಗೆದುಕೊಳ್ಳಲೇಬೇಕಾದ ಪರಿಸ್ಥಿತಿ ನಿರ್ಮಿಸಿತು. ಈ ವಿಜಯ ದೇಶಾದ್ಯಂತ ರಾಷ್ಟ್ರೀಯ ಭಾವನೆಯ ಬೆಳವಣಿಗೆಗೆ ವೇಗವರ್ಧಕವಾಯಿತು.

ಕರ್ನಾಟಕ ಏಕೀಕರಣದ ಬಗ್ಗೆ ಮೊದಲ ಸೊಲ್ಲು ಕೇಳಿದ್ದೇ ಆಗ. ಪೂನಾದಲ್ಲಿ ಶಿಕ್ಷಣ ಪಡೆಯುತ್ತಿದ್ದವರು ಬಂಗಾಲಿ ಭಾಷಿಕರ ಚಳುವಳಿಯ ಪ್ರಭಾವಕ್ಕೊಳಗಾದರು. ಬಂಗಾಲಿ ಭಾಷೆಯಿಂದ ಹಲವು ಕಾದಂಬರಿಗಳು ಕನ್ನಡಕ್ಕೆ ಭಾಷಾಂತರವಾಗಿ ಕನ್ನಡ ಸಾಹಿತ್ಯದಲ್ಲಿ ನವೋದಯದ ವಿಚಾರಗಳನ್ನು ಮೂಡಿಸಿದವು. ಕನ್ನಡ ಸಾಹಿತ್ಯದ ಬೆಳವಣಿಗೆಯನ್ನೂ ಪ್ರಚೋದಿಸಿದವು. ಕನ್ನಡ ಭಾಷೆಯಲ್ಲಿ ಸ್ವಾತಂತ್ರ್ಯ, ಪ್ರಜಾಪ್ರಭುತ್ವದ ವಿಚಾರಗಳನ್ನು ಜನರಿಗೆ ಮುಟ್ಟಿಸಲು ಹಲವು ಕನ್ನಡ ಪತ್ರಿಕೆಗಳು ಹುಟ್ಟಿದವು. ಜಯ ಕರ್ನಾಟಕ, ಸಂಯುಕ್ತ ಕರ್ನಾಟಕ, ತಾಯಿ ನಾಡು ಮೊದಲಾದ ಹೆಸರುಗಳೇ ಈ ಭಾವನೆಯ ಸಂಕೇತವಾಗಿದ್ದವು. ಅಂದಿನ ಪತ್ರಿಕೆಗಳ ಹೆಸರುಗಳ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ, ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತುಗಳು ಹುಟ್ಟಿದ್ದು ಇದೇ ಸ್ಫೂರ್ತಿಯ ಮುಂದುವರೆದ ಬೆಳವಣಿಗೆ.

> ಏಕೀಕರಣದ ನಂತರ ಬೆಳೆದ ಕನ್ನಡ ಚಳುವಳಿಯ ಯಾವ ನಾಯಕರೂ ಭಾವನಾತ್ಮಕವಾಗಿ ಕನ್ನಡ ಭಾಷೆ, ಗಡಿ, ನೀರು ಹಂಚಿಕೆ ಬಿಟ್ಟರೆ ಕರ್ನಾಟಕ ಎಂಬ ರಾಜ್ಯದ ಸ್ವಾಯತ್ತತೆ, ಹಣಕಾಸು ಹಾಗೂ ಕಾನೂನು ಅಧಿಕಾರಗಳ ಬಗ್ಗೆ ತಲೆಯನ್ನೇ ಕೆಡಿಸಿಕೊಂಡಿಲ್ಲ. ಇದರಿಂದಾಗಿ ಬಿಜೆಪಿ, ಆರೆಸ್ಸೆಸ್‌ಗಳು ಭಾಷಾವಾರು ರಾಜ್ಯ ಪರಿಕಲ್ಪನೆಯನ್ನೇ ನಾಶ ಮಾಡುವುದಕ್ಕೆ ಅವಕಾಶ ಉಂಟಾಗುತ್ತಿದೆ.

ಅಂದು ಸ್ವಾತಂತ್ರ್ಯ ಚಳುವಳಿಯ ನೇತೃತ್ವ ವಹಿಸಿದ್ದ ಕಾಂಗ್ರೆಸ್‌ಗೆ ಸ್ವಾತಂತ್ರ್ಯ ಚಳುವಳಿಗೆ ಬೃಹತ್ ಜನ ಸಮೂಹವನ್ನು ಸೆಳೆಯಬೇಕಾದರೆ ಜನರ ಭಾಷೆಗಳಲ್ಲಿ ಮಾತನಾಡಿದರೆ ಮಾತ್ರ ಸಾಧ್ಯ ಎಂಬ ಅರಿವು ಮೂಡಿತು. ನಾಗಪುರ ಮಹಾಧಿವೇಶನ, ಗಾಂಧೀಜಿಯವರ ಅಧ್ಯಕ್ಷತೆಯ ಏಕೈಕ ಕಾಂಗ್ರೆಸ್ ಅಧಿವೇಶನವಾದ ಕ್ರಿ.ಶ.1924 ರ ಬೆಳಗಾಂ ಮಹಾಧಿವೇಶನದಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸಲು ಮತ್ತು ಭಾಷಾವಾರು ಕಾಂಗ್ರೆಸ್ ಘಟಕಗಳನ್ನು ಸ್ಥಾಪಿಸಲು ನಿರ್ಧಾರ ಮಾಡಿತು.

ಪ್ರಜಾಪ್ರಭುತ್ವೀಯ ವಿಚಾರಗಳ ಮೊದಲ ವಿಸ್ತರಣೆಗೆ, ಸ್ವಾತಂತ್ರ್ಯ ಚಳುವಳಿಯ ಅಗಾಧತೆಗೆ ಭಾಷಾವಾರು ರಾಷ್ಟ್ರೀಯತೆ ಸಾಧಕವಾಯಿತು. ಹೀಗೆ ಭಾರತದಲ್ಲಿ ರಾಷ್ಟ್ರೀಯತೆ ಎಂದರೆ ಅಖಿಲ ಭಾರತ ರಾಷ್ಟ್ರೀಯತೆ ಮತ್ತು ಅದರ ಮುಖ್ಯ ಆಧಾರ ಸ್ತಂಭವಾಗಿ ಭಾಷಾವಾರು ರಾಷ್ಟ್ರೀಯತೆ ಎಂಬುದು ಆರಂಭದಿಂದಲೇ ಮೂಡಿದ ವ್ಯಾಖ್ಯಾನ.

ಭಾಷಾವಾರು ರಾಷ್ಟ್ರೀಯತೆ ಕೇವಲ ಭಾಷೆಗೆ ಸೀಮಿತವಾಗಿರಲಿಲ್ಲ. ಅದು ಈ ಭಾಷೆಗಳನ್ನು ಮಾತನಾಡುವ ಜನ ಸಮುದಾಯದ ಸಮಸ್ಯೆಗಳನ್ನು ಒಳಗೊಂಡಿತು. ಮುಖ್ಯವಾಗಿ ಶಿಕ್ಷಣ, ಜನಭಾಷೆಗಳಲ್ಲಿ ಶಿಕ್ಷಣ ನೀಡುವ ರಾಷ್ಟ್ರೀಯ ವಿದ್ಯಾಶಾಲೆಗಳ ಸ್ಥಾಪನೆ, ರೈತರು ಬೆಳೆದ ಬೆಲೆಯ ಸಮಸ್ಯೆಗಳು, ಗೇಣಿದಾರ ರೈತರ ಸಮಸ್ಯೆಗಳು, ಬರಗಾಲ ಜೊತೆಗೆ ಕರ್ನಾಟಕ ಏಕೀಕರಣದ ಚಳುವಳಿ ಬೆಳೆಯುತ್ತಾ ಹೋಯಿತು.

ಇದೇ ಸಮಯದಲ್ಲಿಯೇ ಭಾರತವೆಂದರೆ ವಿವಿಧ ಭಾಷಾವಾರು ರಾಷ್ಟ್ರೀಯತೆಗಳ ಒಕ್ಕೂಟ ಅಂದರೆ ಭಾಷಾವಾರು ರಾಜ್ಯಗಳ ಒಕ್ಕೂಟ ಎಂಬ ಭಾವನೆ ಬೆಳೆಯುತ್ತಾ ಬಂದಿತು. ಕ್ರಿ.ಶ.1935 ರಲ್ಲಿ ಬ್ರಿಟಿಷರು ತಮ್ಮ ನೇರ ಆಡಳಿತದಲ್ಲಿದ್ದ ಪ್ರದೇಶಗಳಲ್ಲಿ ಸೀಮಿತ ಚುನಾವಣೆ ಆಧಾರಿತ ಪ್ರಾಂತ್ಯ ಸರ್ಕಾರಗಳನ್ನು ಅಸ್ತಿತ್ವಕ್ಕೆ ತರುವ ಆಡಳಿತ ಸುಧಾರಣೆಯನ್ನು ತರುವಾಗ ಮತ್ತು ರಾಜ್ಯ ಸರ್ಕಾರಗಳಲ್ಲಿ ಕಾಂಗ್ರೆಸ್ ಗೆಲುವಿನ ನಂತರ ಭಾಷಾವಾರು ರಾಜ್ಯಗಳ ಅಗತ್ಯ ಎದ್ದು ಕಾಣಿಸಿತು. ಅತ್ಯಂತ ಕೇಂದ್ರೀಕೃತವಾದ ಬ್ರಿಟಿಷ್ ವೈಸ್‌ರಾಯ್ ದಬ್ಬಾಳಿಕೆಯಡಿಯಲ್ಲಿನ ಪ್ರಾಂತ್ಯ ಸರ್ಕಾರಗಳ ಸೀಮಿತ ಹಕ್ಕುಗಳು, ಅಧಿಕಾರಗಳು, ಜನರ ಸಮಸ್ಯೆಗಳ ಪರಿಹಾರದಲ್ಲಿ ಅವುಗಳ ಪಾತ್ರದ ಬಗ್ಗೆ ಪ್ರಶ್ನೆಗಳು ಎದ್ದವು.

ಭಾರತದ ಸ್ವಾತಂತ್ರ್ಯಕ್ಕಾಗಿ 'ಚಲೇಜಾವ್' ಅಥವಾ 'ಮಾಡು ಇಲ್ಲವೇ ಮಡಿ' ಎಂದು ಘೋಷಿಸಿದ ಆಗಸ್ಟ್ 9, 1942 ರ ಕಾಂಗ್ರೆಸ್ ನಿರ್ಣಯದಲ್ಲಿ ರಾಜ್ಯಗಳ ಹಕ್ಕುಗಳ ಬಗ್ಗೆ ನಿರ್ದಿಷ್ಟ ಪ್ರಸ್ತಾಪ ಮಾಡಬೇಕಾದಷ್ಟು ಪ್ರಾಮುಖ್ಯತೆ ಪಡೆದುಕೊಂಡಿತು.

"ಸಂವಿಧಾನ ಸಭೆಯು ಭಾರತದ ಜನತೆಗೆ ಒಂದು ಸಂವಿಧಾನವನ್ನು ರೂಪಿಸುತ್ತದೆ. ಆ ಸಂವಿಧಾನವು ಒಕ್ಕೂಟ ಸ್ವರೂಪದ್ದಾಗಿರುತ್ತದೆ. ಈ ಒಕ್ಕೂಟಕ್ಕೆ ಸೇರಿದ ಘಟಕಗಳಿಗೆ ಅತ್ಯಂತ ಗರಿಷ್ಟ ಮಟ್ಟದ ಸ್ವಾಯತ್ತತೆಯನ್ನು ನೀಡುವಂತಹ ಸಂವಿಧಾನವಾಗಿರುತ್ತದೆ. ಇವುಗಳಿಗೆ ಕೇಂದ್ರ ಸರ್ಕಾರಕ್ಕಾಗಿ ಬಿಟ್ಟುಕೊಟ್ಟ ಅಧಿಕಾರಗಳ ಹೊರತಾಗಿ ಉಳಿದೆಲ್ಲ ಹಕ್ಕುಗಳೂ ರಾಜ್ಯಗಳಿಗೇ ಸೇರುತ್ತದೆ" ಎಂದು ಘೋಷಿಸಿತು. ಇಂತಹ ಒಂದು ಭಾಷಾವಾರು ರಾಷ್ಟ್ರೀಯತೆಗೆ ನೀಡಿದ ಮಾನ್ಯತೆಯೊಂದಿಗೆ ಬ್ರಿಟಿಷರನ್ನು ಓಡಿಸುವ ಚಳುವಳಿಯಲ್ಲಿ ಭಾಗವಹಿಸೋಣ ಎಂದು ನಿರ್ಣಯದ ಮೂಲಕ ಭರವಸೆ ನೀಡಿತು.

ದೇಶದ ಐಕ್ಯತೆಯ ಸಾಕಾರ ರೂಪವಾದ ಭಾರತ ರಾಷ್ಟ್ರೀಯತೆ ರೂಪುಗೊಂಡದ್ದೇ ಭಾಷಾವಾರು ರಾಷ್ಟ್ರೀಯತೆಯ ಅಡಿಪಾಯದ ಮೇಲೆ ಎಂಬುದನ್ನು ಮರೆಯಲಾಗದು. ಅದನ್ನು ಕೇವಲ ಪ್ರಾದೇಶಿಕ ಸಂಕುಚಿತತೆ ಎಂದು ಹೀಗಳೆದು ನಿರ್ಲಕ್ಷ್ಯ ಮಾಡಿದರೆ ಭಾರತದ ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ತರುತ್ತದೆ.

ಮುಂದೆ ಸ್ವಾತಂತ್ರ್ಯಕ್ಕೆ ಸಂಬಂಧಿಸಿ ವಿವಿಧ ಪಕ್ಷ, ಸಂಘಟನೆಗಳ ಅಭಿಪ್ರಾಯ ಪಡೆದ ಪ್ರಸಿದ್ಧ ಕ್ರಿಪ್ಸ್ ಮಿಷನ್ ವರದಿಯಲ್ಲಿಯೂ ಮುಂದೆ ರಾಜ್ಯಗಳೆಂದು ಹೆಸರಾದ ಪ್ರಾಂತ್ಯಗಳ ಹಕ್ಕುಗಳ ಬಗ್ಗೆ ಇದೇ ಅಂಶವನ್ನು ಒಂದು ಪ್ರಧಾನ ಅಂಗವಾಗಿಸಿದೆ.

ಹೀಗೆ ಸ್ವಾತಂತ್ರ್ಯ ಚಳುವಳಿ ಹಾಗೂ ಪ್ರಜಾಪ್ರಭುತ್ವದ ಭಾಗವಾಗಿ ರೂಪುಗೊಂಡ ಭಾಷಾವಾರು ರಾಷ್ಟ್ರೀಯತೆ ಮತ್ತು ಅದರ ಫಲವಾದ ಭಾಷಾವಾರು ರಾಜ್ಯಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಒಂದು ದಿನವೂ ಭಾಗವಹಿಸದ ಆರೆಸ್ಸೆಸ್ ಮತ್ತು ಅದರ ಶಿಶುವಾದ ಮೋದಿಗೆ ಅದರ ಗಂಧ ಗಾಳಿ ಎಲ್ಲಿಂದ ಬಂದೀತು! ವಿವಿಧ ರಾಜ್ಯಗಳಲ್ಲಿ ಅಲ್ಲಲ್ಲಿಯ ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ಚಲಾವಣೆಯ ಫಲವಾಗಿ ಅಲ್ಲಿ ಜನಪ್ರಿಯತೆ ಪಡೆದ ವಿವಿಧ ಪ್ರಾದೇಶಿಕ ಪಕ್ಷಗಳ ಸರ್ಕಾರಗಳು ಬಿಜೆಪಿ, ಆರೆಸ್ಸೆಸ್‌ನ ಕಾರ್ಪೊರೇಟ್ ಫ್ಯಾಸಿಸ್ಟ್ ಸರ್ಕಾರದ ಹೇರಿಕೆಗೆ ಅಡ್ಡವಾದ ದೊಡ್ಡ ಬಂಡೆಗಲ್ಲುಗಳಾಗಿವೆ. ಅವರು ಅಧಿಕಾರಕ್ಕೆ ಬಂದ ಮೊದಲ ದಿನದಿಂದಲೂ ರಾಜ್ಯಗಳ ಸ್ವಾಯತ್ತತೆ, ಅವುಗಳ ಸಂವಿಧಾನ ಬದ್ಧ ಅಧಿಕಾರಗಳು, ವಿವಿಧ ಭಾಷೆಗಳ ಮೇಲೆ ಕೆಂಗಣ್ಣು ಬೀರುತ್ತಾ ಬಂದಿದೆ.

ದೇಶದೆಲ್ಲ ರಾಜ್ಯಗಳಿಂದ ಸಂಗ್ರಹಿಸುವ ತೆರಿಗೆಯ ಭಾಗವನ್ನು ರಾಜ್ಯಗಳಿಗೆ ಸಂವಾದದ ಮೂಲಕ ಹಂಚುವ ಒಂದು ವೇದಿಕೆಯಾಗಿದ್ದ ಯೋಜನಾ ಆಯೋಗವನ್ನು ವಜಾಗೊಳಿಸಿದ್ದು, ಈ ಹಂಚಿಕೆಯನ್ನು ಪ್ರಧಾನಮಂತ್ರಿಗಳ ಕಛೇರಿಯಿಂದ ಅವರ ಮನಬಂದಂತೆ ಮಾಡುವ ಅಕ್ರಮ ವಿಧಾನ ಸ್ಥಾಪಿಸಿದ್ದು ಮೋದಿ ಸರ್ಕಾರದ ಮೊದಲ ಘಾತ. ಬಿಜೆಪಿ ಅಧಿಕಾರದ ಸರ್ಕಾರಗಳಿಗೆ, ರಾಜ್ಯಗಳಿಗೆ ಒಂದೊಂದು ಭೇಟಿ ನೀಡಿದಾಗಲೂ ಹಲವು ಹತ್ತು ಸಾವಿರ ಕೋಟಿ ಘೋಷಣೆ, ವಿರೋಧ ಪಕ್ಷಗಳ ಸರ್ಕಾರಗಳಿಗೆ ನ್ಯಾಯ ಬದ್ಧ ಹಂಚಿಕೆ ಮಾಡದೆ ವಂಚನೆ, ಜಿ.ಎಸ್.ಟಿ. ಮೂಲಕ ಮತ್ತಷ್ಟು ಅನ್ಯಾಯ, ಹಣಕಾಸು ಆಯೋಗಕ್ಕೆ ಜನಸಂಖ್ಯಾ ಆಧಾರಿತ ಸೂತ್ರ ರೂಪಿಸಲು ನಿರ್ದೇಶಿಸುವ ಮೂಲಕ ಜನಸಂಖ್ಯಾ ನಿಯಂತ್ರಣವನ್ನು ಪರಿಣಾಮಕಾರಯಾಗಿ ಜಾರಿಗೆ ತಂದ ಕರ್ನಾಟಕ, ಕೇರಳ ಮೊದಲಾದ ದಕ್ಷಿಣದ ರಾಜ್ಯಗಳಿಗೆ ವಂಚನೆ, ಹೊಸ ಶಿಕ್ಷಣ ನೀತಿ, ಆರೋಗ್ಯ ನೀತಿ, ಉದ್ಯೋಗ ನೇಮಕಾತಿ ನೀತಿಗಳು, ಮೆಡಿಕಲ್, ಇಂಜನಿಯರಿಂಗ್ ಸೀಟು ಹಂಚಿಕೆಯ ಏಕೀಕೃತ ನೀಟ್ ಪರೀಕ್ಷೆ, ಒಂದು ದೇಶ, ಒಂದು ಭಾಷೆ, ಒಂದು ದೇಶ ಒಂದು ರೇಷನ್ ಕಾರ್ಡ್, ಒಂದು ದೇಶ ಒಂದು ತೆರಿಗೆ ಕೊನೆಗೆ ಒಂದು ದೇಶ ಒಂದು ಚುನಾವಣೆ ಎಂದು ಹಲ ಹಲವು ಕ್ರಮಗಳು, ಘೋಷಣೆಗಳ ಮೂಲಕ ರಾಜ್ಯಗಳ ಸ್ವಾಯತ್ತತೆಯನ್ನು ಇಲ್ಲವಾಗಿಸುತ್ತಿದೆ. ಆ ಮೂಲಕ ಪ್ರತಿ ಹೆಜ್ಜೆಯಲ್ಲಿಯೂ ವಿವಿಧ ಭಾಷಿಕ ಸಮುದಾಯಗಳನ್ನು ತುಳಿಯಲಾಗುತ್ತಿದೆ.

ಜಮ್ಮು ಕಾಶ್ಮೀರ ರಾಜ್ಯದ ವಿಭಜನೆ, ಇಲ್ಲಿಯವರೆಗೂ ಚುನಾವಣೆ ನಡೆಸದೆ ರಾಜ್ಯದ ಸ್ಥಾನಮಾನ ಕಿತ್ತುಕೊಂಡಿರುವುದು ಅಲ್ಲಿ ಒಳಗೊಳಗೇ ಅಸಮಧಾನ ಕುದಿಯಲು ಕಾರಣವಾಗಿದೆ. ವಿವಿಧ ರಾಜ್ಯಗಳ ರೈತರು, ಕಾರ್ಮಿಕರ ಬದುಕನ್ನು ಹಿಂಡಿ ಹಿಪ್ಪೆ ಮಾಡಲಾಗುತ್ತಿದೆ. ನಿರುದ್ಯೋಗ ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ಹೀಗೆ ರಾಜ್ಯಗಳಿಗೆ ಸಂವಿಧಾನ ಬದ್ಧ ಅಧಿಕಾರದ ವಂಚನೆ ಹಿಂದೆ ಪಂಜಾಬಿನಲ್ಲಿ ಖಲಿಸ್ಥಾನ, ಅಸ್ಸಾಮಿನಲ್ಲಿ ಇತರ ನೆರೆ ರಾಜ್ಯಗಳಲ್ಲಿ ವಿಚ್ಛಿದ್ರಕಾರಿ ಚಳುವಳಿಗಳ ಬೆಳವಣಿಗೆ, ಸಾವಿರಾರು ಜನ ಹತ್ಯೆ, ಹಿಂಸೆಗಳನ್ನು ದೇಶ ಎದುರಿಸಲು ಕಾರಣವಾಗಿದೆ.

ದೇಶದ ಐಕ್ಯತೆಯ ಸಾಕಾರ ರೂಪವಾದ ಭಾರತ ರಾಷ್ಟ್ರೀಯತೆ ರೂಪುಗೊಂಡದ್ದೇ ಭಾಷಾವಾರು ರಾಷ್ಟ್ರೀಯತೆಯ ಅಡಿಪಾಯದ ಮೇಲೆ ಎಂಬುದನ್ನು ಮರೆಯಲಾಗದು. ಅದನ್ನು ಕೇವಲ ಪ್ರಾದೇಶಿಕ ಸಂಕುಚಿತತೆ ಎಂದು ಹೀಗಳೆದು ನಿರ್ಲಕ್ಷ್ಯ ಮಾಡಿದರೆ ಭಾರತದ ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ತರುತ್ತದೆ.

ಮತ್ತೊಂದೆಡೆಯಲ್ಲಿ ಕರ್ನಾಟಕದ ಏಕೀಕರಣವಾದ ನಂತರದ ದಿನಗಳಲ್ಲಿ 1983 ರ ಜನತಾ ಪಕ್ಷ ಸರ್ಕಾರದ ಹೊರತಾಗಿ ಬೇರೆ ಯಾವ ಪಕ್ಷವೂ, ಸರ್ಕಾರವೂ ರಾಜ್ಯಗಳ ಸ್ವಾಯತ್ತತೆಯ ಪ್ರಶ್ನೆಯನ್ನು ಅದರ ಎಲ್ಲ ಆಯಾಮಗಳ, ಆಳ ಅಗಲಗಳ ಸಮಗ್ರ ರೂಪದಲ್ಲಿ ಅರ್ಥಪೂರ್ಣವಾಗಿ ಎತ್ತಿರಲಿಲ್ಲ. ರಾಮಕೃಷ್ಣಹೆಗ್ಡೆ ಸರ್ಕಾರದಲ್ಲಿ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಸಂಘಟಿಸಿದ್ದಲ್ಲದೇ, ಜ್ಯೋತಿಬಸುರವರ ನೇತೃತ್ವದಲ್ಲಿ ವಿರೋಧಪಕ್ಷಗಳ ಆಡಳಿತದಲ್ಲಿದ್ದ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಶೃಂಗಸಭೆಯಲ್ಲಿ ಭಾಗವಹಿಸುವುದರ ಮೂಲಕ ಸರ್ಕಾರಿಯಾ ಕಮಿಷನ್ ನೇಮಕಕ್ಕೆ, ಒಂದಿಷ್ಟು ಪರಿಹಾರ ಪಡೆಯುವುದಕ್ಕೆ ಕಾರಣರಾಗಿದ್ದರು.

ಕೇವಲ ಇತ್ತೀಚೆಗೆ ಮಾತ್ರ ತೆರಿಗೆ ಪಾಲು, ಅಕ್ಕಿ ಪಾಲು ಇತ್ಯಾದಿ ಕೆಲ

ಪುಟ 10 ಕ್ಕೆ

ಗಡಿಗಳು ಗೋಡೆಗಳಲ್ಲ: 'ಬಹುಭಾಷೆ' ಎಂಬುದು ವಿಶಿಷ್ಟ ಅವಕಾಶ, ತೊಡಕಲ್ಲ

ಕರ್ನಾಟಕ ರಾಜ್ಯೋತ್ಸವ-ವಿಶೇಷ ಲೇಖನ

ಆರ್. ರಾಮಕೃಷ್ಣ

ನವೆಂಬರ್ 1 ರ ಕರ್ನಾಟಕ ರಾಜ್ಯೋತ್ಸವ ಹತ್ತಿರ ಬಂದಾಗ, ಕೆಲವೊಮ್ಮೆ ಇನ್ನೂ ದೂರವಿದ್ದಾಗಲೂ ಸಹ, ಬೆಳಗಾವಿ ಜಿಲ್ಲೆಯಲ್ಲಿ ಕನ್ನಡ ಮತ್ತು ಮರಾಠಿ ಭಾಷೆಗಳ ಹೆಸರಿನಲ್ಲಿ ಎರಡೂ ಕಡೆ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಅಣಿನೆರೆಸಲು ಪೈಪೋಟಿ ನಡೆಸುವುದು, ನಾನಾ ರೂಪಗಳಲ್ಲಿ ಶಕ್ತಿ ಪ್ರದರ್ಶನಕ್ಕೆ ಪ್ರಯತ್ನಿಸುವುದು, ವಾದ ವಿವಾದ, ತಿಕ್ಕಾಟಗಳು ನಡೆಯುವುದನ್ನು ನಾವು ನೋಡುತ್ತೇವೆ. ಮೊನ್ನೆಯ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿಯೂ ಇಂತಹ ಶಕ್ತಿ ಪ್ರದರ್ಶನ ನಡೆದದ್ದು ವರದಿಯಾಗಿದೆ. ಭಾಷಾವಾರು ರಾಜ್ಯಗಳ ರಚನೆಯ ಹಿನ್ನೆಲೆಯಲ್ಲಿ ರಾಜ್ಯಗಳ ಏಕೀಕರಣ ಸಾಕಾರಗೊಂಡ ದಿನಗಳಂದು ಎರಡೂ ರಾಜ್ಯಗಳಲ್ಲಿ ಸಂಭ್ರಮಾಚರಣೆ ನಡೆಯುವುದು ಸಹಜ. ಕರ್ನಾಟಕ ರಾಜ್ಯೋತ್ಸವದ ನೆನಪಿನಲ್ಲಿ ಜನರು ಒಟ್ಟು ಸೇರುವುದು, ಇತಿಹಾಸವನ್ನು ನೆನಪಿಸಿಕೊಳ್ಳುವುದು, ನಾಡು ಮತ್ತು ನುಡಿಯ ಬೆಳವಣಿಗೆಯ ಬಗೆಗೆ ಚರ್ಚೆ ನಡೆಸುವುದು ಸಹ ಸಹಜ ಮತ್ತು ಸ್ವಾಗತಾರ್ಹವಾದ ಕೆಲಸ. ಅದೇ ರೀತಿಯಾಗಿ ಮಹಾರಾಷ್ಟ್ರದ ಜನರು, ಮೇ 1 ರಂದು ಪ್ರಧಾನವಾಗಿ ಮರಾಠಿ ಭಾಷೆಯ ಪ್ರದೇಶಗಳೆಂಬ ಆಧಾರದಲ್ಲಿ ನಡೆದ 'ಮಹಾರಾಷ್ಟ್ರ ಏಕೀಕರಣ'ದ ದಿನವನ್ನು ಆಚರಿಸಿ ಸಂಭ್ರಮಿಸುವುದು ಸಹ ಸಹಜವಾದದ್ದು. ಆದರೆ ಈ ಪ್ರಕ್ರಿಯೆಯೂ ಎರಡೂ ಕಡೆಗಳಲ್ಲಿ ಅನಾರೋಗ್ಯಕರವಾದ ಭಾಷಾಂಧತೆಗೆ, ದ್ವೇಷ ಮತ್ತು ವಿಭಜನೆಗೆ ಕುಮ್ಮಕ್ಕು ಕೊಡುವಂತೆ ಆಗಬಾರದು ಎಂಬ ಎಚ್ಚರ ಎಲ್ಲರಿಗೂ ಬೇಕು. ಆದರೆ ಈ ಎಚ್ಚರ ಕೊರತೆ ಎರಡೂ ಕಡೆ ಇರುವುದು ಎದ್ದು ಕಾಣುತ್ತದೆ ಎಂಬುದು ಆತಂಕಕಾರಿ ವಿಷಯವಾಗಿದೆ. ಆಳುವ ಸರಕಾರಗಳು, ಸಂಕುಚಿತ ಧೋರಣೆಯ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಭಾವನೆಗಳನ್ನು ಬಡಿದೆಬ್ಬಿಸಿ ಜಾಣ್ಮೆಯ ಪಟ್ಟಭದ್ರ ಆಟಗಳನ್ನು ಆಡುವುದು ಇನ್ನೂ ಆತಂಕಕಾರಿಯಾಗಿದೆ.

ಈ ಸಂದರ್ಭಗಳಲ್ಲಿ ಜಿಲ್ಲೆಯಲ್ಲಿ ಮರಾಠಿಗರು ಬಹುಸಂಖ್ಯಾತರಾಗಿದ್ದಾರೆಂದು, ಬೆಳಗಾವಿ ಜಿಲ್ಲೆಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಮಹಾರಾಷ್ಟ್ರದವರು ಕೇಳುವುದು, ಕನ್ನಡದವರು ದೊಡ್ಡ ಸಂಖ್ಯೆಯಲ್ಲಿದ್ದಾರೆಂದು ಸೊಲ್ಲಾಪುರನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಕರ್ನಾಟಕದವರು ವಾದಿಸುವುದು ಸಹ ನಡೆಯುತ್ತದೆ. ಇಂತಹ ಗಡಿ ವಿವಾದಗಳು ಕೇವಲ ಮಹಾರಾಷ್ಟ್ರದ ಜೊತೆ ಮಾತ್ರವಲ್ಲ, ಕೇರಳದ ಕಾಸರಗೋಡು ಜಿಲ್ಲೆ ಕರ್ನಾಟಕಕ್ಕೆ ಸೇರಬೇಕೆಂದು ಬಯಸುವುದು, ವಾದಿಸುವುದೂ ಇದೆ ಮತ್ತು ಇಂತಹ ಇನ್ನೂ ಹಲವು ಮಾತುಗಳು ಈಗಲೂ ಕೇಳಿಬರುತ್ತವೆ. ಯಾವ ಜಿಲ್ಲೆ ಯಾವ ತಾಲ್ಲೂಕುಗಳು ಯಾವ ರಾಜ್ಯಕ್ಕೆ ಸೇರಬೇಕು ಎಂಬುದಕ್ಕಿಂತ, ಗಡಿನಾಡಿನಲ್ಲಿ ಗ್ರಾಮಗಳನ್ನು ಒಂದು ಘಟಕವೆಂದು ಪರಿಗಣಿಸಿ ಗಡಿಗಳನ್ನು ಗುರುತಿಸಬೇಕು ಎಂದು ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಕಮ್ಯೂನಿಸ್ಟ್ ಪಕ್ಷವು ಆಗ ಪ್ರಬಲವಾಗಿ ಪ್ರತಿಪಾದಿಸಿತ್ತು. ಈ ವಾದದ ಹಿಂದೆ ಒಂದು ವೈಜ್ಞಾನಿಕ ತರ್ಕ ಇತ್ತು. ಆದರೆ ಗಡಿಗಳ ರಚನೆ ಹಾಗೆ ಆಗಲಿಲ್ಲ ಎನ್ನುವುದು ವಿಷಾದನೀಯವಾದರೂ ಸಹ ಕರ್ನಾಟಕ ಏಕೀಕರಣಗೊಂಡು ಈಗಾಗಲೇ 68 ವರ್ಷಗಳು ಸಂದಿವೆ ಎಂಬುದನ್ನು ಎಲ್ಲರೂ ಗಮನಿಸಬೇಕು. ಈಗ ಗಡಿಗಳನ್ನು 'ಗೋಡೆ'ಗಳೆಂದು ಭಾವಿಸಿ ವಾದ-ತರ್ಕ ಮಂಡಿಸುವುದಕ್ಕಿಂತಲೂ, ಗಡಿನಾಡಿನ ಎಲ್ಲ ಭಾಷೆಗಳ ಅಭಿವೃದ್ಧಿಯೂ ಸೇರಿದಂತೆ ಇಡೀ ಗಡಿನಾಡೇ ಸಮಗ್ರವಾಗಿ ಅಭಿವೃದ್ಧಿಯಾಗಲು ಏನು ಮಾಡಬೇಕು ಎಂಬ ಬಗೆಗೆ ಯೋಚಿಸುವುದು ಬಹಳ ಅಗತ್ಯವಾದುದು. ಹಾಗೆಯೇ ಗಡಿನಾಡಿನ ಜನರ ಐಕ್ಯತೆಯನ್ನು ಭಾಷೆಗಳ ಹೆಸರಿನಲ್ಲಿ ವಿಭಜಿಸದೇ, ಜನರ ನಡುವಿನ ಐಕ್ಯತೆಯನ್ನು ಬೆಸೆಯುತ್ತಾ ಗಡಿನಾಡಿನ ಮತ್ತು ನಾಡಿನ ಸಮಗ್ರ ಅಭಿವೃದ್ಧಿಯನ್ನು ಸಾಧಿಸುವ ದಾರಿಯನ್ನು ಕಂಡು ಕೊಳ್ಳುವುದು ಬಹಳ ಮುಖ್ಯವಾದದ್ದು.

ಅನಾನುಕೂಲವಲ್ಲ

ಗಡಿನಾಡಿನ ಜಿಲ್ಲೆಗಳಲ್ಲಿ ತಾಲ್ಲೂಕುಗಳಲ್ಲಿ ಎರಡು ಭಾಷೆಗಳ, ಕೆಲವು ಭಾಗಗಳ ಗಡಿನಾಡಿನಲ್ಲಿ ಮೂರು ನಾಲ್ಕು ಭಾಷೆಯ ಜನರು ವಾಸಿಸುತ್ತಿರುವುದು ಇದ್ದೇ ಇದೆ. ಇಂತಹ ಪರಿಸ್ಥಿತಿಯನ್ನು ಅನಾನುಕೂಲ, ತೊಡಕು ಅಥವಾ ತೊಂದರೆ ಎಂದು ಭಾವಿಸದೇ, ಇಂತಹ ಪರಿಸ್ಥಿತಿಯು ನಾಡಿನ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪ್ರಗತಿಗೆ ಇರುವ ಒಂದು ವಿಶೇಷ ಅವಕಾಶ ಎಂದು ತಿಳಿದು ಆ ರೀತಿಯಲ್ಲಿ ಬಳಸಿಕೊಳ್ಳಲು ಸಾಧ್ಯವಿದೆ.

> **ಒಂದು ನಿರ್ದಿಷ್ಟ ಪ್ರದೇಶದಲ್ಲಿ ಬಹುಭಾಷೆಗಳ ಜನರು ವಾಸಿಸುವುದನ್ನು ತೊಡಕು-ತೊಂದರೆ ಎಂದು ಭಾವಿಸುವುದು ಸಾಧ್ಯ. ಅದಕ್ಕೆ ಬದಲಾಗಿ ಅದೊಂದು ವಿಶೇಷ ಅವಕಾಶ ಎಂದು ಭಾವಿಸುವುದೂ ಸಾಧ್ಯ. ಆಯ್ಕೆ ನಮ್ಮ ಕೈಯಲ್ಲಿ ಇದೆ.**

ಮಕ್ಕಳು ತಮ್ಮ ಪ್ರಾಥಮಿಕ ಶಿಕ್ಷಣವನ್ನು ತಮ್ಮ ತಾಯಿನುಡಿಯಲ್ಲಿ ಕಲಿಯುವುದು ಉತ್ತಮ ಎಂಬುದು ವೈಜ್ಞಾನಿಕವಾಗಿ ಸಿದ್ಧವಾದ ಒಂದು ನೀತಿಯಾಗಿದೆ. ಎರಡು ಭಾಷೆಯ ಜನರಿರುವ ಪ್ರದೇಶ ಅಥವಾ ಬಹುಭಾಷಾ ಪ್ರದೇಶಗಳಲ್ಲಿ, ಅದು ಯಾವುದೇ ರಾಜ್ಯದಲ್ಲಿರಲಿ, ಅಲ್ಲಿನ ಮಕ್ಕಳಿಗೆ ತಮ್ಮ ತಾಯಿನುಡಿಯಲ್ಲಿ ಶಿಕ್ಷಣ ಪಡೆಯುವ ಅವಕಾಶವನ್ನು ರಾಜ್ಯ ಸರಕಾರ ಒದಗಿಸಬೇಕು. ಉದಾಹರಣೆಗೆ ಬೆಳಗಾವಿ ಜಿಲ್ಲೆಯಲ್ಲಿ ಕನ್ನಡದ ಮಕ್ಕಳು ಕನ್ನಡದಲ್ಲೂ, ಮರಾಠಿ ಮಕ್ಕಳು ಮರಾಠಿ ಭಾಷೆಯಲ್ಲೂ ಉತ್ತಮವಾದ ಪ್ರಾಥಮಿಕ ಶಿಕ್ಷಣ ಪಡೆಯುವ ಅವಕಾಶವನ್ನು ಕರ್ನಾಟಕ ಸರಕಾರ ಒದಗಿಸಬೇಕು. ಅದೇ ರೀತಿಯಲ್ಲಿ ಮಹಾರಾಷ್ಟ್ರ ಸರಕಾರ ಕರ್ನಾಟಕದ ಗಡಿಭಾಗಗಳಲ್ಲಿ ಮರಾಠಿ ಮತ್ತು ಕನ್ನಡ ಭಾಷೆ ಎರಡರಲ್ಲೂ ಮಕ್ಕಳು ಪ್ರಾಥಮಿಕ ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಡಬೇಕು. ಇದರಿಂದ ಕಲಿಕೆ ಚೆನ್ನಾಗಿ ಆಗುತ್ತದೆ ಮಾತ್ರವಲ್ಲ ಎರಡೂ ಭಾಷೆಗಳ ಬೆಳವಣಿಗೆಗೆ ಅವಕಾಶ ಆಗುತ್ತದೆ. ಆದರೆ ಗಡಿಭಾಗಗಳ ಶಾಲೆಗಳು ತೀರಾ ನಿರ್ಲಕ್ಷ್ಯಕ್ಕೆ ಒಳಗಾಗಿವೆ ಎನ್ನುತ್ತವೆ ವರದಿಗಳು.

ಬಹುಭಾಷೆ: ವಿಶೇಷ ಅವಕಾಶ

ಒಂದು ನಿರ್ದಿಷ್ಟ ಪ್ರದೇಶದಲ್ಲಿ ಬಹುಭಾಷೆಗಳ ಜನರು ವಾಸಿಸುವುದನ್ನು ತೊಡಕು-ತೊಂದರೆ ಎಂದು ಭಾವಿಸುವುದು ಸಾಧ್ಯ. ಅದಕ್ಕೆ ಬದಲಾಗಿ ಅದೊಂದು ವಿಶೇಷ ಅವಕಾಶ ಎಂದು ಭಾವಿಸುವುದೂ ಸಾಧ್ಯ. ಆಯ್ಕೆ ನಮ್ಮ ಕೈಯಲ್ಲಿ ಇದೆ. ಇಲ್ಲಿ ಒಂದು ವಿಷಯವನ್ನು ನೆನಪಿಸಿಕೊಳ್ಳಬೇಕು. ಮಹಾರಾಷ್ಟ್ರದ ರಾಜಧಾನಿ ಮುಂಬೈನಲ್ಲಿ ಹಲವಾರು ದಶಕಗಳಿಂದಲೂ ಕನ್ನಡ ಮಾಧ್ಯಮ ಶಾಲೆಗಳು ಅಸ್ತಿತ್ವದಲ್ಲಿವೆ ಮತ್ತು ಕನ್ನಡ ಸಾಹಿತ್ಯ-ಸಂಸ್ಕೃತಿಯ ಬೆಳವಣಿಗೆಗೆ ಬಹುದೊಡ್ಡ ಕಾಣಿಕೆ ಕೊಟ್ಟ ಹಲವಾರು ಜನ ಸಾಹಿತಿ-ಕಲಾವಿದರು, ವಿವಿಧ ಕ್ಷೇತ್ರಗಳ ಸಾಧಕರು ಮುಂಬೈನ ಇಂತಹ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕಲಿತವರು ಎಂಬುದನ್ನು ಇಲ್ಲಿ ಗಮನಿಸಬಹುದು.

> **ಮಹಾರಾಷ್ಟ್ರದ ರಾಜಧಾನಿ ಮುಂಬೈನಲ್ಲಿ ಹಲವಾರು ದಶಕಗಳಿಂದಲೂ ಕನ್ನಡ ಮಾಧ್ಯಮ ಶಾಲೆಗಳು ಅಸ್ತಿತ್ವದಲ್ಲಿವೆ ಮತ್ತು ಕನ್ನಡ ಸಾಹಿತ್ಯ-ಸಂಸ್ಕೃತಿಯ ಬೆಳವಣಿಗೆಗೆ ಬಹುದೊಡ್ಡ ಕಾಣಿಕೆ ಕೊಟ್ಟ ಹಲವಾರು ಜನ ಸಾಹಿತಿ-ಕಲಾವಿದರು, ವಿವಿಧ ಕ್ಷೇತ್ರಗಳ ಸಾಧಕರು ಮುಂಬೈನ ಇಂತಹ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕಲಿತವರು ಎಂಬುದನ್ನು ಇಲ್ಲಿ ಗಮನಿಸಬಹುದು.**

ನಮ್ಮ ರಾಜ್ಯದೊಂದಿಗೆ ಗಡಿಯನ್ನು ಹಂಚಿಕೊಂಡಿರುವ ನೆರೆಯ ರಾಜ್ಯವಾದಾಕ್ಷಣ ಮಹಾರಾಷ್ಟ್ರ ನಮಗೆ ಶತ್ರುವಾಗಬೇಕಿಲ್ಲ. ಹಾಗೆಯೇ ಕೇರಳ, ತಮಿಳುನಾಡು, ಆಂಧ್ರ ಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳು ಸಹ. ಇಲ್ಲಿ 'ವಿಶೇಷ ಅವಕಾಶ' ಎಂದರೇನು ಕೆಲವು ಉದಾಹರಣೆಗಳೊಂದಿಗೆ ಪರಿಶೀಲಿಸಿ ನೋಡೋಣ.

ಸಾಮಾನ್ಯವಾಗಿ ಗಡಿ ಭಾಗದಲ್ಲಿ ವಾಸಿಸುವ ಜನರು ಸಹಜವಾಗಿಯೇ ಎರಡು ಅಥವಾ ಮೂರು ಭಾಷೆಗಳನ್ನು ಚೆನ್ನಾಗಿಯೇ ಕಲಿತಿರುತ್ತಾರೆ ಮತ್ತು ಅವುಗಳನ್ನು ಸುಲಲಿತವಾಗಿ ಮಾತನಾಡುತ್ತಾರೆ ಎಂಬುದು ನಮಗೆಲ್ಲಾ ಗೊತ್ತಿರುವ ವಿಷಯ. ಮಹಾರಾಷ್ಟ್ರದ ರಂಗಭೂಮಿಯ ಚಳುವಳಿ ಶ್ರೇಷ್ಠ ನಾಟಕಗಳಿಗಾಗಿ ದೇಶದಲ್ಲೆಲ್ಲಾ ಪ್ರಖ್ಯಾತವಾದುದು. ಮಹಾರಾಷ್ಟ್ರದಲ್ಲಿ ಮರಾಠಿ ಭಾಷೆಯಲ್ಲಿ ಯಾವುದೋ ಒಂದು ಉತ್ತಮವಾದ ನಾಟಕ ಪ್ರಯೋಗ ನಡೆಯಿತು ಎಂದು ಭಾವಿಸೋಣ. ಆಗ ಸಹಜವಾಗಿ ಕರ್ನಾಟಕದ ಗಡಿಭಾಗದಲ್ಲಿನ ಕನ್ನಡಿಗರೂ ಸಹ ಈ ನಾಟಕನ್ನು ನೋಡಿ ಆನಂದಿಸುವ ಮತ್ತು ಅದನ್ನು ಕನ್ನಡದಲ್ಲಿಯೂ ಪ್ರಯೋಗ ಮಾಡುವ ಅವಕಾಶ ಸುಲಭವಾಗಿ ಒದಗಿಬರುತ್ತದೆ. ಕೇರಳ ರಾಜ್ಯವು ಅತ್ಯುತ್ತಮ ಜನಪರ ಸಿನಿಮಾಗಳಿಗಾಗಿ ಖ್ಯಾತವಾಗಿದೆ. ಯಾವುದೇ ಉತ್ತಮ ಮಲೆಯಾಳಿ ಸಿನಿಮಾವು ಬಿಡುಗಡೆಯಾದ ಕೂಡಲೇ, ಅದನ್ನು ಕನ್ನಡ ಮಾತು ಜೋಡಿಸಿಯೋ ಅಥವಾ ಪುನರೂಪಿಸಿಯೋ ಯಾವುದೋ ಒಂದು ರೂಪದಲ್ಲಿ ತಕ್ಷಣ ಆ ಸಿನಿಮಾವನ್ನು ಕನ್ನಡಕ್ಕೆ ತಂದು ಬಿಡಬಹುದು. ಹಾಗೆಯೇ ತಮಿಳಿನಲ್ಲಿ ಪ್ರಕಟವಾಗುವ ಯಾವುದೇ ಉತ್ತಮ ಕತೆ-ಕಾದಂಬರಿ ಅಥವಾ ಆಂಧ್ರಪ್ರದೇಶದಲ್ಲಿ ತೆಲುಗಿನಲ್ಲಿ ಪ್ರಕಟವಾಗುವ ಯಾವುದೇ ಉತ್ತಮ ಕವನವನ್ನು ತಕ್ಷಣ ಕನ್ನಡ ಭಾಷೆಗೆ ಅನುವಾದಿಸಿ ಸಮಸ್ತ ಕರ್ನಾಟಕದ ಜನತೆಗೆ ಅದರ ಸವಿಯನ್ನು ಉಣ ಬಡಿಸಬಹುದು.

ಯಾವ ಸರಕಾರಗಳೂ, ಯಾವ ಸಂಘಟನೆಗಳೂ ಪ್ರಜ್ಞಾಪೂರ್ವಕವಾಗಿ ಇಂತಹ ಕೆಲಸವನ್ನು ಯೋಜಿತ ರೀತಿಯಲ್ಲಿ ವ್ಯವಸ್ಥಿತವಾಗಿ ಮತ್ತು ವ್ಯಾಪಕವಾಗಿ ಮಾಡುತ್ತಿರುವುದು ಕಂಡು ಬರುವುದಿಲ್ಲವಾದರೂ ಎರಡು-ಮೂರು ಭಾಷೆಗಳನ್ನು ಬಲ್ಲ ಜನ ಸಾಮಾನ್ಯರು ಈಗಾಗಲೇ ಇಂತಹದ್ದನ್ನು ಮಾಡುತ್ತಿದ್ದಾರೆ. ಸಿನಿಮಾ ಅಥವಾ ಟಿ.ವಿ. ಧಾರಾವಾಹಿಗಳಲ್ಲಿ ವ್ಯಾಪಾರಿ ಹಿತಾಸಕ್ತಿಯೊಂದಿಗೆ ಇಂತಹ ಹಲವು ಕೊಡು ಕೊಳ್ಳುವಿಕೆಗಳು ವ್ಯಾಪಕವಾಗಿ ನಡೆಯುತ್ತಿವೆಯಾದರೂ ಸರಕಾರಗಳೂ ಪ್ರಜ್ಞಾಪೂರ್ವಕವಾಗಿ ಇಂತಹ ಕೊಡು-ಕೊಳುವಿಕೆಯನ್ನು ಪ್ರೋತ್ಸಾಹಿಸಿದರೆ, ಬೆಂಬಲ ನೀಡಿದರೆ ಜನಪರವಾದ ಉತ್ತಮ ಕಲೆ-ಸಾಹಿತ್ಯ, ಸಂಸ್ಕೃತಿ, ರಂಗಭೂಮಿ ಪ್ರಯೋಗ ಮುಂತಾದವು ರಾಜ್ಯ ರಾಜ್ಯಗಳ ಗಡಿ ಗೋಡೆಗಳನ್ನು ಮೀರಿ ದೇಶದಲ್ಲೆಡೆ ಹರಡಲು ಅವಕಾಶವಾಗುತ್ತದೆ.

ರಾಜ್ಯದಲ್ಲಿ 'ಕರ್ನಾಟಕ ಪ್ರದೇಶ ಗಡಿ ಅಭಿವೃದ್ಧಿ ಪ್ರಾಧಿಕಾರ' ಎಂಬುದೊಂದು ಪ್ರಾಧಿಕಾರ ಇದ್ದು ಈ ನಿಟ್ಟಿನಲ್ಲಿ ಅದು ಕಾರ್ಯಪ್ರವೃತ್ತವಾಗಬೇಕಿದೆ. ಕರ್ನಾಟಕದ ಜನರು ಕನ್ನಡ ಪ್ರೇಮದ ಹೆಸರಿನಲ್ಲಿ ಭಾವನಾತ್ಮಕವಾಗಿ ಮತ್ತು ಸಂಕುಚಿತವಾಗಿ ಯೋಚಿಸಿ, ಬೇರೆ ಬೇರೆ ಭಾಷೆಗಳ ಬಗೆಗೆ ತಿರಸ್ಕಾರದ ಭಾವನೆ ಬೆಳೆಸಿಕೊಳ್ಳುವುದು ಮುಂತಾದವುಗಳಿಂದ ನಮ್ಮ ಕರ್ನಾಟಕದ ಸಾಂಸ್ಕೃತಿಕ-ಸಾಮಾಜಿಕ ಪ್ರಗತಿಗೆ ಹಾನಿಯಾಗುತ್ತದೆ ಎಂಬುದನ್ನು ಅರಿಯಬೇಕಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರಗಳ ನಡುವೆ ಮಾತುಕತೆ, ಸಹಕಾರ ಅಗತ್ಯವಾಗುತ್ತದೆ. ಕೇಂದ್ರ ಸರಕಾರವು ಒತ್ತಾಯದಿಂದ ರಾಜ್ಯಗಳ ಮತ್ತು ಜನರ ಮೇಲೆ ಹಿಂದಿ ಮತ್ತು ಸಂಸ್ಕೃತ ಭಾಷೆಯನ್ನು ಹೇರುವುದನ್ನು ಬಿಟ್ಟು ಜನ ಭಾಷೆಗಳ ನಡುವೆ ಪರಸ್ಪರ ಕೊಡು-ಕೊಳುವಿಕೆಯನ್ನು ಪ್ರೋತ್ಸಾಹಿಸುವ ಕೆಲಸಕ್ಕೆ ಮುಂದಾಗಬೇಕಿದೆ.

ಮುಂಬೈ, ಬೆಂಗಳೂರು, ಹೈದರಾಬಾದ್ ಮುಂತಾದವು ಬಹುಭಾಷೆಗಳ ಜನರು ನೆಲೆಸಿರುವ ಮಹಾನಗರಗಳಾಗಿದ್ದು, ಬೇರೆ ಬೇರೆ ರಾಜ್ಯಗಳಿಂದ ಜನರು ಬದುಕನ್ನು ಅರಸಿ ಇಲ್ಲಿ ನೆಲೆಕಂಡುಕೊಂಡಿದ್ದಾರೆ. ಮುಂಬೈ ನಗರಕ್ಕೆ ಕರ್ನಾಟಕದ ಕರಾವಳಿ ಭಾಗದಿಂದ ಮತ್ತು ಉತ್ತರ ಕರ್ನಾಟಕದ ಜಿಲ್ಲೆಗಳಿಂದ ದೊಡ್ಡ ಪ್ರಮಾಣದಲ್ಲಿ ಜನರು ಉದ್ಯೋಗಗಳನ್ನು ಅರಸಿ ಹೋಗಿ ನೆಲೆಸಿದ್ದಾರೆ. ಹಾಗೆಯೇ ಬೆಂಗಳೂರಿಗೆ ನಾನಾ ರಾಜ್ಯಗಳಿಂದ ಬಂದು ನೆಲೆಸಿದವರಿದ್ದಾರೆ. ಇವೆರಡು ಉದಾಹರಣೆಗಳಷ್ಟೆ. ಭಾಷಾವಾರು ರಾಜ್ಯಗಳು ತಮ್ಮ ತಮ್ಮ ಭಾಷೆಗಳ ಪ್ರಗತಿಗೆ ಅಗತ್ಯವಾದ ಕಾರ್ಯಗಳನ್ನು ಪ್ರಾಮಾಣಿಕವಾಗಿ ಮಾಡುತ್ತಲೇ, ಬಹುಭಾಷೆಗಳಿರುವ ಪರಿಸ್ಥಿತಿಯನ್ನು ಒಂದು ಉತ್ತಮ ಅವಕಾಶವಾಗಿ ಬಳಸಿಕೊಳ್ಳಲು ದೃಢ ನಿಶ್ಚಯದಿಂದ ಯೋಜಿಸಬೇಕಿದೆ. ಕನ್ನಡ, ಮರಾಠಿ, ತಮಿಳು, ತೆಲುಗು, ಮಲೆಯಾಳಿ, ಹಿಂದಿ, ಉರ್ದು ಇತ್ಯಾದಿ ಭಾಷೆಗಳನ್ನು ಮಾತನಾಡಿದರೂ ಸಹ ನಾವು ಭಾರತೀಯರು ಎಂಬ ಭಾವವನ್ನು ಬಿಟ್ಟುಕೊಡಬೇಕಿಲ್ಲ ಎಂಬುದನ್ನು ನಾವೆಲ್ಲಾ ಮನಗಾಣಬೇಕಿದೆ.

ಭಾಷೆಗಳ ರಾಷ್ಟ್ರೀಯತೆಯನ್ನು ಪ್ರಾದೇಶಿಕತೆ ಎಂದು ಹೀಗಳೆದ ಮೋದಿ........ ಪುಟ 9 ರಿಂದ

ಪ್ರಶ್ನೆಗಳನ್ನು ಬಿಡಿ ಬಿಡಿಯಾಗಿ, ಅರೆಬರೆಯಾಗಿ ಎತ್ತಲಾಗುತ್ತಿದೆ.

ಏಕೀಕರಣದ ನಂತರ ಬೆಳೆದ ಕನ್ನಡ ಚಳುವಳಿಯ ಯಾವ ನಾಯಕರೂ ಭಾವನಾತ್ಮಕವಾಗಿ ಕನ್ನಡ ಭಾಷೆ, ಗಡಿ, ನೀರು ಹಂಚಿಕೆ ಬಿಟ್ಟರೆ ಕರ್ನಾಟಕ ಎಂಬ ರಾಜ್ಯದ ಸ್ವಾಯತ್ತತೆ, ಹಣಕಾಸು ಹಾಗೂ ಕಾನೂನು ಅಧಿಕಾರಗಳ ಬಗ್ಗೆ ತಲೆಯನ್ನೇ ಕೆಡಿಸಿಕೊಂಡಿಲ್ಲ.

ಇದರಿಂದಾಗಿ ಕರ್ನಾಟಕದ ಜನತೆಗೆ ಕರ್ನಾಟಕ ಏಕೀಕರಣದ ನೈಜ ಪರಿಕಲ್ಪನೆ, ಸ್ವಾಯತ್ತತೆಯ ವಿಶಾಲತೆಯ ಬಗ್ಗೆ ಕೇರಳ, ತಮಿಳುನಾಡುಗಳ ಜನತೆಗಿರುವಷ್ಟು ಅರಿವು ಮೂಡಿಲ್ಲ. ಇದರಿಂದಾಗಿ ಬಿಜೆಪಿ, ಆರೆಸ್ಸೆಸ್‌ಗಳು ಭಾಷಾವಾರು ರಾಜ್ಯ ಪರಿಕಲ್ಪನೆಯನ್ನೇ ನಾಶ ಮಾಡುವುದಕ್ಕೆ ಅವಕಾಶ ಉಂಟಾಗುತ್ತಿದೆ.


"ಉದಯವಾಯಿತು ನಮ್ಮ ಚೆಲುವ ಕನ್ನಡ ನಾಡು, ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು"

ಎಂಬ ಕಲ್ಪನೆ ಮೂಡಬೇಕು. ಬದುಕು ಬಲುಹಾಗುವುಂತಹ ಕನ್ನಡನಾಡು ಇನ್ನೂ ಉದಯವಾಗಿಲ್ಲ. ಅದನ್ನು ನಿರ್ಮಾಣ ಮಾಡಬೇಕು ಎಂಬ ಅರಿವು ಬೆಳೆಸಬೇಕು.

ಕೇಂದ್ರದ ಸಾಲ: 9 ವರ್ಷಗಳಲ್ಲಿ 100 ಲಕ್ಷ ಕೋಟಿ ಹೆಚ್ಚಳ

ಒಟ್ಟು ಸಾಲ ಮಾರ್ಚ್ 2023ಕ್ಕೆ 155.77 ಲಕ್ಷ ಕೋಟಿ ರೂ. ಮಾರ್ಚ್ 2024 ಕ್ಕೆ 172.50 ಲಕ್ಷ ಕೋಟಿ ರೂ.!!

ಸಿ. ಸಿದ್ದಯ್ಯ



9 ವರ್ಷಗಳ ಮೋದಿ ಆಡಳಿತದಲ್ಲಿನ ಸಾಧನೆಗಳ ಪಟ್ಟಿಯಲ್ಲಿ ಭಾರತ ಸರ್ಕಾರದ ಸಾಲವನ್ನು 3 ಪಟ್ಟು ಹೆಚ್ಚಳ ಮಾಡಿರುವುದನ್ನು ಬಿಜೆಪಿಯವರು ಸೇರಿಸುವುದಿಲ್ಲ. ಅಂದಾಜಿನ ಪ್ರಕಾರ, ಒಕ್ಕೂಟ ಸರ್ಕಾರದ ಸಾಲವೊಂದೇ ಭಾರತದ ಪ್ರತಿ ಪ್ರಜೆಯ ಮೇಲೆ 2014 ರಲ್ಲಿ 43 ಸಾವಿರ ರೂಪಾಯಿಗಳಿದ್ದರೆ, 2023ರಲ್ಲಿ 1.10 ಲಕ್ಷ ರೂಗಳಿಗೆ ಏರಿಕೆಯಾಗಿದೆ. ಕಳೆದ ಒಂಬತ್ತು ವರ್ಷಗಳಲ್ಲಿ ಪ್ರತಿ ಭಾರತೀಯರ ಸಾಲವು 67,000 ರೂ.ಗಳಷ್ಟು ಹೆಚ್ಚಾಗಿದೆ. ಇದು ನಿರಂತರವಾಗಿ ಏರುತ್ತಲೇ ಇದೆ. ಮತ್ತೊಂದೆಡೆ ಜಗತ್ತಿನ 100 ಸಿರಿವಂತರ ಪಟ್ಟಿಯಲ್ಲಿ ಭಾರತದ 8 ಸಿರಿವಂತರಿದ್ದಾರೆ!!

ಮೋದಿ–9 ವರ್ಷಗಳು–ಭಾಗ–23

1947 ರಿಂದ ಮಾರ್ಚ್ 31, 2014 ರವರೆಗೆ (ಅಂದರೆ, 67 ವರ್ಷಗಳಲ್ಲಿ) ಭಾರತ ಸರ್ಕಾರದ ಒಟ್ಟು ಸಾಲವು 55.77 ಲಕ್ಷ ಕೋಟಿ ರೂ. ಇತ್ತು. ಕಳೆದ ಒಂಬತ್ತು ವರ್ಷಗಳಲ್ಲಿ ಅದು 2.77 ಪಟ್ಟು ಜಿಗಿತವಾಗಿ 155.77 ಲಕ್ಷ ಕೋಟಿ ರೂ.ಗೆ ಬೆಳೆದಿದೆ.


ಒಕ್ಕೂಟ ಸರ್ಕಾರದ ಬಜೆಟ್ ನಲ್ಲಿನ ಮಾಹಿತಿಯಂತೆ ಸರ್ಕಾರದ ಒಟ್ಟು ಸಾಲ 2023ರ ಮಾರ್ಚ್ ನಲ್ಲಿ 155.77 ಲಕ್ಷ ಕೋಟಿ ರೂಪಾಯಿ ಇದ್ದರೆ, 2024 ರ ಮಾರ್ಚ್ ಗೆ 172.50 ಲಕ್ಷ ಕೋಟಿ ರೂ.ಗಳಿಗೆ ಹೆಚ್ಚಲಿದೆ. ಇದರರ್ಥ, 2023–24ರ ಆರ್ಥಿಕ ವರ್ಷವೊಂದರಲ್ಲೇ ಮತ್ತೆ 16 ಲಕ್ಷ ಕೋಟಿ ರೂಪಾಯಿ ಸಾಲ ಮಾಡಲು ಮೋದಿ ಸರ್ಕಾರ ಮುಂದಾಗಿದೆ. 2014ರಲ್ಲಿ ಆ ಒಂದು ವರ್ಷ ಮಾಡಿದ ಸಾಲ ಕೇವಲ 5.92 ಲಕ್ಷ ಕೋಟಿ ರೂಪಾಯಿಗಳಷ್ಟಿತ್ತು.

ಸಾಲ ಹೆಚ್ಚಾದರೆ, ಮರುಪಾವತಿಯ ಹೊರೆ ಹೆಚ್ಚಾಗುತ್ತದೆ ಮತ್ತು ಸಾಲದ ಬಡ್ಡಿ ಪಾವತಿಗೆ ಹೆಚ್ಚಿನ ಹಣ ತೆಗೆದಿರಿಸಬೇಕಾಗುತ್ತದೆ. 2021–22 ರಲ್ಲಿ, ಕೇಂದ್ರವು ಬಡ್ಡಿ ಪಾವತಿಗಾಗಿ ರೂ 8.14 ಲಕ್ಷ ಕೋಟಿಗಳನ್ನು ಖರ್ಚು ಮಾಡಿದೆ, ಇದು ವರ್ಷಕ್ಕೆ ಅದರ ಒಟ್ಟು ವೆಚ್ಚದ 21.6 ಪ್ರತಿಶತ ಆಗಿದೆ. 2022–23ರ ಬಜೆಟ್ ಅಂದಾಜಿನ ಪ್ರಕಾರ ಕೇಂದ್ರವು ಬಡ್ಡಿ ಪಾವತಿಗೆ 9.40 ಲಕ್ಷ ಕೋಟಿ ರೂ. ಖರ್ಚು ಮಾಡಿದೆ. ಇದು ಸರ್ಕಾರದ ಒಟ್ಟು ವೆಚ್ಚದ 23.8 ಪ್ರತಿಶತ ಆಗಿದೆ. ಪ್ರಸಕ್ತ (2023–2024) ಹಣಕಾಸು ವರ್ಷದಲ್ಲಿ ಕೇಂದ್ರವು ತನ್ನ ಸಾಲದ ಮೇಲಿನ ಬಡ್ಡಿಯನ್ನು ಪಾವತಿಸಲು ತನ್ನ ವೆಚ್ಚದ ಶೇಕಡಾ 24 ರಷ್ಟು ವೆಚ್ಚ ಮಾಡಬೇಕಿದೆ. (ಅಂದರೆ, ತಿಂಗಳಿಗೆ 10,000 ಆದಾಯ ಇರುವ ಕುಟುಂಬವೊಂದು ಸಾಲದ ಬಡ್ಡಿಗಾಗಿಯೇ 2,400 ರೂಪಾಯಿ ತೆಗೆದಿರಿಸಿದಂತೆ.) ಹೆಚ್ಚಿನ ಬಡ್ಡಿಯ ಹೊರೆಯು ಸರ್ಕಾರದ ಬದ್ಧ ವೆಚ್ಚಕ್ಕೆ ಸೇರಿರುತ್ತದೆ. ಇದು ಉತ್ಪಾದಕ ಕ್ಷೇತ್ರಗಳಲ್ಲಿ ಹೆಚ್ಚು ಖರ್ಚು ಮಾಡುವುದನ್ನು ತಡೆಯುತ್ತದೆ.

ಬಂಡವಾಳ ಹಿಂಪಡೆತ

ಬಜೆಟ್ ಹೊರೆ ಇಳಿಸಿಕೊಳ್ಳಲು ಮೋದಿ ಸರ್ಕಾರ ಹಲವು ಮಾರ್ಗಗಳನ್ನು ಆಯ್ದುಕೊಂಡಿದೆ. ಅದರಲ್ಲಿ ಒಂದು, ಸಾರ್ವಜನಿಕ ಉದ್ಯಮಗಳಲ್ಲಿನ ತನ್ನ ಪಾಲಿನ ಬಂಡವಾಳ ಹಿಂಪಡೆಯುವುದು. ಉದ್ಯಮಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಒಂದು ಪ್ರತ್ಯೇಕ ಇಲಾಖೆ ಸ್ಥಾಪನೆ ಮಾಡುವುದನ್ನು ನಾವು ನೋಡಿದ್ದೇವೆ. ಆದರೆ, ಮೋದಿ ಸರ್ಕಾರ ಆಸ್ತಿ ಮಾರಾಟಕ್ಕೆಂದೇ ಒಂದು ಇಲಾಖೆ ಸೃಷ್ಟಿಮಾಡಿದೆ!! ಅದರ ಹೆಸರು 'ದೀಪಂ'. ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆ (DIPAM). ಈ 'ದೀಪ' ಸಾರ್ವಜನಿಕ ಉದ್ಯಮಗಳ ಬೆಳವಣಿಗೆಗೆ ಬೆಳಕು ನೀಡುವ ಬದಲು ಅವುಗಳನ್ನು ಕತ್ತಲೆಯಡೆಗೆ ತಳ್ಳುತ್ತದೆ. ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಈಕ್ವಿಟಿ ಹಿಂತೆಗೆದುಕೊಳ್ಳುವಿಕೆ ಸೇರಿದಂತೆ ಈಕ್ವಿಟಿಯಲ್ಲಿ ಕೇಂದ್ರ ಸರ್ಕಾರದ ಹೂಡಿಕೆಗಳ ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸುತ್ತದೆ. ಅದರ ಕೆಲಸದ ಮೂರು ಪ್ರಮುಖ ಕ್ಷೇತ್ರಗಳು ಕಾರ್ಯತಂತ್ರದ ಹೂಡಿಕೆ ಮತ್ತು ಖಾಸಗೀಕರಣ, ಅಲ್ಪಸಂಖ್ಯಾತ ಷೇರು(ಸರ್ಕಾರದ ಪಾಲು ಶೇ. 49ಕ್ಕಿಂತ ಕಡಿಮೆ ಹೊಂದಿರುವ ಉದ್ಯಮ) ಮಾರಾಟ ಮತ್ತು ಬಂಡವಾಳ ಪುನರ್ರಚನೆಗೆ ಸಂಬಂಧಿಸಿವೆ. ಆಫರ್ ಫಾರ್ ಸೇಲ್ ಅಥವಾ ಪ್ರೈವೇಟ್ ಪ್ಲೇಸ್‌ಮೆಂಟ್ ಅಥವಾ ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಯಾವುದೇ ಇತರ ವಿಧಾನದ ಮೂಲಕ ಕೇಂದ್ರ ಸರ್ಕಾರದ ಈಕ್ವಿಟಿಯ ಮಾರಾಟಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು ಮತ್ತು ಕೇಂದ್ರ ಸಾರ್ವಜನಿಕ ಕ್ಷೇತ್ರಗಳಲ್ಲಿನ ಉದ್ಯಮ (CPSE) ಗಳ ಕಾರ್ಯತಂತ್ರದ ಹಿಂತೆಗೆದುಕೊಳ್ಳುವಿಕೆ DIPAM ನಲ್ಲಿ ವ್ಯವಹರಿಸಲಾಗುತ್ತದೆ. DIPAM ಹಣಕಾಸು ಸಚಿವಾಲಯದ ಅಡಿಯಲ್ಲಿನ ಒಂದು ಇಲಾಖೆಯಾಗಿದೆ.

ಪ್ರತಿ ಬಜೆಟ್ ನಲ್ಲಿಯೂ ಬಂಡವಾಳ ಹಿಂಪಡೆತದಿಂದ ಬರುವ ಆದಾಯದ ಗುರಿ ಇಟ್ಟುಕೊಳ್ಳಲಾಗುತ್ತದೆ. ಈ ಮೂಲಕ ಕಳೆದ 8 ವರ್ಷಗಳಲ್ಲಿ 4 ಲಕ್ಷ ಕೋಟಿ ಗಳಿಸಿದ್ದರೆ, 2023–24 ರಲ್ಲಿಯೂ 51 ಸಾವಿರ ಕೋಟಿ ಆದಾಯ ಗಳಿಸುವ ಗುರಿ ಇಟ್ಟುಕೊಂಡಿದೆ. ಜೊತೆಗೆ, ರಿಸರ್ವ್ ಬ್ಯಾಂಕಿನ ಮೀಸಲು ಹಣದಲ್ಲಿಯೂ ಹಣ ತೆಗೆದುಕೊಂಡಿದೆ.



ಕಲ್ಯಾಣ ಯೋಜನೆಗಳಿಗೆ ಅನುದಾನ ಕಡಿತ

ಸರ್ಕಾರದ ಸಾಲ ಹೆಚ್ಚಿದಂತೆಲ್ಲಾ, ಸರ್ಕಾರಕ್ಕೆ ವಿವಿಧ ಮೂಲಗಳಿಂದ ಬರುವ ಆದಾಯದ ಬಹುಪಾಲು ಸಾಲದ ಕಂತುಗಳನ್ನು ಮತ್ತು ಬಡ್ಡಿ ಪಾವತಿಸಲು ವೆಚ್ಚವಾಗುತ್ತದೆ. ಶಿಕ್ಷಣ, ಆರೋಗ್ಯ ವಲಯ, ನೀರಾವರಿ, ವಿದ್ಯುತ್, ರಸ್ತೆ, ರೈಲು ಮಾರ್ಗ, ಸಾರ್ವಜನಿಕ ಸಾರಿಗೆ ಸೌಲಭ್ಯ ಇವುಗಳನ್ನು ಸಾರ್ವಜನಿಕ ಒಡೆತನದಲ್ಲಿ ಮತ್ತಷ್ಟು ಅಭಿವೃದ್ಧಿ ಪಡಿಸಲು, ಆ ಮೂಲಕ ಪ್ರಜೆಗಳಿಗೆ ಉಚಿತವಾಗಿ ಅಥವಾ ಕೈಗೆಟುವ ದರದಲ್ಲಿ ಅಗತ್ಯ ಸೇವೆಗಳು ದೊರಕುವಂತೆ ಮಾಡುವುದಕ್ಕೆ ಹಣದ ಕೊರತೆ ಉಂಟಾಗುತ್ತದೆ. ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು, ಈಗಿರುವ ಸಮಾಜ ಕಲ್ಯಾಣ ಯೋಜನೆಗಳನ್ನು ಬಲಪಡಿಸಲು ಮತ್ತು ಹೊಸದಾಗಿ ರೂಪಿಸಲು ಸಂಪನ್ಮೂಲದ ಕೊರತೆ ಉಂಟಾಗುತ್ತದೆ.

ಆಳುವವರಿಗೆ ಇದೆಲ್ಲಾ ಅರ್ಥವಾಗಿಲ್ಲ ಅಂದುಕೊಳ್ಳುವುದು ಸರಿಯಾದುದಲ್ಲ, ಇವೆಲ್ಲವನ್ನೂ ಮನಗಂಡೇ ಭವಿಷ್ಯದ ಯೋಜನೆಗಳನ್ನು ರೂಪಿಸತೊಡಗಿದ್ದಾರೆ. ಈಗಿರುವ ಪಡಿತರ ವ್ಯವಸ್ಥೆ ಮತ್ತು ರಸಗೊಬ್ಬರ ಸಬ್ಸಿಡಿಗಳನ್ನು ಸಂಪೂರ್ಣವಾಗಿ ನಾಶಮಾಡುವ ಮೂಲಕ, ಇದರಿಂದ ಸರ್ಕಾರಕ್ಕೆ ಆಗುತ್ತಿರುವ ವೆಚ್ಚ ಇಲ್ಲದಂತೆ ಮಾಡುವ ಯೋಜನೆ ರೂಪಿಸಿ, ಅದರ ಜಾರಿಗೆ ಮುಂದಾಗಿದ್ದಾರೆ. ಭಾರತ ಸರ್ಕಾರವು ಆಹಾರ ಮತ್ತು ರಸಗೊಬ್ಬರ ಸಬ್ಸಿಡಿಗಳನ್ನು 2023–24 ರ ಬಜೆಟ್ ನಲ್ಲಿ 3.7 ಲಕ್ಷ ಕೋಟಿ ರೂಪಾಯಿಗಳಿಗೆ ಕಡಿತಗೊಳಿಸಿದೆ. ಇದು 2022–23 ರ ಬಜೆಟ್‌ನ ಸುಮಾರು 5 ಲಕ್ಷ ಕೋಟಿ ರೂಪಾಯಿಗಳ ಮಟ್ಟಕ್ಕಿಂತ ಶೇ. 25 ಕ್ಕಿಂತ ಕಡಿಮೆಯಾಗಿದೆ ಎಂದು ಸಮೀಕ್ಷೆಯೊಂದು ಹೇಳುತ್ತದೆ.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MGNREGA)ಗೆ 2020–21ರಲ್ಲಿ ನಿಗದಿಪಡಿಸಲಾಗಿದ್ದ 1.11 ಲಕ್ಷ ಕೋಟಿ ಅನುದಾನವನ್ನು, 2023–24ರ ಬಜೆಟ್ ನಲ್ಲಿ 60,000 ಕೋಟಿಗೆ ಇಳಿಸಲಾಗಿದೆ. ಈ ಹಣದ ಶೇ. 25ರಷ್ಟು ಹಿಂದಿನ ವರ್ಷದ ಬಾಕಿ ಪಾವತಿಗೆ ಹೋಗುತ್ತದೆ.

ಉದ್ಯೋಗಿಗಳಿಂದ ಯಾವುದೇ ಕೊಡುಗೆ ಪಡೆಯದೆ ನೀಡುತ್ತಿರುವ ಹಳೆಯ ಪಿಂಚಣಿ ಯೋಜನೆಯಿಂದ ಸರ್ಕಾರಕ್ಕೆ ವಾರ್ಷಿಕವಾಗಿ ಲಕ್ಷಾಂತರ ಕೋಟಿ ವೆಚ್ಚವಾಗುತ್ತಿದೆ. (2022–23 ರಲ್ಲಿ ಒಕ್ಕೂಟ ಸರ್ಕಾರ ಇದಕ್ಕಾಗಿ 2.7 ಲಕ್ಷ ಕೋಟಿ ರೂ. ವೆಚ್ಚ ಮಾಡಿದ್ದರೆ, ಕೇಂದ್ರ ಮತ್ತು ಎಲ್ಲಾ ರಾಜ್ಯಗಳು ಮಾಡಿದ ವೆಚ್ಚ 4.63 ಲಕ್ಷ ಕೋಟಿ ರೂಪಾಯಿ) ಇದರ ವೆಚ್ಚವನ್ನು ಸಂಪೂರ್ಣವಾಗಿ ತಡೆಯುವ ಪ್ರಯತ್ನದ ಭಾಗವಾಗಿ ಹಳೆಯ ಪಿಂಚಣಿ ಯೋಜನೆಯನ್ನು ರದ್ದು ಮಾಡಿ, ಉದ್ಯೋಗಿಗಳಿಂದ ಕೊಡುಗೆ ಪಡೆದು ಪಿಂಚಣಿ ನೀಡುವ ಹೊಸ ಪಿಂಚಣಿ ಯೋಜನೆ ಜಾರಿಗೆ ತರಲಾಗಿದೆ.

ಇವುಗಳಲ್ಲದೆ ಇತರೆ ಸಮಾಜ ಕಲ್ಯಾಣ ಯೋಜನೆಗಳಿಗೆ ಈಗ ಕೊಡುತ್ತಿರುವ ಅನುದಾನಗಳ ಕಡಿತ ಮಾಡತೊಡಗಿದ್ದಾರೆ.

ಜನರ ಮೇಲಿನ ತೆರಿಗೆ ಹೆಚ್ಚಳ; ಕಾರ್ಪೊರೇಟ್ ತೆರಿಗೆ ಕಡಿತ!!

ಇಲ್ಲೊಂದು ವಿಚಿತ್ರ ನೋಡಿ. ಸರ್ಕಾರದ ಬಜೆಟ್ ಕೊರತೆ ತುಂಬಿಕೊಳ್ಳಲು, ಜಿಎಸ್ ಟಿ, ಅಬ್ಕಾರಿ ತೆರಿಗೆ ಹೆಸರಿನಲ್ಲಿ ಜನರ ಮೇಲಿನ ತೆರಿಗೆ ಹೆಚ್ಚಳ ಮಾಡುವ ಮೋದಿ ಸರ್ಕಾರ, ದೊಡ್ಡ ಉದ್ಯಮಿಗಳು ಕಟ್ಟುವ ಶೇ. 30 ಇದ್ದ ಕಾರ್ಪೊರೇಟ್ ತೆರಿಗೆಯನ್ನು ಶೇ. 28 ಕ್ಕೆ ಇಳಿಸಿದೆ!! ಈ ತೆರಿಗೆ ಕಡಿತದಿಂದ ಕೇಂದ್ರ ಸರ್ಕಾರಕ್ಕೆ ಬರುತ್ತಿದ್ದ ಆದಾಯದಲ್ಲಿ ವರ್ಷಕ್ಕೆ ಒಂದು ಲಕ್ಷ ಕೋಟಿ ಕಡಿತವಾಗಿದೆ. ಜೊತೆಗೆ, ನವೋದ್ಯಮಗಳ ಸ್ಥಾಪನೆಯ ಹೆಸರಿನಲ್ಲಿ ಖಾಸಗಿಯವರಿಗೆ ಹಲವು ರೀತಿಯ ವಿನಾಯಿತಿ, ರಿಯಾಯಿತಿ ನೀಡಲಾಗುತ್ತದೆ. ರಾಜ್ಯಗಳ ಮೇಲೆ ಹೆಚ್ಚಿದ ಹೊರೆ.

ಒಂದು ರಾಷ್ಟ್ರ ಒಂದು ತೆರಿಗೆ ಎಂಬ ತತ್ವದ ಅಡಿಯಲ್ಲಿ ಜಿ.ಎಸ್.ಟಿ. ಪದ್ಧತಿ ಜಾರಿಗೆ ತರುವ ಮೂಲಕ ಕೇಂದ್ರ ಸರ್ಕಾರ ರಾಜ್ಯಗಳಿಗೆ ಬರುತ್ತಿದ್ದ ತೆರಿಗೆ ಆದಾಯಕ್ಕೆ ದಕ್ಕೆ ತಂದಿದೆ. ರಾಜ್ಯಗಳಿಂದ ಸಂಗ್ರಹವಾಗುವ ತೆರಿಗೆಯ ಪಾಲಿನ ಹಂಚಿಕೆಯಲ್ಲಿಯೂ ರಾಜ್ಯಗಳನ್ನು ವಂಚಿಸುತ್ತಿದೆ. ಇದರ ಪರಿಣಾಮ ರಾಜ್ಯಗಳೂ ತಮ್ಮ ಬಜೆಟ್ ಕೊರತೆ ತುಂಬಿಕೊಳ್ಳಲು ಸಾಲದ ಮೊರೆ ಹೋಗಬೇಕಾದ ಅನಿವಾರ್ಯ ಸ್ಥಿತಿಗೆ ಬಂದಿವೆ. ಆದಾಗ್ಯೂ, ಇತ್ತೀಚಿನ ಅಂದಾಜಿನ ಪ್ರಕಾರ, 2022–23ರಲ್ಲಿ ಎಲ್ಲಾ ರಾಜ್ಯಗಳ ಒಟ್ಟು ಸಾಲವು 76.1 ಲಕ್ಷ ಕೋಟಿ ರೂ.ಗಳಾಗಿದ್ದು, ಕೇಂದ್ರದ ಸಾಲ ರೂ. 155.6 ಲಕ್ಷ ಕೋಟಿ. ಹೆಚ್ಚಿನ ತೆರಿಗೆ ಆದಾಯವನ್ನು ಕೇಂದ್ರ ಸರ್ಕಾರ ಸಂಗ್ರಹಿಸುತ್ತದೆ. ಆದಾಗ್ಯೂ, ರಾಜ್ಯಗಳು ಸಾರ್ವಜನಿಕ ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯದಂತಹ ಕ್ಷೇತ್ರಗಳಲ್ಲಿ 70 ಪ್ರತಿಶತವನ್ನು ಖರ್ಚು ಮಾಡುತ್ತವೆ.

ಜಗತ್ತಿನ 100 ದೊಡ್ಡ ಸಿರಿವಂತರ ಪಟ್ಟಿಯಲ್ಲಿ 8 ಭಾರತೀಯರು

ಮೋದಿ ಸರ್ಕಾರದ ಬಂಡವಾಳಶಾಹಿ ಪರ ನೀತಿಗಳಿಂದಾಗಿ ದೇಶ ಸಾಲದ ಸುಳಿಯಲ್ಲಿ ಸಿಲುಕಿದ್ದರೆ, ಭಾರತದ ದೊಡ್ಡ ಬಂಡವಾಳಿಗರ ಬಳಿ ಮತ್ತಷ್ಟು ಸೇರ್ಪಡೆಯಾಗತೊಡಗಿದೆ. ಜಗತ್ತಿನ ಮೊದಲ 100 ಸಿರಿವಂತರ ಪಟ್ಟಿಯಲ್ಲಿ ಭಾರತದ 8 ಸಿರಿವಂತರಿದ್ದಾರೆ. ಫೋರ್ಬ್ಸ್ 2023ರಲ್ಲಿ ವರದಿ ಮಾಡಿರುವಂತೆ, ರಿಲಯನ್ಸ್ ಇಂಡಸ್ಟ್ರೀಸ್ ಮಾಲೀಕ ಮುಕೇಶ್ ಅಂಬಾನಿ 7 ಲಕ್ಷ ಕೋಟಿ ರೂ.ಗಿಂತ ಹೆಚ್ಚಿನ ಆದಾಯವನ್ನು ಹೊಂದಿ ($104 ಬಿಲಿಯನ್) 12ನೆಯ ಸ್ಥಾನದಲ್ಲಿದ್ದಾರೆ.

ಫೋರ್ಬ್ಸ್ ನಿಯತಕಾಲಿಕೆ ಸಂಗ್ರಹಿಸಿದ ಮತ್ತು ಪ್ರಕಟಿಸಿದ ಸಂಪತ್ತು ಮತ್ತು ಆಸ್ತಿಗಳ ವಾರ್ಷಿಕ ಮೌಲ್ಯಮಾಪನದ ಆಧಾರದ ಮೇಲೆ ನಿವ್ವಳ ಮೌಲ್ಯದ ಮೂಲಕ ಶ್ರೀಮಂತ ಭಾರತೀಯರ ಪಟ್ಟಿ. ಏಪ್ರಿಲ್ 2023 ರ ಹೊತ್ತಿಗೆ, ಭಾರತವು 167 ಬಿಲಿಯನೇರ್‌ಗಳನ್ನು ಪುಟ 14 ಕ್ಕೆ

ಅನಿಶ್ಚಿತ ದುಡಿಮೆ ಮತ್ತು ಕಡಿಮೆ ವರಮಾನದ ಸಮಸ್ಯೆಗೆ ವಾರಕ್ಕೆ 70 ಗಂಟೆಗಳ ದುಡಿಮೆಯ ಪರಿಹಾರ!

ಅಕ್ಟೋಬರ್ 28 ರಂದು ಮತ್ತೊಂದು 'ರೋಜ್‌ಗಾರ್ ಮೇಲಾ'(ಉದ್ಯೋಗ ಮೇಳ) ನಡೆದಿದೆ, ಪ್ರಧಾನಿಗಳು ಮತ್ತೆ 51000 ನೇಮಕಾತಿ ಪತ್ರಗಳನ್ನು ಹಂಚಿದ್ದಾರೆ ಎಂದು ಎಎನ್‌ಐ ವರದಿ ಮಾಡಿದೆ. ಕೊನೆಗೂ ಈ ಸರಕಾರ ನಿರುದ್ಯೋಗ ಸಮಸ್ಯೆಯತ್ತ ಗಮನ ಹರಿಸಿ ಕಳೆದ ಅಕ್ಟೋಬರ್22ರಿಂದ ಈ 'ಮೇಳ'ಗಳು ನಡೆಯುತ್ತಿವೆ ಎಂಬುದನ್ನು ನೆನಪಿಸಿಕೊಳ್ಳಬಹುದು. ಮುಂದಿನ ಸಾರ್ವತ್ರಿಕ ಚುನಾವಣೆಗಳ ಮೊದಲು 10 ಲಕ್ಷ ಸರಕಾರೀ ಉದ್ಯೋಗಗಳನ್ನು ಕೊಡುವ ಉದ್ದೇಶದ ಈ ಸ್ಕೀಮಿನಲ್ಲಿ ಇದುವರೆಗೆ 5.5 ಲಕ್ಷ ನೇಮಕಾತಿ ಪತ್ರಗಳನ್ನು ಹಂಚಲಾಗಿದೆಯಂತೆ. ಈ ನಡುವೆ ಈ ಪತ್ರಗಳಲ್ಲಿ 'ಬಡ್ತಿ'ಯ ಪತ್ರಗಳೂ ಸೇರಿದ್ದವು ಎಂದು ಕಳೆದ ಬಾರಿಯ 'ಮೇಲಾ'ದ ವೇಳೆಗೆ ಸುದ್ದಿಯಾಗಿತ್ತು ಎಂಬುದು ಬೇರೆ ಮಾತು.

ಈಗಾಗಲೇ ವರದಿಯಾಗಿರುವಂತೆ, ಅಕ್ಟೋಬರ್ 9 ರಂದು ಭಾರತ ಸರಕಾರದ ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) 'ಆವರ್ತಕ ಶ್ರಮ ಶಕ್ತಿ ಸಮೀಕ್ಷೆ'(ಪಿಎಲ್‌ಎಫ್‌ಎಸ್)ನ ಎಪ್ರಿಲ್–ಜೂನ್2023ರ ತ್ರೈಮಾಸಿಕ ಬುಲೆಟಿನ್ ಪ್ರಕಟಿಸಿದೆ. ಇದರ ಪ್ರಕಾರ ಒಟ್ಟು ಜನಸಂಖ್ಯೆಯಲ್ಲಿ ಉದ್ಯೋಗ ಮಾಡುತ್ತಿರುವವರ ಪ್ರಮಾಣ(ಡಬ್ಲ್ಯುಪಿಆರ್)ದಲ್ಲಿ 0.1% ಹೆಚ್ಚಳವಾಗಿದೆ. ಹಾಗೆಯೇ ದುಡಿಮೆಯ ವಯೋಗುಂಪಿನಲ್ಲಿ ಉದ್ಯೋಗದಲ್ಲಿರುವವರು, ನಿರುದ್ಯೋಗಿಗಳು ಮತ್ತು ಸಕ್ರಿಯವಾಗಿ ಉದ್ಯೋಗ ಅರಸುತ್ತಿರುವವರ ಪ್ರಮಾಣ(ಎಲ್‌ಪಿಎಫ್‌ಆರ್)ದಲ್ಲಿ 0.3% ಏರಿಕೆಯಾಗಿದೆ. ಇದನ್ನೇ ಮುಖ್ಯಧಾರೆಯ ಮಾಧ್ಯಮಗಳು ಮತ್ತು ಸರಕಾರ ಉದ್ಯೋಗಾವಕಾಶ ರಂಗದಲ್ಲಿ ಆಶಾಭಾವನೆ ಉಂಟು ಮಾಡಿರುವ ಸುದ್ದಿ ಎಂದು ಹಿಗ್ಗುತ್ತಿವೆ.

2022–23ರಲ್ಲಿ ನಿರುದ್ಯೋಗ ದರ ಕಳೆದ 6 ವರ್ಷಗಳಲ್ಲೇ (9 ವರ್ಷಗಳಲ್ಲಿ ಅಲ್ಲ!)ಅತ್ಯಂತ ಕಡಿಮೆ ಮಟ್ಟಕ್ಕೆ ಇಳಿದಿದೆ ಎಂದು ಅಮೃತ ಕಾಲದ ಸರಕಾರ ಬೆನ್ನು ತಟ್ಟಿಕೊಂಡಿತ್ತು.

ಅನಿಶ್ಚಿತ ಮತ್ತು ಬಿಟ್ಟಿ ದುಡಿಮೆ, ಕಡಿಮೆ ವರಮಾನ

ಆದರೆ 20223–23ರ ಪಿಎಲ್‌ಎಫ್‌ಎಸ್ ವರದಿಯನ್ನು ವಿವರವಾಗಿ ನೋಡಿದರೆ ಈ ಆಶಾಭಾವನೆಗೆ ಯಾವುದೇ ಅವಕಾಶ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ, ಈ ವರದಿ ಬಿಟ್ಟಿ ದುಡಿಮೆ, ಅದರಲ್ಲೂ ಮಹಿಳೆಯರದು, ಹೆಚ್ಚಾಗಿದೆ ಮತ್ತು ಹೆಚ್ಚಾಗುತ್ತಿದೆ ಎಂಬುದನ್ನು ಮತ್ತು ಕೃಷಿ ವಲಯ ಉದ್ಯೋಗ ಹೆಚ್ಚಳದ ಅಂಗಳವಾಗುತ್ತಿದೆ, ಜೊತೆಗೆ ಕಡಿಮೆ ಆದಾಯದ ಸ್ವ–ಉದ್ಯೋಗಗಳು ಇಂದಿನ ದುಡಿಮೆ ಲೋಕದ ಬೆನ್ನೆಲುಬಾಗುತ್ತಿವೆ ಎಂಬುದನ್ನೂ ಬಿಂಬಿಸುತ್ತಿದೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ.(ನೋಡಿ: ಅನಿಶ್ಚಿತ ದುಡಿಮೆ, ಕಡಿಮೆ ವರಮಾನ ಮತ್ತು ಬಿಟ್ಟಿ ದುಡಿಮೆ ಭಾರತದ ಅರ್ಥವ್ಯವಸ್ಥೆಯನ್ನು ಕಾಡುತ್ತಿದೆ: ಸುಭೋದ್ ವರ್ಮ; ಅನು: ಜಿ.ಎಸ್.ಮಣಿ, ಜನಶಕ್ತಿ ಮೀಡಿಯಾ, ಅಕ್ಟೋಬರ್28 https://janashakthimedia.com/low-income-casual-labor-plague)

ಇದರಲ್ಲಿ, 2020 ಮತ್ತು 2022 ರ ಅವಧಿ ಸಾಂಕ್ರಾಮಿಕದ ದಿನಗಳಾದ್ದರಿಂದ ಉದ್ಯೋಗ ಪರಿಸ್ಥಿತಿ ಹದಗೆಟ್ಟಿತ್ತು ಎಂಬುದು ಗೊತ್ತಿರುವುದರಿಂದ ಪಿಎಲ್‌ಎಫ್‌ಎಸ್ 2022–23 ರ ವರದಿಯನ್ನು ಅದರದೇ 2018–19 ರ ವರದಿಯೊಂದಿಗೆ ಹೋಲಿಸಿ ನೋಡಲಾಗಿದೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ಉದ್ಯೋಗ ಪರಿಸ್ಥಿತಿ ಹೇಗೆ ಬದಲಾಗಿದೆ ಎಂಬುದನ್ನೂ ಇದು ಸೂಚಿಸುತ್ತದೆ. ಎಲ್‌ಪಿಎಫ್‌ಆರ್ (ಶ್ರಮ ಶಕ್ತಿ ಭಾಗವಹಿಸುವಿಕೆಯ ದರ) ದರ ಶೇ 50 ರಿಂದ ಶೇ 58 ಕ್ಕೆ ಈ ಅವಧಿಯಲ್ಲಿ ಹೆಚ್ಚಿದೆ. ಒಟ್ಟು ದುಡಿವ ಜನಸಂಖ್ಯೆಯ ಪ್ರಮಾಣ(ಡಬ್ಲ್ಯುಪಿಆರ್) ಶೇ 35 ರಿಂದ ಶೇ 41 ಕ್ಕೆ ಏರಿದೆ. ಪ್ರಸಕ್ತ ಪಿಎಲ್‌ಎಫ್‌ಎಸ್ ಪ್ರಕಾರ ಮಹಿಳೆಯರ ಪಾಲು ಶೇ 25 ರಿಂದ ಶೇ 37 ಕ್ಕೆ ಏರಿದೆ. ಹಾಗೆಯೇ ಮಹಿಳೆಯರ ಡಬ್ಲ್ಯುಪಿಆರ್ ಶೇ 18 ರಿಂದ ಶೇ 27 ಕ್ಕೆ ಏರಿದೆ.

ಉದ್ಯೋಗಗಳ ವಿವರಗಳನ್ನು ಬಿಡಿಸಿ ನೋಡಿದರೆ, 2018–19 ರಲ್ಲಿ ಒಟ್ಟು ಉದ್ಯೋಗಗಳಲ್ಲಿ ಸ್ವ–ಉದ್ಯೋಗ ಮಾಡುವವರು ಶೇ 52 ರಷ್ಟಿದ್ದರು, ಸಂಬಳ ಪಡೆಯುವವರು ಶೇ 24 ರಷ್ಟು ಮತ್ತು ದಿನಗೂಲಿಗಳು ಶೇ 24 ರಷ್ಟು. 2022–23 ರ ಹೊತ್ತಿಗೆ ಸ್ವ–ಉದ್ಯೋಗಿಗಳ ಪ್ರಮಾಣ ಶೇ 57 ಕ್ಕೆ ಏರಿತ್ತು ,ಸಂಬಳ ಪಡೆಯುವವರ ಮತ್ತು ದಿನಗೂಲಿಗಳ ಪ್ರಮಾಣ ಇಳಿದಿತ್ತು.

ಪುರುಷರು ಮತ್ತು ಮಹಿಳೆಯರಿಗೆ ದೊರೆಯುವ ಕೆಲಸಗಳಲ್ಲಿನ ವ್ಯತ್ಯಾಸವಂತೂ ಚಿಂತಾಜನಕವಾಗಿದೆ. ಸ್ವ–ಉದ್ಯೋಗಗಳಲ್ಲಿ ಮಹಿಳೆಯರ ಪಾಲು 2018–19 ರಲ್ಲಿ ಶೇ 53 ಇದ್ದದ್ದು 2022–23 ರಲ್ಲಿ ಶೇ 65ಕ್ಕೆ ಏರಿದೆ. ಇದೇ ಅವಧಿಯಲ್ಲಿ ನಿಯಮಿತ ಸಂಬಳದ ಉದ್ಯೋಗಗಳಲ್ಲಿ ಮಹಿಳೆಯರ ಪಾಲು ಶೇ 22 ರಿಂದ ಶೇ 16 ಕ್ಕೆ ಕುಸಿದಿದೆ. ಹಾಗೆಯೇ ದಿನಗೂಲಿ ಕೆಲಸಗಳಲ್ಲಿ ಶೇ 25 ರಿಂದ ಶೇ 19 ಕ್ಕೆ ಕುಸಿದಿದೆ.

ಸ್ವ–ಉದ್ಯೋಗಿ ಮಹಿಳೆಯರಲ್ಲಿ ತಮಗಾಗಿಯೇ ಕೆಲಸ ಮಾಡುವವರ ಸಂಖ್ಯೆ 2018–19 ರಲ್ಲಿ ಶೇ 23 ರಷ್ಟು ಇದ್ದರೆ 2022–23 ರಲ್ಲಿ ಶೇ 28 ಕ್ಕೆ ಏರಿತ್ತು. ಇದೇ ಅವಧಿಯಲ್ಲಿ ಬಿಟ್ಟಿ ದುಡಿಮೆಯ ಸಹಾಯಕರ ಪ್ರಮಾಣ, ಅಂದರೆ ಕುಟುಂಬದೊಳಗೆ ದುಡಿಯುವ ಮಹಿಳೆಯರ ಪ್ರಮಾಣ ಶೇ 31 ರಿಂದ ಶೇ 38 ಕ್ಕೆ ಏರಿತ್ತು.

"ದುಡಿಮೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗಿದೆ ಎಂಬ ಘನಂಧಾರಿ ಹೇಳಿಕೆಯ ಒಳ ಅರ್ಥ ಇಲ್ಲಿ ಅಡಗಿದೆ. ಅತ್ಯಂತ ಕಡಿಮೆ ಪ್ರಮಾಣದ ದುಡಿಮೆ ಇರುವಲ್ಲಿ, ಅದೂ ಹಣದುಬ್ಬರದಿಂದ ಕುಸಿದ ಮೌಲ್ಯದಲ್ಲಿ, ಜೊತೆಗೆ ಸರಿಯಾದ ಉದ್ಯೋಗದ ಕೊರತೆ ಇರುವಾಗ ಮಹಿಳೆಯರು ಸಿಗಬಹುದಾದ ಅಲ್ಪ ಪ್ರತಿಫಲಕ್ಕೆ ಹೆಚ್ಚಿನ ಕೆಲಸ ಮಾಡಿ ಕುಟುಂಬದವರ ಗಳಿಕೆಗೆ ಅಲ್ಪ ಸ್ವಲ್ಪ ಸೇರಿಸುವ ಸಲುವಾಗಿ ಮಾಡುತ್ತಿರುವ ದುಡಿಮೆಗಳು ಈ 'ಸ್ವ–ಉದ್ಯೋಗಗಳು'. ಚೂರು–ಪಾರು ಕೆಲಸ ಮಾಡಿ ಕೂಡಿಸಿ ಬದುಕುವ ಕೌಟುಂಬಿಕ ಪ್ರಯತ್ನಗಳು ಇವು. ಇಂತಹ ಸ್ವ–ಉದ್ಯೋಗದ ಕೆಲಸಗಳನ್ನು ಹೆಚ್ಚಾಗಿ ಮಹಿಳೆಯರು ಮಾಡುತ್ತಿದ್ದಾರೆ" ಎಂದು ಈ ವಿಶ್ಲೇಷಣೆ ಹೇಳುತ್ತದೆ.

ಗಮನಾರ್ಹ ಸಂಗತಿಯೆಂದರೆ, ಉದ್ಯೋಗಕ್ಕೆ ಅವಕಾಶ ಹೆಚ್ಚಿರುವುದು ಕೃಷಿ ಕೆಲಸ ಮತ್ತು ಕೃಷಿಯೇತರ ಅನೌಪಚಾರಿಕ ವಲಯಗಳಲ್ಲೇ. ಜನ ಎಂತಹ ಕೆಲಸಗಳ ಮೇಲೆ ಅವಲಂಬಿತರಾಗುತ್ತಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ ಎನ್ನುತ್ತಾರೆ ವಿಶ್ಲೇಷಕರು. ಈ ಎರಡೂ ವಲಯಗಳು ಕಡಿಮೆ ಸಂಬಳಕ್ಕೆ ದುಡಿಸಿಕೊಳ್ಳುವ ವಲಯಗಳು. ಅಲ್ಲದೆ ಕೆಲಸದ ಲಭ್ಯತೆ ಹಂಗಾಮುಗಳ ಮೇಲೆ ಅವಲಂಬಿತ. ಸಾಮಾಜಿಕ ಭದ್ರತೆ ಇಲ್ಲ. ಮತ್ತು ಕಠಿಣವಾದ ಕೆಲಸಗಳು. ಇವುಗಳ ಹೊರತಾಗಿ ಬೇರೆ ಎಲ್ಲ ವಲಯಗಳು– ಉತ್ಪಾದನೆ, ವ್ಯಾಪಾರ, ಹೋಟೆಲುಗಳು, ಸಾಗಾಣಿಕೆ ಮತ್ತು ಸಂಪರ್ಕ ಮತ್ತು "ಇತರೆ ಸೇವೆಗಳು" ಅಂದರೆ ಆಡಳಿತಾತ್ಮಕ ಮತ್ತು ಖಾಸಗಿ ಸೇವೆಗಳು, ಶಿಕ್ಷಣ, ಆರೋಗ್ಯ ಇತ್ಯಾದಿ –ಉದ್ಯೋಗಗಳ ಇಳಿತವನ್ನು ಕಂಡಿವೆ.

ಈ ಪಿಎಲ್‌ಎಫ್‌ಎಸ್ ವರದಿ ಬೇರೆ ಬೇರೆ ತರಹದ ಕೆಲಸಗಳಿಂದ ಬರುವ ಸಂಪಾದನೆಯ ಬಗೆಗೆ ನೀಡುವ ಮಾಹಿತಿಗಳು ವಿಚಲಿತಗೊಳಿಸುವಂತದ್ದು. ಈ ವರದಿಗೆ ಕೃಷಿ ಹಂಗಾಮುಗಳನ್ನು ಗಮನದಲ್ಲಿಟ್ಟುಕೊಂಡು ವರ್ಷ ಪೂರ್ತಿ ಪಸರಿಸಿದ್ದ ನಾಲ್ಕು ಸುತ್ತಿನ ದತ್ತಾಂಶ ಸಂಗ್ರಹ ಮಾಡಲಾಯಿತು(ಜುಲೈ 2022 ರಿಂದ ಜೂನ್ 2023 ರ ವರೆಗೆ). ಇವುಗಳ ಸರಾಸರಿ ನೋಡಿದರೆ ಅಲ್ಪ ಸಂಪಾದನೆ, ಪುರುಷ ಮತ್ತು ಮಹಿಳೆಯರ ನಡುವಿನ ಸಂಪಾದನೆಯ ವ್ಯತ್ಯಾಸ, ಗ್ರಾಮೀಣ ಮತ್ತು ನಗರ ಪ್ರದೇಶಗಳ ಸಂಪಾದನೆಯ ವ್ಯತ್ಯಾಸಗಳನ್ನು ಗಮನಿಸಬಹುದು ಎನ್ನುತ್ತಾರೆ ವಿಶ್ಲೇಷಕರು.

ದಿನಗೂಲಿಯೊಬ್ಬನ ದಿನದ ಸರಾಸರಿ ಸಂಪಾದನೆ ಬರೀ 403 ರೂ. ತಿಂಗಳು ಪೂರ್ತಿ ಅಂದರೆ 30 ದಿನಗಳು, ದುಡಿದರೆ ಇದು ತಿಂಗಳಿಗೆ 12075 ರೂ. ಆಗುತ್ತದೆ. ಪುರುಷ ದಿನಗೂಲಿಯ ಸಂಪಾದನೆ ತಿಂಗಳಿಗೆ 12990 ರೂ.ಗಳಾದರೆ, ಮಹಿಳಾ ದಿನಗೂಲಿಯ ತಿಂಗಳ ವರಮಾನ 8385 ರೂ. ಸ್ವ–ಉದ್ಯೋಗ ವರ್ಗದಲ್ಲಿ ಸರಾಸರಿ ತಿಂಗಳ ವರಮಾನ 13131 ರೂ. ಪುರುಷರಿಗೆ ತಿಂಗಳ ಸಂಪಾದನೆ 15197 ರೂ.ಗಳಾದರೆ ಮಹಿಳೆಯರಿಗೆ ತಿಂಗಳಿಗೆ ಬರೀ 5516 ರೂ. ನಿಯಮಿತ ವೇತನ/ಸಂಬಳ ಪಡೆವವರ ಸರಾಸರಿ ತಿಂಗಳ ಸಂಪಾದನೆ 19492. ಪುರುಷರ ಸಂಪಾದನೆ ತಿಂಗಳಿಗೆ 20666 ರೂ.ಗಳಾದರೆ ಮಹಿಳೆಯರದು 15722 ರೂ. ಈ ಶೋಚನೀಯ ಸಂಖ್ಯೆಗಳು ಸರಾಸರಿ ಮಟ್ಟದ್ದು. ಅಂದರೆ. ಹಲವರ ವರಮಾನ ಇದಕ್ಕಿಂತ ಬಹಳ ಕಡಿಮೆ ಇದೆ. ಅಂದರೆ ಲಭ್ಯವಾಗುವ ಉದ್ಯೋಗಗಳು ಅವಶ್ಯ ವರಮಾನ ನೀಡುವಂತವುಗಳಲ್ಲ ಎಂಬುದು ಸ್ಪಷ್ಟ.

ಐದು ವರ್ಷಗಳ ಹಿಂದಿನ ವರದಿ(2018–19)ಯೊಂದಿಗೆ ಹೋಲಿಸಿ ನೋಡಿದರೆ ಅದು ಆರ್ಥಿಕ ಸಂಕಷ್ಟದ ಇನ್ನೊಂದು ಆಯಾಮವನ್ನು ತೆರೆದಿಡುತ್ತದೆ ಎನ್ನುತ್ತಾರೆ ಸುಬೋಧ್ ರಾಯ್. ಸ್ವ–ಉದ್ಯೋಗಿಗಳು ಮತ್ತು ನಿಯಮಿತ ಸಂಬಳದ ದುಡಿಮೆಗಾರರಿಬ್ಬರಿಗೂ ಅವರ ವೇತನ ಹೆಚ್ಚಳ ಅದೇ ಅವಧಿಯಲ್ಲಿನ ಬೆಲೆ ಹೆಚ್ಚಳಕ್ಕಿಂತ ಕಡಿಮೆ ಎಂಬುದು ಕಾಣಬರುತ್ತದೆ. ದಿನಗೂಲಿಗಳ ಕೂಲಿ ಹೆಚ್ಚಳ ಸ್ವಲ್ಪ ಉತ್ತಮವಾಗಿದೆ; ಬಹುಶಃ ಅವರ ಕೂಲಿಯೇ ಅತಿ ಕಡಿಮೆ ಇರುವುದರಿಂದ ಇರಬಹುದು.

ಒಟ್ಟಾರೆ ಹೇಳುವುದಾದರೆ, ಉದ್ಯೋಗ ಪರಿಸ್ಥಿತಿ ಗಂಭೀರ ಮತ್ತು ಯಾತನಾಮಯವಾಗಿಯೇ ಇದೆ. ಸಂಪಾದನೆಗಳು ಒಂದು ಘನತೆಯುಳ್ಳ ಜೀವನ ನಡೆಸಲು ಸಾಲದವು ಮತ್ತು ಕೆಲಸದ ಕಾರ್ಪಣ್ಯಗಳಿಗೆ ತಕ್ಕುದಾಗಿಲ್ಲ. ಜನರು ಹೇಗಾದರೂ ಬದುಕುಳಿಯಲು ಸಿಕ್ಕ ಕೆಲಸಗಳನ್ನು ಮಾಡುವ ಹಂಗಿನಲ್ಲೇ ಇದ್ದಾರೆ. ಈ ಕ್ರೂರ ವಾಸ್ತವವನ್ನು ಅರಿತು ನೀತಿ ನಿರೂಪಕರು ವಿವೇಚನೆಯಿಂದ ನಡೆದುಕೊಳ್ಳುವ ಅವಶ್ಯಕತೆಯಿದೆ ಎನ್ನುತ್ತಾರೆ ಈ ವಿಶ್ಲೇಷಕರು.

ಅನೌಪಚಾರಿಕ ವಲಯದಲ್ಲಿ ಉದ್ಯೋಗ ನಿರ್ಮಾಣದಲ್ಲಿ ಮತ್ತೆ 10% ಇಳಿಕೆ–ಇಪಿಎಫ್‌ಒ

ಈ ವರ್ಷದ ಎಪ್ರಿಲ್–ಆಗಸ್ಟ್ ಅವಧಿಯ ನೌಕರರ ಭವಿಷ್ಯ ನಿಧಿ ದತ್ತಾಂಶ(ಇಪಿಎಫ್‌ಒ) ಪ್ರಕಟವಾಗಿದ್ದು, ಇದರ ಪ್ರಕಾರ ಈ ಅವಧಿಯಲ್ಲಿ ನೌಕರರ ಭವಿಷ್ಯ ನಿಧಿ ಸಂಘಟನೆಯಲ್ಲಿ 49.2 ಲಕ್ಷ ಹೊಸ ಚಂದಾದಾರರ ಸೇರ್ಪಡೆಯಾಗಿದೆ. ಅಂದರೆ ಸಂಘಟಿತ ವಲಯದಲ್ಲಿ ಇಷ್ಟು ಉದ್ಯೋಗಾವಕಾಶಗಳು ನಿರ್ಮಾಣವಾಗಿವೆ. ಕಳೆದ ವರ್ಷದ ಇದೇ ಅವಧಿಯ ಸಂಖ್ಯೆ 55.1 ಲಕ್ಷ. ಅಂದರೆ ಉದ್ಯೋಗವಕಾಶ ನಿರ್ಮಾಣದಲ್ಲಿ 10.7% ಇಳಿಕೆಯಾಗಿದೆ.

18–28 ವಯೋಗುಂಪಿನಲ್ಲಿ, ಅಂದರೆ ಯುವ ದುಡಿಮೆಗಾರರ ಸಂಖ್ಯೆ 36.4 ಲಕ್ಷದಿಂದ 33 ಲಕ್ಷಕ್ಕೆ ಇಳಿದಿದೆ, ಅಂದರೆ 9.9% ಇಳಿಕೆ. ಮಹಿಳಾ ಚಂದಾದಾರರ ಸಂಖ್ಯೆಯೂ 14.6 ಲಕ್ಷದಿಂದ 13 ಲಕ್ಷಕ್ಕೆ, ಅಂದರೆ 10.9% ದಷ್ಟು ಇಳಿದಿದೆ.

ನಿಜ, ಇಪಿಎಫ್‌ಒ ದತ್ತಾಂಶ ಉದ್ಯೋಗಾವಕಾಶ ನಿರ್ಮಾಣವನ್ನು ಬಿಂಬಿಸುವುದಿಲ್ಲ. ಆದರೆ ಸಾಮಾಜಿಕ ಭದ್ರತೆಯುಳ್ಳ ಉದ್ಯೋಗಗಳ ಪ್ರಮಾಣ ಮತ್ತಷ್ಟು ಇಳಿಯುತ್ತಿದೆ ಎಂಬುದನ್ನಂತೂ ಇದು ಬಿಂಬಿಸುತ್ತದೆ.

ಈ ನಡುವೆ ಅಕ್ಟೋಬರ್ 2023ರಲ್ಲಿ ನಿರುದ್ಯೋಗ ದರ 10.9%– ಇದು ಕಳೆದ ಎರಡು ವರ್ಷಗಳಲ್ಲೇ ಅತೀ ಹೆಚ್ಚು ಎನ್ನಲಾಗಿದೆ.

ವಾರಕ್ಕೆ 70 ಗಂಟೆಗಳ ಕೆಲಸದ ಕರೆ

ಭಾರತದಲ್ಲಿ ಉದ್ಯೋಗದ ಕುರಿತ ಇಂತಹ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿಯವರ ವಾರಕ್ಕೆ 70 ಗಂಟೆಗಳ ದುಡಿಮೆಯ ಕರೆಗೆ ಏನಾದರೂ ಅರ್ಥವಿದೆಯೇ ಎಂಬ ಚರ್ಚೆ ನಡೆಯುತ್ತಿದೆ.

ಈ ಕರೆಯಲ್ಲಿ ಅವರು ಮುಂದಿಟ್ಟ ಮಾಹಿತಿಗಳು ಎಷ್ಟು ಪ್ರಮಾಣಿತ ಮತ್ತು ಪ್ರಾಮಾಣಿಕ ಎಂಬ ಪ್ರಶ್ನೆಯೂ ಏಳದಿರದು.

* ನಮ್ಮಲ್ಲಿ ಕೆಲಸದ ಅವಧಿ ನಿಜವಾಗಿಯೂ ವಿಶ್ವದಲ್ಲೇ ಕಡಿಮೆಯೇ?
* ಕೆಲಸದ ಅವಧಿಗೂ, ಉತ್ಪಾದಕತೆಗೂ ನೇರ ಸಂಬಂಧವಿದೆಯೇ?
* ಸ್ವಾತಂತ್ರ್ಯದ 75 ವರ್ಷಗಳ ನಂತರದ ಭಾರತದ ಪರಿಸ್ಥಿತಿಯನ್ನು ಎರಡನೇ ಮಹಾಯುದ್ಧಾನಂತರದ ಜರ್ಮನಿ, ಜಪಾನಿನೊಡನೆ ಹೋಲಿಸಬಹುದೇ?
* ಈ 70 ಗಂಟೆಗಳ ಲೆಕ್ಕಾಚಾರಕ್ಕೆ ಆಧಾರವಾದರೂ ಏನು?

ಇಂತಹ ಇನ್ನೂ ಹಲವಾರು ಪ್ರಶ್ನೆಗಳು ಏಳುತ್ತವೆ.

* ಎರಡನೇ ಮಹಾಯುದ್ಧಾನಂತರ ಜರ್ಮನಿ ಮತ್ತು ಜಪಾನಿನಲ್ಲಿ ಅತಿ ಹೆಚ್ಚು ಕೆಲಸದ ಅವಧಿಯೆಂದರೆ ವಾರಕ್ಕೆ 41ರಿಂದ 45 ಗಂಟೆ. ನಂತರ ಅದು ತೀವ್ರವಾಗಿ 26 ರಿಂದ 30 ಗಂಟೆಗೆ ಇಳಿಯಿತು.
* ನಾರಾಯಣಮೂರ್ತಿಯವರು ಹೇಳಿರುವ ಒಂದು ಸಣ್ಣ ಅವಧಿಯಲ್ಲಿ ಜರ್ಮನಿ ಮತ್ತು ಜಪಾನಿನಲ್ಲಿ ವರ್ಷದಲ್ಲಿ ಕೆಲಸದ ಗರಿಷ್ಟ ಅವಧಿ 2200 ದಿಂದ 2400 ಗಂಟೆ. ಭಾರತದಲ್ಲಿ 1970ರಿಂದ 2020ರ 50 ವರ್ಷಗಳ ಅವಧಿಯಲ್ಲಿ ಸರಾಸರಿ ವಾರ್ಷಿಕ ಕೆಲಸದ ಅವಧಿ 2000 ಗಂಟೆಗಳಿಗಿಂತ ಮೇಲಿತ್ತು.

ಇದು ದಾಖಲಾಗಿರುವ ಮಾಹಿತಿಗಳ ಪ್ರಕಾರ.

ಆದರೆ ಭಾರತದಲ್ಲಿ 89% ದುಡಿಮೆ ಅಸಂಘಟಿತ/ಅನೌಪಚಾರಿಕ ವಲಯದಲ್ಲಿ ನಡೆಯುತ್ತದೆ. ಜರ್ಮನಿ ಮತ್ತು ಜಪಾನಿನಲ್ಲಿ ಈ ಪ್ರಮಾಣ ಅನುಕ್ರಮವಾಗಿ 4.2% ಮತ್ತು 8% ಮಾತ್ರ ಎಂಬುದನ್ನೂ ಗಮನಿಸದಿರಲು ಸಾಧ್ಯವೇ?(ದಿ ಹಿಂದೂ, ಡಾಟಾ ಪಾಯಿಂಟ್, ಅಕ್ಟೋಬರ್ 31)

ಇನ್ನು, ಶ್ರಮದ ಉತ್ಪಾದಕತೆಯನ್ನು ಒಂದು ಗಂಟೆಯಲ್ಲಿ ಸೃಷ್ಟಿಯಾಗುವ ಜಿಡಿಪಿ ಎಂದು ನಿರೂಪಿಸಲಾಗುತ್ತದೆ. ಮತ್ತು ಜಿಡಿಪಿಗಳನ್ನು ಹೋಲಿಸಲು ಪಿಪಿಪಿ(ಕೊಳ್ಳುವ ಶಕ್ತಿಯ ಹೋಲಿಕೆ) ಎಂಬುದನ್ನು ಬಳಸಲಾಗುತ್ತದೆ.

ಐಎಲ್‌ಒ ದತ್ತಾಂಶಗಳ ಪ್ರಕಾರ ಭಾರತದಲ್ಲಿ ಸರಾಸರಿ ದುಡಿಮೆ ವಾರದಲ್ಲಿ 47.7 ಗಂಟೆಗಳು, ಇದು 10 ಅತಿದೊಡ್ಡ ಅರ್ಥವ್ಯವಸ್ಥೆಗಳಲ್ಲೇ ಅತಿ ಹೆಚ್ಚು, ಚೀನಾಕ್ಕಿಂತಲೂ ಹೆಚ್ಚು.. ಅದರ ತಲಾ ಜಿಡಿಪಿ(ಪಿಪಿಪಿ) 21,476 ಡಾಲರುಗಳಾದರೆ, ನಮ್ಮದು ಕೇವಲ 8379 ಡಾಲರುಗಳು. ಜಪಾನಿನದು 45,573 ಡಾಲರುಗಳು, ಮತ್ತು ಜರ್ಮನಿಯದ್ದು 63,150 ಡಾಲರುಗಳು.

ಹೀಗಿರುವಾಗ ನಾರಾಯಣ ಮೂರ್ತಿಯವರು ಭಾರತದಲ್ಲಿ ದುಡಿಮೆಯ ಅವಧಿ ಅತ್ಯಂತ ಕಡಿಮೆ ಮತ್ತು ಇದರಿಂದಾಗಿಯೇ ನಮ್ಮ ಕಾರ್ಮಿಕರ ಉತ್ಪಾದಕತೆ ಅತ್ಯಂತ ಕಡಿಮೆ, ವಾರಕ್ಕೆ 70 ಗಂಟೆ ದುಡಿಸಿಕೊಳ್ಳುವುದು ಇದಕ್ಕೆ ಪರಿಹಾರ ಎಂಬ ತೀರ್ಮಾನಕ್ಕೆ ಯಾವ ಆಧಾರದಲ್ಲಿ ಬಂದರೋ?

ಭಾರತದ ದುಡಿಮೆಗಾರರನ್ನು ಹೀಯಾಳಿಸುವಾಗ ಜಪಾನ್ ಮತ್ತು ಜರ್ಮನಿಯ ಉದಾಹರಣೆ ಕೊಡುವುದು 'ಲಾಗಾಯ್ತಿನಿಂದ ಬಂದಿರುವ ಪರಂಪರೆ' ಎಂಬುದನ್ನೂ ಗಮನಿಸಬೇಕಾಗುತ್ತದೆ.







ಸಾಕ್ಷ್ಯಾಧಾರಗಳೆಂದರೆ ಫ್ಯಾಸಿಸ್ಟರಿಗೆ ಎಲ್ಲಿಲ್ಲದ ಹಗೆತನ!

ವಿಮರ್ಶಾತ್ಮಕ ಚರ್ಚೆಗಳು ನಮ್ಮ ತಿಳುವಳಿಕೆಯನ್ನು ಆಳಗೊಳಿಸುತ್ತವೆ. ಆದರೆ, ಹಿಂದುತ್ವ ಮಂದಿ ಈ ರೀತಿಯ ವಿಮರ್ಶಾತ್ಮಕ ಚರ್ಚೆಗಳಲ್ಲಿ ತೊಡಗುವುದಿಲ್ಲ. ತಾವು ಹೆಣೆದ ಮಿಥ್ಯೆಗಳಿಗೆ ವಿರುದ್ಧವಾದ ಪ್ರಮಾಣ, ಪುರಾವೆ, ಸಂಗತಿ, ಆಧಾರಗಳನ್ನು ಅವರು ಸಾರಾಸಗಟಾಗಿ ನಿರಾಕರಿಸುತ್ತಾರೆಯೇ ವಿನಃ, ನಿರ್ದಿಷ್ಟ ಪ್ರಮಾಣ, ಪುರಾವೆ, ಸಂಗತಿ, ಆಧಾರಗಳನ್ನು ಏಕೆ ಗಣನೆಗೆ ತೆಗೆದುಕೊಳ್ಳಬಾರದು ಎಂಬುದನ್ನು ಅವರು ವಿವರಿಸುವುದೇ ಇಲ್ಲ. ಅಂತಹ ಯಾವುದೇ ಬೌದ್ಧಿಕ ವಿಮರ್ಶೆ ಅವರ ಸಾಮರ್ಥ್ಯಕ್ಕೆ ಮೀರಿದ ವಿಷಯ.
ವಿವಿಧ ಏಜೆನ್ಸಿಗಳು ವಿಭಿನ್ನ ಮೂಲಗಳನ್ನು ಬಳಸಿಕೊಂಡು ಸಿದ್ಧಪಡಿಸಿದ ಅನೇಕ ಸೂಚ್ಯಂಕಗಳು, ಅದೂ, ಭಾರತದಲ್ಲಿ ಜಿಡಿಪಿ ಬೆಳವಣಿಗೆಯು ಉನ್ನತವಾಗಿರುವಾಗಲೂ, ಪೌಷ್ಠಿಕಾಂಶದ ಕೊರತೆಯ ಸ್ಥಿತಿ ತೀವ್ರವಾಗಿದೆ ಮತ್ತು ಬೆಳೆಯುತ್ತಿದೆ ಎಂದು ಸೂಚಿಸುತ್ತಿದ್ದರೆ, ಸರಕಾರ ಈ ಬಗ್ಗೆ ಯಾವುದೇ ಕಾಳಜಿಯನ್ನು ವ್ಯಕ್ತಪಡಿಸುವುದರ ಬದಲು ಗೇಲಿ ಮಾಡುತ್ತದೆ, ಈ ಪುರಾವೆಗಳನ್ನು ಸಾರಾಸಗಟಾಗಿ ನಿರಾಕರಿಸುತ್ತದೆ ಎಂಬುದು ಅದರ ನೈಜ ಬಣ್ಣವನ್ನು ಬಯಲು ಮಾಡುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಎಲ್ಲಾ ಫ್ಯಾಸಿಸ್ಟ್ ಸಂಘ–ಸಂಸ್ಥೆಗಳೂ ಹೊಂದಿರುವ ಒಂದು ಸಾಮಾನ್ಯ ಗುಣಲಕ್ಷಣವೆಂದರೆ: ತಾವು ಹೆಣೆದ ಕಥನಗಳಿಗೆ ವಿರುದ್ಧವಾಗಿ ತಿರುಗುವ ಎಲ್ಲ ಪ್ರಮಾಣ, ಪುರಾವೆ, ಸಂಗತಿ, ಆಧಾರಗಳನ್ನು ಅವರು ಸಾರಾಸಗಟಾಗಿ ತಿರಸ್ಕರಿಸುತ್ತಾರೆ. ಭಾರತದಲ್ಲಿ ಅಧಿಕಾರದಲ್ಲಿರುವ ಹಿಂದುತ್ವವೂ ಈ ಮಾತಿಗೆ ಹೊರತಲ್ಲ. ಭಾರತದ ಅರ್ಥವ್ಯವಸ್ಥೆ ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿದೆ; ಜನರ ಸ್ಥಿತಿ–ಗತಿಗಳು ಹಿಂದೆಂದೂ ಈಗಿನಷ್ಟು ಉತ್ತಮವಾಗಿರಲಿಲ್ಲ ಎಂಬುದು ಅವರ ಒಂದು ನಿರೂಪಣೆ. ಆದರೆ, ವಸ್ತು–ಸ್ಥಿತಿ ಇರುವುದೇ ಬೇರೆ ಎಂಬುದನ್ನು ಅಂತರರಾಷ್ಟ್ರೀಯ ಸಂಸ್ಥೆಗಳು ಅಥವಾ ಸ್ವತಃ ಸರ್ಕಾರದ ಏಜೆನ್ಸಿಗಳೇ ಸಂಗ್ರಹಿಸಿದ ಅಂಕಿ–ಅಂಶಗಳು ಒಂದು ವೇಳೆ ತೋರಿಸಿದರೆ, ಆ ಅಂಕಿ–ಅಂಶಗಳೇ ತಪ್ಪು ಎಂದು ವಾದಮಾಡಲಾಗುತ್ತದೆ. ಭಾರತದ ಫ್ಯಾಸಿಸ್ಟ್ ತೆರನ ಹಿಂದುತ್ವ ಸಂಘಟನೆಯ ದೃಢನಂಬಿಕೆ ಬಹಳ ಸರಳವಾಗಿದೆ: ಮೋದಿ ಏನು ಹೇಳುತ್ತಾರೊ ಅದೇ ವಾಸ್ತವ. ಒಂದು ವೇಳೆ ಅಂಕಿ–ಅಂಶಗಳು ಅಥವಾ ಸಂಗತಿಗಳು ಮೋದಿಯವರು ಹೇಳಿದ್ದಕ್ಕಿಂತ ಭಿನ್ನವಾಗಿ ಕಂಡರೆ, ಅವು ತಪ್ಪೇ ತಪ್ಪು ಮತ್ತು ಬಹುತೇಕ ಅವು ಒಂದು ದುಷ್ಟ ಮತ್ತು ಭಯೋತ್ಪಾದಕ ಪಿತೂರಿಯ ಭಾಗವಾಗಿರುತ್ತವೆ.

ಸಾರಾಸಗಟು ನಿರಾಕರಣೆ ಮತ್ತು ವಿಮರ್ಶೆ ಇವುಗಳ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ. ಒಂದು ಪ್ರಮಾಣವನ್ನೊ ಅಥವಾ ಪುರಾವೆಯನ್ನೊ ಅಥವಾ ಸಂಗತಿಯನ್ನೊ ವಿಮರ್ಶಿಸಿದರೆ, ಅದು ನಿಜಕ್ಕೂ ಒಂದು ಸಾರ್ಥಕ ಚಟುವಟಿಕೆ. ಎಲ್ಲಾ ವಿಮರ್ಶಾತ್ಮಕ ಚರ್ಚೆಗಳೂ ಉಪಯುಕ್ತವೇ. ಏಕೆಂದರೆ, ಅವು ಪ್ರಾಮಾಣ್ಯವನ್ನು ಸಂಗ್ರಹಿಸುವ ವಿಧಾನವನ್ನು ಉತ್ತಮಗೊಳ್ಳಲು ಕಾರಣವಾಗುತ್ತದೆ. ಅಥವಾ ಲಭ್ಯವಿರುವ ಪುರಾವೆ–ಆಧಾರಗಳ ಬೇರೊಂದು ವ್ಯಾಖ್ಯಾನಕ್ಕೆ ಕಾರಣವಾಗುತ್ತವೆ ಅಥವಾ ಬೇರೆ ಬೇರೆ ಪುರಾವೆಗಳತ್ತ ಗಮನವನ್ನು ಪೂರ್ಣವಾಗಿ ತಿರುಗಿಸುತ್ತವೆ. ಸಂಕ್ಷಿಪ್ತವಾಗಿ, ಹೇಳುವುದಾದರೆ, ಇಂಥಹ ವಿಮರ್ಶಾತ್ಮಕ ಚರ್ಚೆಗಳು ನಮ್ಮ ತಿಳುವಳಿಕೆಯನ್ನು ಆಳಗೊಳಿಸಲು ಕಾರಣವಾಗುತ್ತವೆ. ಆದರೆ, ಹಿಂದುತ್ವವಾದಿಗಳು ಈ ರೀತಿಯ ವಿಮರ್ಶಾತ್ಮಕ ಚರ್ಚೆಗಳಲ್ಲಿ ತೊಡಗುವುದಿಲ್ಲ. ತಮ್ಮ ಮಿಥ್ಯೆಗಳಿಗೆ ವಿರುದ್ಧವಾದ ಪ್ರಮಾಣ, ಪುರಾವೆ, ಸಂಗತಿ, ಆಧಾರಗಳನ್ನು ಹಿಂದುತ್ವವಾದಿಗಳು ಸಾರಾಸಗಟಾಗಿ ನಿರಾಕರಿಸುತ್ತಾರೆಯೇ ವಿನಃ, ನಿರ್ದಿಷ್ಟ ಪ್ರಮಾಣ, ಪುರಾವೆ, ಸಂಗತಿ, ಆಧಾರಗಳನ್ನು ಏಕೆ ಗಣನೆಗೆ ತೆಗೆದುಕೊಳ್ಳಬಾರದು ಎಂಬುದನ್ನು ಅವರು ವಿವರಿಸುವುದೇ ಇಲ್ಲ. ಅಂತಹ ಯಾವುದೇ ಬೌದ್ಧಿಕ ವಿಮರ್ಶೆ ಅವರ ಸಾಮರ್ಥ್ಯಕ್ಕೆ ಮೀರಿದ ವಿಷಯ.

ವರದಿಯನ್ನೇ ಬಚ್ಚಿಟ್ಟಿತು–ಸಮೀಕ್ಷೆಗಳನ್ನೇ ಕೈಬಿಟ್ಟಿತು!

ನನ್ನ ಈ ಅಭಿಪ್ರಾಯವನ್ನು ಮೋದಿ ಸರ್ಕಾರವು ಸಾಕ್ಷ್ಯಗಳನ್ನು ನಿರಾಕರಿಸಿದ ಮೂರು ಪ್ರಸಂಗಗಳನ್ನು ಉಲ್ಲೇಖಿಸುವ ಮೂಲಕ ವಿವರಿಸುತ್ತೇನೆ. ಮೊದಲನೆಯದು, ಗ್ರಾಹಕ ವೆಚ್ಚಗಳ ಬಗ್ಗೆ 2017–18ರ ರಾಷ್ಟ್ರೀಯ ಮಾದರಿ ಸಮೀಕ್ಷೆಗೆ ಸಂಬಂಧಿಸಿದೆ. ಈ ಮಾದರಿ ಸಮೀಕ್ಷೆಗಳನ್ನು 1950ರ ದಶಕದಲ್ಲಿ ದೇಶದ ಪ್ರಖ್ಯಾತ ವಿಜ್ಞಾನಿ ಹಾಗೂ ಸಂಖ್ಯಾಶಾಸ್ತ್ರಜ್ಞ ಪ್ರೊಫೆಸರ್ ಪಿ ಸಿ ಮಹಾಲನೋಬಿಸ್ ರೂಪಿಸಿದ್ದರು. ಈ ದೊಡ್ಡ ಮಾದರಿ ಸಮೀಕ್ಷೆಯನ್ನು ಪ್ರತಿ ಐದು ವರ್ಷಗಳಿಗೊಮ್ಮೆ ಕೈಗೊಳ್ಳಲಾಗುತ್ತಿತ್ತು. ವಾಸ್ತವವಾಗಿ ಇದು ವಿಶ್ವದ ಅತಿದೊಡ್ಡ ನಿಯತ ಕಾಲಿಕ ಮಾದರಿ ಸಮೀಕ್ಷೆ ಎನಿಸಿದೆ. ಈ ಸಮೀಕ್ಷೆಯು, ಅದರಲ್ಲಿರಬಹುದಾದ ಎಲ್ಲ ನ್ಯೂನತೆಗಳ ಹೊರತಾಗಿಯೂ, ಭಾರತ ಮತ್ತು ವಿದೇಶಗಳ ಹಲವು ಪೀಳಿಗೆಗಳ ಸಂಶೋಧಕರಿಗೆ ಅಮೂಲ್ಯವಾದ ಮಾಹಿತಿಯನ್ನು ಒದಗಿಸಿದೆ.

ಪತ್ರಿಕೆಗಳಲ್ಲಿ ಸೋರಿಕೆಯಾದ ವರದಿಯ ಪ್ರಕಾರ, 2017–18ರ ಪಂಚವಾರ್ಷಿಕ ಸಮೀಕ್ಷೆಯು ದೇಶದಲ್ಲಿ ಬಡತನ ಹೆಚ್ಚುತ್ತಿರುವ ಅಂಶವನ್ನು ತಿಳಿಸಿತ್ತು. ಈ ನಿರಾಶಾದಾಯಕ ವರದಿ ಸಾರ್ವಜನಿಕ ಅವಗಾಹನೆಗೆ ಬರದಂತೆ ಮೋದಿ ಸರ್ಕಾರವು ಬಚ್ಚಿಟ್ಟಿತ್ತು. ಮಾತ್ರವಲ್ಲ, ಈ ದೊಡ್ಡ ನಿಯತಕಾಲಿಕ ಮಾದರಿ ಸಮೀಕ್ಷಾ ಕಾರ್ಯವನ್ನೇ ಕೊನೆಗೊಳಿಸಿತು. ಈ ವರದಿಯನ್ನು ಬಚ್ಚಿಡುವ ಮೊದಲು ಸೋರಿಕೆಯಾದ ಅಂಶಗಳಿಂದ ವಿಷಯಗಳಿಂದ ತಿಳಿದುಬಂದದ್ದು ಏನೆಂದರೆ, ಗ್ರಾಮೀಣ ಗ್ರಾಹಕರ ತಲಾ ವೆಚ್ಚವು 2011–12 ಮತ್ತು 2017–18ರ ನಡುವಿನ ಅವಧಿಯಲ್ಲಿ ಶೇ. 9ರಷ್ಟು ಕುಸಿದಿತ್ತು ಎಂಬುದು. ಈ ತಲಾ ವೆಚ್ಚದ ಕುಸಿತವನ್ನು ಆಧರಿಸಿ, ತಲಾ ದೈನಿಕ 2200 ಕ್ಯಾಲೊರಿ (ಗ್ರಾಮೀಣ ಬಡತನವನ್ನು ವ್ಯಾಖ್ಯಾನಿಸುವ ಮೂಲ ಅಧಿಕೃತ ಮಾನದಂಡ) ಆಹಾರವನ್ನು ಪಡೆಯಲು ಸಾಧ್ಯವಾಗದ ಗ್ರಾಮೀಣ ಜನಸಂಖ್ಯೆಯ ಪ್ರಮಾಣವು, 2011–12ರಲ್ಲಿದ್ದ ಶೇ. 68ರಿಂದ 2017–18ರ ವೇಳೆಗೆ ಶೇ. 78.5ಕ್ಕೆ ಏರಿದೆ ಎಂದು ಅಂದಾಜಿಸಲಾಗಿತ್ತು.

ಮುಜುಗರಕ್ಕೊಳಪಡಿಸುವ ಈ ಅಂಕಿ ಅಂಶಗಳಿಂದ ಗಾಬರಿಗೊಳ್ಳುವ ಬದಲು, ಒಂದು ಹೊಸ ಸಮೀಕ್ಷೆಯ ಮೂಲಕ ಈ ಅಂಕಿ ಅಂಶಗಳ ಸತ್ಯಾಸತ್ಯತೆಯನ್ನು ಪರೀಕ್ಷೆಮಾಡಬಹುದಿತ್ತು (2009–10ರ ಪಂಚವಾರ್ಷಿಕ ಸಮೀಕ್ಷೆಯು ತೋರಿಸಿದ ಹೆಚ್ಚಿನ ಮಟ್ಟದ ಬಡತನವನ್ನು ಅನುಮಾನಿಸಿದ ಯುಪಿಎ ಸರ್ಕಾರವು 2011–12ರಲ್ಲಿ ಒಂದು ಮರು ಸಮೀಕ್ಷೆಯನ್ನು ಕೈಗೊಂಡಿತ್ತು). ಅಥವಾ, ಸಮೀಕ್ಷೆಯ ಪರಿಣಾಮಗಳನ್ನು ಮತ್ತು ಅಳವಡಿಸಿಕೊಳ್ಳಬಹುದಾದ ಸಂಭಾವ್ಯ ಪರಿಹಾರ ಕ್ರಮಗಳನ್ನು ಪರಿಶೀಲಿಸಲು ತಜ್ಞರ ಸಮಿತಿಯನ್ನು ನೇಮಕ ಮಾಡುವ ಮೂಲಕ ಅದರ ಸತ್ಯಾಸತ್ಯತೆಯನ್ನು ಪರೀಕ್ಷಿಸಿಕೊಳ್ಳಬಹುದಿತ್ತು. ಬದಲಿಗೆ, ಮೋದಿ ಸರ್ಕಾರವು ವರದಿಯನ್ನೇ ಬಚ್ಚಿಟ್ಟಿತು ಮತ್ತು ಭವಿಷ್ಯದಲ್ಲಿ ಕೈಗೊಳ್ಳಬೇಕಿದ್ದ ಸಮೀಕ್ಷೆಗಳನ್ನು ಕೈಬಿಟ್ಟಿತು! ಇದು, ಫ್ಯಾಸಿಸ್ಟ್ ತೆರದವರು ಪುರಾವೆಗಳು ತಮ್ಮ ದಾವೆಗಳಿಗೆ ತದ್ವಿರುದ್ಧವಾಗಿದ್ದಾಗ ಸಾಮಾನ್ಯವಾಗಿ ತೋರುವ ಪ್ರತಿಕ್ರಿಯೆ.

ನಿರ್ದೇಶಕರ ಮೇಲೆಯೇ ಸುಳ್ಳು ಆರೋಪ

ನನ್ನ ಎರಡನೇ ಉದಾಹರಣೆ 2019–21ರ ಅವಧಿಯಲ್ಲಿ ನಡೆಸಿದ 5ನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಗೆ ಸಂಬಂಧಿಸಿದೆ. 2015–16ರಲ್ಲಿ ನಡೆಸಲಾದ 4ನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಗೆ ಹೋಲಿಸಿದರೆ, ಮಕ್ಕಳು ಮತ್ತು ಮಹಿಳೆಯರಲ್ಲಿ ಅದಾಗಲೇ ತುಂಬಾ ಹೆಚ್ಚಿನ ಮಟ್ಟದಲ್ಲಿದ್ದ ರಕ್ತಹೀನತೆಯ ಪ್ರಕರಣಗಳು ಆತಂಕಕಾರಿ ಹೆಚ್ಚಳವನ್ನು ದಾಖಲಿಸಿವೆ ಎಂಬುದನ್ನು 5ನೇ ಆರೋಗ್ಯ ಸಮೀಕ್ಷೆ ತೋರಿಸುತ್ತದೆ. 2015–16ರಲ್ಲಿ, 6 ತಿಂಗಳಿನಿಂದ 59 ತಿಂಗಳ ನಡುವಿನ ವಯೋಮಾನದ ಶೇ. 59ರಷ್ಟು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದರೆ, 2019–21ರಲ್ಲಿ ಈ ಸಂಖ್ಯೆಯು ಶೇ. 67ಕ್ಕೆ ಏರಿದೆ. ಅದಲ್ಲದೆ, ಈ ನಾಲ್ಕು ವರ್ಷಗಳ ಅವಧಿಯಲ್ಲಿ ಮಧ್ಯಮ ಮಟ್ಟದಿಂದ ತೀವ್ರ ರಕ್ತಹೀನತೆಯ ಪ್ರಕರಣಗಳು ಶೇ. 30.6ರಿಂದ ಶೇ. 38.1ಕ್ಕೆ ಏರಿಕೆಯಾಗಿವೆ. ಆದರೆ, ಇದೇ ಅವಧಿಯ ಸೌಮ್ಯ ರಕ್ತಹೀನತೆಯ ಪ್ರಕರಣಗಳು ಅನುಕ್ರಮವಾಗಿ ಶೇ. 28.4 ಮತ್ತು 28.9ರಷ್ಟಿವೆ. ಅಂತೆಯೇ, ಇದೇ ಅವಧಿಯಲ್ಲಿ, 49 ವರ್ಷದವರೆಗಿನ ವಯೋಮಾನದ ಮಹಿಳೆಯರಲ್ಲಿ ರಕ್ತಹೀನತೆಯ ಪ್ರಕರಣಗಳು ಶೇ. 53ರಿಂದ ಶೇ. 57ಕ್ಕೆ ಏರಿವೆ; ಮಧ್ಯಮ ಮಟ್ಟದಿಂದ ತೀವ್ರ ರಕ್ತಹೀನತೆಯ ಪ್ರಕರಣಗಳು ಶೇ. 28.4ರಿಂದ ಶೇ. 31.4ಕ್ಕೆ ಏರಿವೆ. 49 ವರ್ಷದವರೆಗಿನ ವಯೋಮಾನದ ಪುರುಷರಲ್ಲಿಯೂ, ರಕ್ತಹೀನತೆಯ ಪ್ರಕರಣಗಳು ಇದಕ್ಕಿಂತ ಕಡಿಮೆ ಇದ್ದರೂ, ಅವು ಕೂಡ ಶೇ. 23ರಿಂದ ಶೇ. 25ಕ್ಕೆ ತುಸು ಕಡಿಮೆ ಪ್ರಮಾಣದ ಏರಿಕೆ ಕಂಡಿವೆ. ಮಧ್ಯಮ ಮಟ್ಟದಿಂದ ತೀವ್ರ ರಕ್ತಹೀನತೆಯ ಪ್ರಕರಣಗಳು ಶೇ. 5ರಿಂದ ಶೇ. 8ಕ್ಕೆ ಏರಿವೆ. ಗ್ರಾಮೀಣ ಮಕ್ಕಳು ಮತ್ತು ವಯಸ್ಕರು ಸರಾಸರಿಗಿಂತ ಹೆಚ್ಚಿನ ರಕ್ತಹೀನತೆಯನ್ನು ಹೊಂದಿದ್ದಾರೆ, ಮತ್ತು ರಕ್ತಹೀನತೆಯಿಂದ ಬಳಲುತ್ತಿದ್ದ ತಾಯಂದಿರ ಮಕ್ಕಳು ರಕ್ತಹೀನತೆಗೆ ಒಳಗಾಗುವ ಅಪಾಯ ಹೆಚ್ಚಿನದ್ದಾಗಿತ್ತು.

ಸಮೀಕ್ಷೆಗಳು ಹೊರಹಾಕಿದ ಈ ಅಂಶಗಳ ಬಗ್ಗೆ ಸರ್ಕಾರದ ಪ್ರತಿಕ್ರಿಯೆ ಏನು? ಜನರ ಬಗ್ಗೆ ಸ್ವಲ್ಪವಾದರೂ ಕಾಳಜಿ ಹೊಂದಿರುವ ಯಾವುದೇ ಸರ್ಕಾರವು ಮಾಡಬಹುದಾದ ಒಂದು ಕನಿಷ್ಠ ಕರ್ತವ್ಯ ನಿರ್ವಹಣೆಯನ್ನು ಮೋದಿ ಸರ್ಕಾರ ಮಾಡಲಿಲ್ಲ, ಈ ಬಗ್ಗೆ ಯಾವುದೇ ಕಾಳಜಿಯನ್ನು ತೋರಿಸಲಿಲ್ಲ. ಅದರ ಬದಲು, ಅಂದರೆ ಅವುಗಳ ಸತ್ಯಾಸತ್ಯತೆ ಮತ್ತು ಪರಿಣಾಮಗಳನ್ನು ತಜ್ಞರೊಡನೆ ಚರ್ಚಿಸುವುದರ ಬದಲು ಮತ್ತು ಈ ಪ್ರವೃತ್ತಿಯನ್ನು ಹಿಮ್ಮೆಟ್ಟಿಸಲು ತೆಗೆದುಕೊಳ್ಳಬೇಕಾದ ತುರ್ತು ಕ್ರಮಗಳ ಬಗ್ಗೆ ಚರ್ಚಿಸುವ ಬದಲು, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯನ್ನು ನಡೆಸಿರುವ ಇಂಟರ್ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಪಾಪ್ಯುಲೇಷನ್ ಸ್ಟಡೀಸ್ ಸಂಸ್ಥೆಯ ನಿರ್ದೇಶಕರನ್ನು ಸುಳ್ಳು ಆರೋಪಗಳ ಮೇಲೆ ಅಮಾನತಿನಲ್ಲಿಟ್ಟಿತು. (ಅಮಾನತಿನಲ್ಲಿದ್ದ ಸಮಯದಲ್ಲಿ ಆ ನಿರ್ದೇಶಕರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದಾಗ ಅವರ ಅಮಾನತನ್ನು ತೆರವುಗೊಳಿಸಿದ ಅಂಶವು, ಅವರ ಮೇಲೆ ಮಾಡಿದ ಆರೋಪಗಳ ಸುಳ್ಳು ಸ್ವರೂಪವನ್ನು ಬಯಲುಮಾಡಿದೆ). ಇದೂ ಕೂಡ ಫ್ಯಾಸಿಸ್ಟ್ ತೆರನ ಪ್ರತಿಕ್ರಿಯೆಯೇ.

ಉಡಾಫೆ ಸಚಿವರ ಗೇಲಿ

ನನ್ನ ಮೂರನೇ ಉದಾಹರಣೆ ಜಾಗತಿಕ ಹಸಿವು ಸೂಚ್ಯಂಕಕ್ಕೆ ಸಂಬಂಧಿಸಿದೆ. 2023ರ ಜಾಗತಿಕ ಹಸಿವು ಸೂಚ್ಯಂಕದಲ್ಲಿರುವ ಒಟ್ಟು 125 ದೇಶಗಳ ಪೈಕಿ ಭಾರತವು 111ನೇ ಸ್ಥಾನದಲ್ಲಿದೆ (ಹಸಿವಿನಿಂದ ನರಳುವವರು ಅತಿ ಕಡಿಮೆ ಸಂಖ್ಯೆಯಲ್ಲಿರುವ ದೇಶಗಳನ್ನು ಈ ಪಟ್ಟಿಯಿಂದ ಹೊರಗಿಡಲಾಗಿದೆ). ಅದಕ್ಕಿಂತಲೂ ಮುಖ್ಯವಾದ ಸಂಗತಿ ಎಂದರೆ, ಈ ಪಟ್ಟಿಯಲ್ಲಿ ಭಾರತದ ಶ್ರೇಯಾಂಕವು ನಮ್ಮ ನೆರೆಯ ದೇಶಗಳಾದ ಪಾಕಿಸ್ತಾನ (102), ಬಾಂಗ್ಲಾದೇಶ (81), ಶ್ರೀಲಂಕಾ (60) ಮತ್ತು ನೇಪಾಳ (69) ಇವುಗಳಿಗಿಂತ ತೀರಾ ಕೆಳಗಿದೆ ಮತ್ತು ವರ್ಷ ವರ್ಷವೂ ಕೆಳಗಿಳಿಯುತ್ತಲೇ ಇದೆ.

ಇಲ್ಲಿಯೂ, ಸಮೀಕ್ಷೆಗಳು ಹೊರಹಾಕಿದ ಈ ಅತ್ಯಂತ ಕಳವಳಕಾರಿ ಅಂಶಗಳ

ಪುಟ 14 ಕ್ಕೆ



"ನೀವು ಹಸಿದಿದ್ದೀರಿ ಎಂದು ಹೇಳಲು – ನಿಮಗೆ ಹಣ ಕೊಟ್ಟವರು ಯಾರು? – ಚೀನಾ? ಯಾವುದೇ ವ್ಯಾಪಾರಿ?
ಕೃಪೆ: ಸತೀಶ ಆಚಾರ್ಯ, ಫೇಸ್‌ಬುಕ್

ನವೆಂಬರ್ 6–ಸುಳ್ಳು ನ್ಯೂಸ್‌ಕ್ಲಿಕ್ ಎಫ್‌ಐಆರ್‌ನ ಪ್ರತಿಗಳನ್ನು ಸುಟ್ಟುಹಾಕಿ ಅಖಿಲ ಭಾರತ ಪ್ರತಿಭಟನಾ ದಿನ......... ಪುಟ 6 ರಿಂದ

ದುರುಪಯೋಗಪಡಿಸಿಕೊಂಡಿದ್ದಾರೆ. ನ್ಯೂಸ್‌ಕ್ಲಿಕ್ ನಿಜವಾದ ಮಾಧ್ಯಮ ಮಾಡಬೇಕಾದ ಕರ್ತವ್ಯವನ್ನಷ್ಟೇ ನಿಭಾಯಿಸಿದೆ– ಅಂದರೆ ಸತ್ಯವನ್ನು ವರದಿ ಮಾಡುವುದು, ರೈತರ ಸಮಸ್ಯೆಗಳು ಮತ್ತು ಒಗ್ಗಟ್ಟಿನ ಹೋರಾಟದ ಬಗ್ಗೆ ವರದಿ ಮಾಡುವುದು. ಬಿಜೆಪಿ ಸರ್ಕಾರವು ರೈತರ ಆಂದೋಲನ ಜನವಿರೋಧಿ, ರಾಷ್ಟ್ರವಿರೋಧಿ ಮತ್ತು ನ್ಯೂಸ್‌ಕ್ಲಿಕ್ ಮೂಲಕ ಭಯೋತ್ಪಾದಕ ನಿಧಿಯಿಂದ ಬೆಂಬಲಿತವಾಗಿದೆ ಎಂಬ ಸುಳ್ಳು ಕಥನವನ್ನು ಹರಡಲು ಈ ಪ್ರಹಸನಕಾರೀ ಎಫ್‌ಐಆರ್ ಅನ್ನು ಬಳಸುತ್ತಿದೆ. ಈ ಕಥನ ತಪ್ಪಾಗಿದೆ ಮತ್ತು ಚಳವಳಿಯನ್ನು ಕೆಟ್ಟದಾಗಿ ಚಿತ್ರಿಸಲು ಮತ್ತು ನಮ್ಮ ದೇಶದ ರೈತರ ಕೈಯಲ್ಲಿ ಅನುಭವಿಸಿದ ಅವಮಾನಕರ ಸೋಲಿಗೆ ಸೇಡು ತೀರಿಸಿಕೊಳ್ಳಲು ಕಿಡಿಗೇಡಿತನದಿಂದ ಇದನ್ನು ಸೇರಿಸಲಾಗಿದೆ ಎಂದು ಎಸ್.ಕೆ.ಎಂ. ಕರಪತ್ರ ಹೇಳುತ್ತದೆ.

3 ಕರಾಳ ಕಾಯಿದೆಗಳನ್ನು ಹಿಂತೆಗೆದುಕೊಂಡ ಮೋದಿ ಸರ್ಕಾರ ಇದೀಗ ಮತ್ತೆ ರೈತರ ಚಳವಳಿಯ ಮೇಲೆ ವಿದೇಶಿ ನಿಧಿ ಮತ್ತು ಭಯೋತ್ಪಾದಕ ಶಕ್ತಿಗಳಿಂದ ಪ್ರಾಯೋಜಿತವಾಗಿದೆ ಎಂದು ಸುಳ್ಳು ಆರೋಪ ಹೊರಿಸುತ್ತಿದೆ! ಅದೇ ವೇಳೆಯಲ್ಲಿ ಆರೆಸ್ಸೆಸ್ ಮತ್ತು ಬಿಜೆಪಿ ಕೃಷಿಯೊಳಕ್ಕೆ ಎಫ್‌ಡಿಐ, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು, ದೊಡ್ಡ ಕಂಪನಿಗಳನ್ನು ಉತ್ತೇಜಿಸುತ್ತಿವೆ! ಅವರು ಭಾರತೀಯ ರೈತರನ್ನು ಖಂಡಿಸಲು ಮತ್ತು ನಾಶಮಾಡಲು ಆಳವಾಗಿ ಬದ್ಧರಾಗಿದ್ದಾರೆ. ಆದರೆ ತಾನು ರೈತರ ಅರ್ಥವ್ಯವಸ್ಥೆಯನ್ನು ಉಳಿಸಲು, ವಿದೇಶಿ ಲೂಟಿಯನ್ನು ತಡೆಗಟ್ಟಲು ಮತ್ತು ಬಲಿಷ್ಠ ಭಾರತವನ್ನು ನಿರ್ಮಿಸಲು ಹಳ್ಳಿಯ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ತಾನು ಬದ್ಧ ಎಂದು.ಬದ್ಧವಾಗಿರುವುದಾಗಿ ಎಸ್.ಕೆ.ಎಂ ಸಾರಿದೆ.

ಅದರ ಪ್ರಮುಖ ಆಗ್ರಹಗಳೆಂದರೆ,

1. ಎಲ್ಲಾ ಬೆಳೆಗಳಿಗೆ ಕಾನೂನು ಪ್ರಕಾರ ಖಾತರಿಪಡಿಸಿದ ಕನಿಷ್ಟ ಬೆಂಬಲ ಬೆಲೆಗಳನ್ನು ಸಿ2+50% ಸೂತ್ರದಂತೆ ಕೊಡಬೇಕು
2. ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಬೇಕು, ತಿಂಗಳಿಗೆ ಕನಿಷ್ಠ ವೇತನ 26000ರೂ. ಖಾತ್ರಿಪಡಿಸಬೇಕು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ರೂ 2 ಲಕ್ಷ ಕೋಟಿಗಳನ್ನು ನೀಡುವ ಮೂಲಕ ಅದನ್ನು ಬಲಪಡಿಸಿ 200 ದಿನಗಳ ಕೆಲಸ ಮತ್ತು ರೂ.600 ದಿನಕೂಲಿಯನ್ನು ಖಾತ್ರಿಪಡಿಸಬೇಕು,
3. ಖಾಸಗೀಕರಣ ಮತ್ತು ವಿದ್ಯುತ್ ವಲಯದ ಮೇಲಿನ ನಿಯಂತ್ರಣಗಳನ್ನು ತೆಗೆದು ಖಾಸಗೀಕರಿಸುವ ಗುರಿ ಹೊಂದಿರುವ ವಿದ್ಯುಚ್ಛಕ್ತಿ ಬಿಲ್ 2022 ನ್ನು ರದ್ದು ಮಾಡಬೇಕು, ರೈಲ್ವೆ, ವಿಮಾನಯಾನ, ಬಂದರುಗಳು, ಎಫ್‌ಸಿಐ, ವಿಮೆ, ಬ್ಯಾಂಕ್, ರಾಷ್ಟ್ರೀಯ ಹೆದ್ದಾರಿಗಳು ಮತ್ತು ರಕ್ಷಣಾ ವಲಯವೂ ಸೇರಿದಂತೆ ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣ ಮತ್ತು ಗುತ್ತಿಗೆಕರಣವನ್ನು ನಿಲ್ಲಿಸಬೇಕು,
4. ರೈತರು ಮತ್ತು ಕೃಷಿ ಕಾರ್ಮಿಕರ ಕುಟುಂಬಗಳಿಗೆ ಸಮಗ್ರ ಸಾಲಮನ್ನಾ ಮತ್ತು ಆಹಾರ ಭದ್ರತೆ, ಶಿಕ್ಷಣ, ಆರೋಗ್ಯ ಮತ್ತು ವಸತಿಗಳ ಲಭ್ಯತೆಯ ಹಕ್ಕಿನೊಂದಿಗೆ 10000 ರೂ.ಪೆನ್ಶನ್

ಪ್ರಧಾನಿ ಮೋದಿಯವರು 2014 ಮತ್ತು 2019 ರ ಸಾರ್ವತ್ರಿಕ ಚುನಾವಣೆಗಳಲ್ಲಿ ಬಿಜೆಪಿಯ ಚುನಾವಣಾ ಪ್ರಣಾಳಿಕೆಯಲ್ಲಿನ ಯಾವುದೇ ಭರವಸೆಗಳನ್ನು ಜಾರಿಗೆ ತರದೆ ಭಾರತದ ರೈತರಿಗೆ ಮತ್ತು ಜನರಿಗೆ ಕ್ರೂರವಂಚನೆಯನ್ನು ಮಾಡಿದ್ದಾರೆ, ಇದೀಗ ಪ್ರಧಾನ ಮಂತ್ರಿಗಳು ಮತ್ತು ಬಿಜೆಪಿ ದೇಶದ ರೈತರ ವಿರುದ್ಧ ಸುಳ್ಳು ಕಥನಗಳನ್ನು ಹರಡುವ ಮೂಲಕ ರೈತರ ಆಂದೋಲನವನ್ನು ಗುರಿಯಾಗಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಹೊಸದಿಲ್ಲಿಯಲ್ಲಿ ನಡೆದ ಎಸ್‌ಕೆಎಂ ಮಹಾಸಭೆಯು ತೀವ್ರ ಆಕ್ರೋಶ ಮತ್ತು ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದು, ಸುಳ್ಳು ನ್ಯೂಸ್‌ಕ್ಲಿಕ್ ಎಫ್‌ಐಆರ್ ಅನ್ನು ತಕ್ಷಣವೇ ಹಿಂಪಡೆದು ಪತ್ರಕರ್ತರಾದ ಪ್ರಬೀರ್ ಪುರಕಾಯಸ್ಥ ಮತ್ತು ಅಮಿತ್ ಚಕ್ರವರ್ತಿ ಅವರನ್ನು ಬಿಡುಗಡೆ ಮಾಡುವಂತೆ ಮೋದಿ ಸರ್ಕಾರಕ್ಕೆ ಎಚ್ಚರಿಕೆ ನೀಡಿತ್ತು ಎಂದು ಪ್ರಸಕ್ತ ಅಭಿಯಾನದ ಎಸ್‌ಕೆಎಂ ಕರಪತ್ರ ಹೇಳಿದೆ.

ಸಾಕ್ಷ್ಯಾಧಾರಗಳೆಂದರೆ ಫ್ಯಾಸಿಸ್ಟರಿಗೆ ಎಲ್ಲಿಲ್ಲದ...... ಪುಟ 13 ರಿಂದ

ಬಗ್ಗೆ ಸರ್ಕಾರದ ಪ್ರತಿಕ್ರಿಯೆ ಏನು? ಸ್ವಲ್ಪವಾದರೂ ತಲ್ಲಣವಿಲ್ಲ, ಸ್ವಲ್ಪವಾದರೂ ಕಾಳಜಿಯಿಲ್ಲ. ಈ ವರದಿಯನ್ನು ಸಾರಾಸಗಟಾಗಿ ತಿರಸ್ಕರಿಸಲಾಗಿದೆ. ಒಬ್ಬ ಸಂಪುಟ ಸಚಿವರಂತೂ, ಈ ಬಗ್ಗೆ ಅತ್ಯಂತ ಸುಳ್ಳು ಮಾಹಿತಿಗಳನ್ನು ನೀಡುತ್ತ, ಜಾಗತಿಕ ಹಸಿವು ಸೂಚ್ಯಂಕದ ಬಗ್ಗೆಯೇ ಗೇಲಿ ಮಾಡಿದ್ದಾರೆ. ಜಾಗತಿಕ ಹಸಿವು ಸೂಚ್ಯಂಕವನ್ನು ನಾಲ್ಕು ನಿಯತಾಂಶಗಳಿಂದ ಲೆಕ್ಕಹಾಕಲಾಗುತ್ತದೆ: ಅಪೌಷ್ಟಿಕತೆ, ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣ, ಮಕ್ಕಳ ಕುಂಠಿತ ಬೆಳವಣಿಗೆ (ವಯಸ್ಸಿಗೆ ಹೋಲಿಸಿದರೆ ಎತ್ತರ) ಮತ್ತು ಮಕ್ಕಳ ಕಳಪೆ ಬೆಳವಣಿಗೆ (ಎತ್ತರಕ್ಕೆ ಹೋಲಿಸಿದರೆ ತೂಕ). ಈ ನಿಯತಾಂಶಗಳು ವಯಸ್ಕರಿಗಿಂತ ಮಕ್ಕಳ ಬೆಳವಣಿಗೆಯ ಸ್ಥಿತಿಯಿಂದ ಹೆಚ್ಚು ಪ್ರಭಾವಿತವಾಗಿವೆ ಎಂಬ ಸರ್ಕಾರದ ಹೇಳಿಕೆಯನ್ನು ಒಂದು ಕ್ಷಣ ಒಪ್ಪಿಕೊಂಡರೂ, ವಿಶ್ವದ ಇತರ ಭಾಗಗಳಿಗೆ ಹೋಲಿಸಿದರೆ ಭಾರತದಲ್ಲಿ ಮಕ್ಕಳ ಸ್ಥಿತಿ–ಗತಿಗಳು ಶೋಚನೀಯವಾಗಿದೆ ಎಂದು ಸೂಚ್ಯಂಕ ಹೇಳುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಜಾಗತಿಕ ಹಸಿವು ಸೂಚ್ಯಂಕದ ಶೋಧನೆಯನ್ನು ನಿರ್ಲಕ್ಷಿಸಲು ಯಾವ ಆಧಾರವೂ ಇಲ್ಲ.

ಇಡೀ ದಿನ ಪ್ರಯಾಣ ಮಾಡಿರುವುದರಿಂದ ತಾನೂ ಹಸಿದಿದ್ದೇನೆ ಮತ್ತು ತನ್ನ ಆಹಾರದ ಪರಿಸ್ಥಿತಿಯ ಬಗ್ಗೆ ವಿಚಾರಿಸಲು ಯಾರಾದರೂ ದೂರವಾಣಿ ಕರೆ ಮಾಡಿ ಕೇಳಿದ್ದರೆ ನಾನೂ ಹಸಿವಿನಲ್ಲಿದ್ದೇನೆ ಎಂದೇ ಹೇಳುತ್ತಿದ್ದೆ. ಭಾರತದಲ್ಲಿ 3000 ಜನರನ್ನು ಸಮೀಕ್ಷೆಗೆ ಒಳಪಡಿಸಿದ ಈ ಸೂಚ್ಯಂಕವನ್ನು ಸಿದ್ಧಗೊಳಿಸುವ ಮಾಹಿತಿಯು ಅನುಮಾನಾಸ್ಪದವಾಗಿದ್ದು, ಒಟ್ಟಾರೆಯಾಗಿ ಈ ಸೂಚ್ಯಂಕವನ್ನು ತಿರಸ್ಕರಿಸುವ ಅಗತ್ಯವಿದೆ ಎಂಬುದು ಈ ಉಡಾಫೆ ಸಚಿವರ ಅಂಬೋಣ.

ಈ ಸಂದರ್ಭದಲ್ಲಿ ಮೂರು ಅಂಶಗಳನ್ನು ಪ್ರಸ್ತಾಪಿಸಬೇಕಾಗಿದೆ: ಮೊದಲನೆಯದಾಗಿ, ಸೂಚ್ಯಂಕದಲ್ಲಿರುವ ನಾಲ್ಕು ನಿಯತಾಂಶಗಳಲ್ಲಿ ಅಪೌಷ್ಟಿಕತೆಯೂ ಒಂದು. ಎರಡನೆಯದಾಗಿ, ಈ ಅಪೌಷ್ಟಿಕತೆಯ ಮಟ್ಟವನ್ನು ನಿರ್ಣಯಿಸಲು ಕೇವಲ ವ್ಯಕ್ತಿಗಳನ್ನು ಸಂದರ್ಶಿಸುವುದು ಮಾತ್ರವಲ್ಲ, ಅಧಿಕೃತ ದತ್ತಾಂಶಗಳಿಂದ ಪಡೆದ ಪ್ರತಿ ದೇಶದ ಆಹಾರ ಬ್ಯಾಲೆನ್ಸ್ ಶೀಟ್‌ಅನ್ನೂ ಸಹ ಅವಲಂಬಿಸಲಾಗಿದೆ. ಮೂರನೆಯದಾಗಿ, ಬಿಜೆಪಿ ಸರ್ಕಾರವೇ ಆದೇಶಿಸಿರುವ ಗ್ರಾಹಕ ವೆಚ್ಚ ಸಮೀಕ್ಷೆಗಳನ್ನು ಸ್ಥಗಿತಗೊಳಿಸಿರುವುದರಿಂದಾಗಿಯೇ ವ್ಯಕ್ತಿಗಳನ್ನು ಸಂದರ್ಶಿಸುವ ಕ್ರಮವನ್ನು ಅನುಸರಿಸಲು ಕಾರಣ.

ಬಿಜೆಪಿ ಸರ್ಕಾರವು ಗ್ರಾಹಕ ವೆಚ್ಚ ಸಮೀಕ್ಷೆಗಳನ್ನು ಸ್ಥಗಿತಗೊಳಿಸುವ ಮೊದಲು ಮತ್ತು ಅದರಿಂದಾಗಿ ವ್ಯಕ್ತಿಗಳ ಸಂದರ್ಶನವನ್ನು ಅವಲಂಬಿಸುವ ಮೊದಲೇ, ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ಸ್ಥಾನವು ಕಾಲಕ್ರಮೇಣ ಕುಸಿಯುತ್ತಲೇ ಇತ್ತು ಮತ್ತು ಬಹಳ ವರ್ಷಗಳಿಂದಲೂ ಕೆಳ ಮಟ್ಟದಲ್ಲೇ ಇತ್ತು ಎಂಬುದನ್ನು ನೆನಪಿನಲ್ಲಿಡಬೇಕು. ತೀವ್ರ ಮತ್ತು ಹೆಚ್ಚುತ್ತಿರುವ ಹಸಿವಿನ ಜೊತೆಯಲ್ಲೇ ಜಿಡಿಪಿಯೂ ಉನ್ನತವಾಗಿ ಬೆಳೆಯುತ್ತಿತ್ತು. ಇದು, ಫ್ಯಾಸಿಸ್ಟ್ ತೆರನ ಶಕ್ತಿಗಳು ಅಧಿಕಾರಕ್ಕೆ ಬರುವ ಮೊದಲೇ ಇದ್ದ ನವ–ಉದಾರವಾದಿ ಆಳ್ವಿಕೆಯ ಶಾಶ್ವತ ಲಕ್ಷಣವೂ ಹೌದು. ಇವರು ಈ ಪ್ರವೃತ್ತಿಯನ್ನು ಮುಂದುವರಿಸಿದ್ದಾರೆ ಮತ್ತು ಅದನ್ನು ತೀವ್ರಗೊಳಿಸಿದ್ದಾರೆ. ಆದ್ದರಿಂದ ಹಸಿವಿನ ಮಟ್ಟವನ್ನು ನಿರ್ಣಯಿಸಲು ಅನುಸರಿಸಿರುವ ವ್ಯಕ್ತಿಗಳನ್ನು ಸಂದರ್ಶಿಸುವ ಕ್ರಮವು ಭಾರತವನ್ನು ಕಳಪೆಯಾಗಿ ತೋರಿಸಲು ಕಾರಣವಾಗಿದೆ ಎಂಬ ಹೇಳಿಕೆಯು ಮೇಲೆ ತಿಳಿಸಿದ ಕಾರಣಗಳ ಜೊತೆಗೆ, ಇನ್ನೂ ಎರಡು ಕಾರಣಗಳಿಗಾಗಿ ದೋಷಪೂರಿತವಾಗಿದೆ: ಮೊದಲನೆಯದಾಗಿ, ಈ ವಿಧಾನವನ್ನು ಭಾರತದಲ್ಲಿ ಮಾತ್ರವಲ್ಲ, ಎಲ್ಲಾ ದೇಶಗಳಲ್ಲೂ ಬಳಸಲಾಗುತ್ತದೆ, ಏಕೆಂದರೆ, ಉಳಿದ ದೇಶಗಳು ಭಾರತವು ಹೊಂದಿದ್ದ ವಿಸ್ತಾರವಾದ ಮಾದರಿ ಸಮೀಕ್ಷೆಗಳನ್ನು ನಡೆಸುತ್ತಿರಲಿಲ್ಲ, ಮತ್ತು, ಎರಡನೆಯದಾಗಿ, ಭಾರತದ ಕಡಿಮೆ ಶ್ರೇಯಾಂಕವು ವ್ಯಕ್ತಿಗಳನ್ನು ಸಂದರ್ಶಿಸುವ ವಿಧಾನದಿಂದ ಉಂಟಾಗಿಲ್ಲ, ಏಕೆಂದರೆ ಈ ವಿಧಾನವನ್ನು ಬಳಸುವುದಕ್ಕಿಂತಲೂ ಬಹಳ ಹಿಂದೆಯೇ ಭಾರತದ ಸ್ಥಾನ ಕೆಳ ಮಟ್ಟದಲ್ಲೇ ಇತ್ತು.

ವಿವಿಧ ಏಜೆನ್ಸಿಗಳು ಸಿದ್ಧಪಡಿಸಿದ ಅನೇಕ ವಿಭಿನ್ನ ಸೂಚ್ಯಂಕಗಳು, ಅದೂ ವಿಭಿನ್ನ ಮೂಲಗಳನ್ನು ಬಳಸಿಕೊಂಡು ಸಿದ್ಧಪಡಿಸಿದವುಗಳು, ಭಾರತದಲ್ಲಿ ಜಿಡಿಪಿ ಬೆಳವಣಿಗೆಯು ಉನ್ನತವಾಗಿದ್ದರೂ ಸಹ, ಪೌಷ್ಠಿಕಾಂಶದ ಕೊರತೆಯ ಸ್ಥಿತಿ ತೀವ್ರವಾಗಿದೆ ಮತ್ತು ಬೆಳೆಯುತ್ತಿದೆ ಎಂದು ಸೂಚಿಸುತ್ತಿದ್ದರೆ, ಇದು ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿಯೇ. ದೇಶದ ಫ್ಯಾಸಿಸ್ಟ್ ತೆರನ ಸರ್ಕಾರವು ಈ ಬಗ್ಗೆ ಯಾವುದೇ ಕಾಳಜಿಯನ್ನು ವ್ಯಕ್ತಪಡಿಸುವುದರ ಬದಲು, ಈ ಪುರಾವೆಗಳನ್ನು ಸಾರಾಸಗಟಾಗಿ ನಿರಾಕರಿಸುತ್ತದೆ ಎಂಬುದು ಅದರ ನೈಜ ಬಣ್ಣವನ್ನು ಬಯಲು ಮಾಡುತ್ತದೆ. ಹೀಗೇ ಮುಂದುವರೆದರೆ, ಅಷ್ಟೊಂದು ಕಾಳಜಿಯಿಂದ ನಿರ್ಮಿಸಲಾದ ದೇಶದ ಅಂಕೆ–ಸಂಖ್ಯೆಗಳ ಮೂಲಸೌಕರ್ಯವನ್ನು ಅದು ಸಂಪೂರ್ಣವಾಗಿ ನಾಶ ಮಾಡುತ್ತದೆ.

70 ಗಂಟೆಗಳ ದುಡಿಮೆ: ಯೌವ್ವನಿಗರ ಬೆವರು ಬಯಸಿದೆ ಕಾರ್ಪೊರೇಟ್ ದುಡ್ಡಿನ ದಾಹ....... ಪುಟ 8 ರಿಂದ

ಈ ಉತ್ಪಾದನೆಯ ಹೆಚ್ಚಳವು ಮಾಲೀಕರಿಗೆ ಮತ್ತಷ್ಟು ಲಾಭ ತರುತ್ತದೆ. ಜನರ ಕೊಳ್ಳುವ ಶಕ್ತಿ ಹೆಚ್ಚಾದಾಗ ಮಾರುಕಟ್ಟೆಯಲ್ಲಿ ಸರಕುಗಳ ಸ್ಥಗಿತ ಮತ್ತು ಆರ್ಥಿಕ ಬಿಕ್ಕಟ್ಟಿರುವುದಿಲ್ಲ.

ಕಾರ್ಮಿಕರು ಯಂತ್ರಗಳಲ್ಲ

ಕಾರ್ಮಿಕರು ಯಂತ್ರಗಳಲ್ಲ. ಯಂತ್ರಗಳ ಕೆಲಸದ ಸಮಯವನ್ನು ಕಡಿಮೆ ಮಾಡುವುದರಿಂದ ಉತ್ಪಾದನೆ ಕಡಿಮೆಯಾಗುತ್ತದೆ. ಆದರೆ ಮನುಷ್ಯನ ಕೆಲಸದ ಸಮಯವನ್ನು ಕಡಿಮೆಗೊಳಿಸಿದರೆ, ನಿರ್ದಿಷ್ಟ ಸಮಯದೊಳಗೆ ಲಭ್ಯವಿರುವ ದೈಹಿಕ ಮತ್ತು ಮಾನಸಿಕ ಶಕ್ತಿ–ಹೆಚ್ಚಿನ ಶ್ರಮದಿಂದ ಉತ್ಪಾದಕತೆ ಹೆಚ್ಚಾಗುತ್ತದೆ. ಮತ್ತು ಅವರ ಸಾಮಾಜಿಕ ಸಂಬಂಧಗಳು ಸುಧಾರಿಸುತ್ತವೆ. ಜಪಾನ್ ದೇಶದ ವೇಗವಾಗಿ ಕುಸಿಯುತ್ತಿರುವ ಜನಸಂಖ್ಯೆಯು ಇದನ್ನು ಪ್ರತಿಬಿಂಬಿಸುತ್ತದೆ. ಹಲವಾರು ಪಾಶ್ಚಿಮಾತ್ಯ ದೇಶಗಳಲ್ಲಿ ನಡೆಸಿದ ಅಧ್ಯಯನವೂ ಇದನ್ನೇ ಒತ್ತಿಹೇಳುತ್ತದೆ. ಅದಕ್ಕಾಗಿಯೇ ಪಶ್ಚಿಮದ ರಾಷ್ಟ್ರಗಳಲ್ಲಿ ಕೆಲಸದ ವಾರವನ್ನು ಐದಕ್ಕೆ ಮತ್ತು ಕೆಲಸದ ಸಮಯವನ್ನು ಆರು ಅಥವಾ ಏಳು ಗಂಟೆಗಳಿಗೆ ಇಳಿಸಲಾಗುತ್ತದೆ.

ಹೆಚ್ಚಿನ ಕೂಲಿಗಾಗಿ ಹೋರಾಟ, ಕೆಲಸದ ಅವಧಿ ಕಡಿತದ ವಿರುದ್ಧ ಧ್ವನಿ ಮತ್ತು ಕಷ್ಟಪಟ್ಟು ಸಂಪಾದಿಸಿದ ಹಕ್ಕುಗಳ ರಕ್ಷಣೆ ಈಗ ಕಾರ್ಮಿಕರ ಕರ್ತವ್ಯವಾಗಿದೆ. ಒಗ್ಗಟ್ಟಿನ ದುಡಿಯುವ ಜನರ ಸಾಮಾನ್ಯ ಗುರಿಯು ಹೊಸ ಸಮಾಜವನ್ನು ಸೃಷ್ಟಿ ಮಾಡುತ್ತದೆ ಎಂದು ಮಾರ್ಕ್ಸ್ ಹೇಳಿದ್ದು ಹೀಗೆ 'ಕಾರ್ಮಿಕ ಕೆಲಸ ಮಾಡಲು ಬಯಸುವ ಕೈ ಮತ್ತು ಅದಕ್ಕೆ ಸಿದ್ಧವಾಗಿರುವ ಮನಸ್ಸು ಉತ್ಸಾಹದಿಂದ ತುಂಬಿದ ಹೃದಯದಿಂದ ಇರಬೇಕು.'

ಕೇಂದ್ರದ ಸಾಲ: 9 ವರ್ಷಗಳಲ್ಲಿ 100 ಲಕ್ಷ ಕೋಟಿ ಹೆಚ್ಚಳ.... ಪುಟ 11 ರಿಂದ

(ಅಮೆರಿಕನ್ ಡಾಲರ್ ಲೆಕ್ಕದಲ್ಲಿ) ಹೊಂದಿದೆ. ಅಮೆರಿಕಾ ಮತ್ತು ಚೀನಾದ ನಂತರ ಭಾರತ ವಿಶ್ವದಲ್ಲಿ ಮೂರನೇ ಸ್ಥಾನದಲ್ಲಿದೆ.

ಎಲ್ಲವೂ ನವ ಉದಾರೀಕರಣ ನೀತಿಗೆ ಅನುಗುಣವಾಗಿ

ಕೇಂದ್ರದ ಸಾಲ ಹೆಚ್ಚುತ್ತಲೇ ಇದೆ. ಅಂದರೆ, ದೇಶದ ಪ್ರಜೆಗಳ ಮೇಲಿನ ಸಾಲದ ಹೊರೆ ಹೆಚ್ಚುತ್ತಿದೆ. ಮತ್ತೊಂದೆಡೆ, ಬ್ಯಾಂಕುಗಳಲ್ಲಿರುವ ಇದೇ ಪ್ರಜೆಗಳ ಹಣವನ್ನು ದೊಡ್ಡ ಉದ್ಯಮಿಗಳಿಗೆ ಸಾಲ ಕೊಟ್ಟು ಲಕ್ಷಾಂತರ ಕೋಟಿ ಸಾಲ ಮನ್ನಾ ಮಾಡುತ್ತಾರೆ. (ಇತ್ತೀಚಿನ ಮಾಹಿತಿಯಂತೆ ಇದುವರೆಗೆ ಸುಮಾರು 14 ಲಕ್ಷ ಕೋಟಿ ಸಾಲ ಮನ್ನಾ ಮಾಡಲಾಗಿದೆ). ಸಾರ್ವಜನಿಕ ಉದ್ಯಮಗಳು ಖಾಸಗಿಯವರ ಪಾಲಾಗುತ್ತಿದೆ. ಸರಕು, ಸೇವೆ, ಹಣಕಾಸು, ವಿಮೆ ಮುಂತಾದ ಎಲ್ಲಾ ವಲಯಗಳನ್ನು ಸ್ವದೇಶಿ ಮತ್ತು ವಿದೇಶಿ ಖಾಸಗಿ ಬಂಡವಾಳಗಾರರಿಗೆ ಒಪ್ಪಿಸಲಾಗುತ್ತಿದೆ. ಸರ್ಕಾರ ತನ್ನ ಪ್ರಜೆಗಳಿಗೆ ನೀಡುವ ಸೌಲಭ್ಯಗಳಿಗೆ ಕಡಿತ ಮಾಡಿ, ಎಲ್ಲವನ್ನೂ ಮುಕ್ತ ಮಾರುಕಟ್ಟೆಗೆ ತೆರೆದಿಡಬೇಕು, ಜನರು ಎಲ್ಲವನ್ನೂ ಖರೀದಿಸಬೇಕು ಮತ್ತು ಏನನ್ನೂ ಉಚಿತವಾಗಿ ನೀಡಬಾರದು, ಉದ್ಯಮಗಳನ್ನು ನಡೆಸುವುದು ಸರ್ಕಾರದ ಕೆಲಸವಲ್ಲ, ಇವುಗಳನ್ನು ಖಾಸಗಿಯವರಿಗೆ ಬಿಟ್ಟುಬಿಡಬೇಕು, ಎಂಬ ತತ್ವದ ಅನುಷ್ಠಾನದ ಭಾಗವಾಗಿ ಇವೆಲ್ಲವೂ ನಡೆಯುತ್ತಿದೆ.

ಕಾರ್ಪೊರೇಟ್ ತೆರಿಗೆ ಹೆಚ್ಚಳ ಮಾಡುವುದರಿಂದ ಮಾತ್ರವಲ್ಲ, ದೊಡ್ಡ ಶ್ರೀಮಂತರ ಸಂಪತ್ತಿನ ಮೇಲೆ ಒಂದಷ್ಟು ತೆರಿಗೆ ವಿಧಿಸಿದರೂ ಭಾರತದ ಮೇಲಿರುವ ಸಾಲ ತೀರಿಸಬಹುದು. ಆದರೆ, ಬಂಡವಾಳಶಾಹಿಗಳ ಕೃಪಾಕಟಾಕ್ಷದಿಂದ ಅಧಿಕಾರಕ್ಕೆ ಬಂದಿರುವ, ಮತ್ತು ಬಂಡವಾಳಗಾರರ ಸೇವೆಗೆ ಸದಾ ಟೊಂಕ ಕಟ್ಟಿ ನಿಂತಿರುವ ಬಿಜೆಪಿ ಸರ್ಕಾರ ಇದನ್ನು ಮಾಡುತ್ತದೆ ಎಂದು ನಿರೀಕ್ಷೆ ಮಾಡುವುದು, ಮೋದಿ ಮತ್ತು ಭಾರತೀಯ ಜನತಾ ಪಕ್ಷದ ಸೈದ್ಧಾಂತಿಕ ನಿಲುವುಗಳು ಮತ್ತು ಅದರ ರಾಜಕೀಯದ ಬಗ್ಗೆ ನಮಗಿರುವ ಪೆದ್ದುತನವನ್ನು ತೋರಿಸುತ್ತದೆ.

ಇದು ಸಾಲದ ವಿಷಯ ಮಾತ್ರವಲ್ಲ, ದೇಶದಲ್ಲಿ ಆರ್ಥಿಕ ಬಿಕ್ಕಟ್ಟು ಸೃಷ್ಟಿಸಲು, ಸಾರ್ವಜನಿಕ ವ್ಯವಸ್ಥೆಗಳನ್ನು ನಾಶಪಡಿಸಲು ಮತ್ತು ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳನ್ನು ಕಾರ್ಪೊರೇಟ್‌ಗಳಿಗೆ ಒಪ್ಪಿಸಲು ಹೀಗೆ ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಜನತೆ ಹೆಚ್ಚೆತ್ತುಕೊಂಡು, ನವ ಉದಾರವಾದಿ ನೀತಿಗಳ ವಿರುದ್ಧ ದೊಡ್ಡ ಪ್ರಮಾಣದಲ್ಲಿ ಹೋರಾಟ ನಡೆಸಲು ಮುಂದಾಗದಿದ್ದರೆ, ದೇಶದ ಆರ್ಥಿಕತೆಗೆ ಮತ್ತು ದೇಶದ ಜನಸಾಮಾನ್ಯರ ಬದುಕಿಗೆ ಅಪಾಯ ಕಟ್ಟಿಟ್ಟ ಬುತ್ತಿ.

ಕೇರಳ ಬಾಂಬ್ ಸ್ಫೋಟದ ಬಗ್ಗೆ ಕೇಂದ್ರ ಮಂತ್ರಿಗಳ ಸತ್ಯಾಸತ್ಯ ವಿವೇಚನೆಯಿಲ್ಲದ ಟಿಪ್ಪಣಿಗಳು–ಸಿಪಿಐ(ಎಂ) ಕೇಂದ್ರ ಸಮಿತಿ ಖಂಡನೆ

ಕೇರಳದ ಎರ್ನಾಕುಲಂನ ಕನ್ವೆನ್ಷನ್ ಸೆಂಟರ್‌ನಲ್ಲಿ ಸಂಭವಿಸಿದ ಬಾಂಬ್ ಸ್ಫೋಟಗಳಲ್ಲಿ ಮೂವರು ಸತ್ತಿದ್ದಾರೆ, ಹಲವರಿಗೆ ಗಾಯಗಳಾಗಿವೆ. ಇದನ್ನು ಬಲವಾಗಿ ಖಂಡಿಸಿರುವ ಕೇಂದ್ರ ಸಮಿತಿಯು, ರಾಜ್ಯ ಪೊಲೀಸರು ಈಗಾಗಲೇ ಒಬ್ಬ ಶಂಕಿತನನ್ನು ಬಂಧಿಸಿದ್ದಾರೆ ಎಂದು ಗಮನಿಸುತ್ತಲೇ, ಕೇಂದ್ರ ಸಂಪುಟ ಸಚಿವರೊಬ್ಬರು ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳದೆ ಸಾಮಾಜಿಕ ಮಾಧ್ಯಮದಲ್ಲಿ ಕೇರಳ ಮತ್ತು ಅದರ ಜನರ ವಿರುದ್ಧ ಕೋಮು ದೂಷಣೆಗಳನ್ನು ತೂರಿದ್ದಾರೆ ಎಂದು ಖಂಡಿಸಿದೆ. ಕೇರಳದ ವಿಶಿಷ್ಟವಾದ ಮತ್ತು ಸರಿಸಾಟಿಯಿಲ್ಲದ ಸಾಮಾಜಿಕ ಮತ್ತು ಕೋಮು ಸೌಹಾರ್ದತೆಯನ್ನು ಕದಡುವ ಅಂಶಗಳ ವಿರುದ್ಧ ರಾಜ್ಯದ ಜನರು ಎಂದಿನಂತೆ ಎದ್ದು ನಿಲ್ಲಬೇಕು ಕೇರಳದ ಜನತೆಗೆ ಕೇಂದ್ರ ಸಮಿತಿಯು ಕರೆ ನೀಡಿದೆ.

ಅಕ್ಟೋಬರ್ 27 ರಿಂದ 29 ರ ವರೆಗೆ ನವದೆಹಲಿಯಲ್ಲಿ ನಡೆದ ಕೇಂದ್ರ ಸಮಿತಿಯ ಸಭೆಯ ನಂತರ ಪ್ರಕಟಿಸಿರುವ ಹೇಳಿಕೆಯಲ್ಲಿಬದು ಈ ಕರೆಯನ್ನು ನೀಡಿದೆ.

ಸಿಪಿಐ(ಎಂ) ಕೇಂದ್ರ ಸಮಿತಿಯು ಪ್ಯಾಲೆಸ್ತೀನ್ ಜನರು ತಾಯ್ನಾಡಿಗಾಗಿ ಮತ್ತು ಇಸ್ರೇಲಿ ನರಮೇಧದ ಆಕ್ರಮಣದ ವಿರುದ್ಧ ನಡೆಸುತ್ತಿರುವ ಹೋರಾಟದೊಂದಿಗೆ ಸೌಹಾರ್ದ ವ್ಯಕ್ತಪಡಿಸುವ ಕಾರ್ಯಾಚರಣೆಗಳನ್ನು ಹೆಚ್ಚಿಸಬೇಕು ಎಂದು ಕೂಡ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಇದಲ್ಲದೆ, ಎಲ್ಲೆಲ್ಲಿ ಸ್ಮಾರ್ಟ್ ವಿದ್ಯುಚ್ಛಕ್ತಿ ಮೀಟರ್ ಅಳವಡಿಕೆ ಜಾರಿಯಾಗುತ್ತಿದೆಯೋ ಅಲ್ಲಲ್ಲಿ ಅದರ ಅಳವಡಿಕೆಯನ್ನು ತಡೆಯಲು ಪ್ರತಿಭಟನಾ ಕಾರ್ಯಗಳನ್ನು ಹಮ್ಮಿಕೊಳ್ಳಬೇಕು ಎಂದೂ ಸಿಪಿಐ(ಎಂ) ಕರೆ ನೀಡಿದೆ.

ನವೆಂಬರ್ 26–28 ರ ನಡುವೆ ದೇಶಾದ್ಯಂತ ನಡೆಯುವ ಕಿಸಾನ್–ಮಜ್ದೂರ್ ಮಹಾಪಡಾವ್‌ಗೆ ಮತ್ತು ಡಿಸೆಂಬರ್ 4, 2023 ರಂದು ದಲಿತ ಸಂಘಟನೆಗಳು ಮತ್ತು ವೇದಿಕೆಗಳು ನೀಡಿರುವ ಸಂಸದ್ ಚಲೋ ಕರೆಗೆ ಬೆಂಬಲ ಮತ್ತು ಸೌಹಾರ್ದವನ್ನು ನೀಡಲು ಕೇಂದ್ರ ಸಮಿತಿಯು ನಿರ್ಧರಿಸಿದೆ.

ಕೇಂದ್ರ ಸಮಿತಿಯ ಹೇಳಿಕೆಯ ಇತರ ಅಂಶಗಳನ್ನು ಈ ಮುಂದೆ ಕೊಡಲಾಗಿದೆ:

ಪ್ಯಾಲೆಸ್ತೀನಿಯನ್ನರ ಮೇಲೆ ಇಸ್ರೇಲಿನ ನರಮೇಧದ ಆಕ್ರಮಣಗಳು

ಮಾನವೀಯ ದೃಷ್ಟಿಯ ಕದನ ವಿರಾಮ, ಎಲ್ಲಾ ನಾಗರಿಕರಿಗೆ ರಕ್ಷಣೆ ಮತ್ತು ತಕ್ಷಣದ ಮಾನವೀಯ ನೆಲೆಯಲ್ಲಿ ನೆರವಿಗೆ ಕರೆ ನೀಡುವ ವಿಶ್ವ ಸಂಸ್ಥೆಯ ನಿರ್ಣಯಕ್ಕೆ ಮತ ನೀಡಲು ಮೋದಿ ಸರ್ಕಾರ ನಿರಾಕರಿಸಿದ್ದನ್ನು ಕೇಂದ್ರ ಸಮಿತಿ ತೀವ್ರವಾಗಿ ಖಂಡಿಸಿದೆ. ಮೋದಿ ಸರ್ಕಾರದ ಗೈರುಹಾಜರಿ ಮತ್ತು ಸಾಮ್ರಾಜ್ಯಶಾಹಿ ಯುದ್ಧಕೋರರ ಪಕ್ಷ ವಹಿಸಿರುವುದು ಪ್ಯಾಲೆಸ್ತೀನ್ ಗುರಿಸಾಧನೆಗೆ ಭಾರತದ ಬೆಂಬಲದ ಇತಿಹಾಸ ಮತ್ತು ಪರಂಪರೆಗೆ ವಿರುದ್ಧವಾಗಿದೆ. ವಿಶ್ವಸಂಸ್ಥೆಯ ನಿರ್ಣಯದ ಪರವಾಗಿ ನಿಲ್ಲುವುದಾಗಿ ಹೇಳಿರುವ ಕೇಂದ್ರ ಸಮಿತಿಯು, ಇಸ್ರೇಲ್ ಎಲ್ಲಾ ಅಂತರರಾಷ್ಟ್ರೀಯ ಕಾನೂನುಗಳನ್ನು ನಿರ್ಲಜ್ಜವಾಗಿ ಉಲ್ಲಂಘಿಸಿ ನಡೆಸುತ್ತಿರುವ ನರಮೇಧಕಾರೀ ಯುದ್ಧದ ವಿರುದ್ಧ ಪ್ಯಾಲೆಸ್ತೈನಿನ ನರಳುತ್ತಿರುವ ಜನರಿಗೆ ಸಿಪಿಐ(ಎಂ)ನ ಸೌಹಾರ್ದವನ್ನು ವ್ಯಕ್ತಪಡಿಸಿತು. ಇಲ್ಲಿಯವರೆಗೆ, ಅಧಿಕೃತವಾಗಿ, 8000 ಜನರು ಕೊಲ್ಲಲ್ಪಟ್ಟಿದ್ದಾರೆ, ಅವರಲ್ಲಿ 4000 ಮಕ್ಕಳು ಮತ್ತು ಗಾಜಾದಲ್ಲಿ ಮಾತ್ರವಲ್ಲದೆ ಪಶ್ಚಿಮ ದಂಡೆಯಲ್ಲಿಯೂ ಸಹ ಹತ್ಯೆಗಳು ವರದಿಯಾಗುತ್ತಿದ್ದು, ಪ್ರತಿದಿನವೂ ಸತ್ತವರ, ಗಾಯಗೊಂಡವರ ಸಂಖ್ಯೆ ಹೆಚ್ಚಾಗುತ್ತಿದೆ. ಬೆಳೆಯುತ್ತಿರುವ ಬೃಹತ್ ಜಾಗತಿಕ ಸಾರ್ವಜನಿಕ ಪ್ರತಿಭಟನೆಗಳ ಭಾಗವಾಗಿ, ಸಿಪಿಐ(ಎಂ) ಕೂಡ ಇಸ್ರೇಲ್ ತಕ್ಷಣವೇ ಕದನ ವಿರಾಮವನ್ನು ಘೋಷಿಸಬೇಕು ಮತ್ತು 1967ರ ಮೊದಲಿನ ಪೂರ್ವದ



ಗಡಿಗಳೊಂದಿಗೆ, ರಾಜಧಾನಿಯಾಗಿ ಪೂರ್ವ ಜೆರುಸಲೆಮನ್ನು ರಾಜಧಾನಿಯಾಗಿ ಹೊಂದಿರುವ ಪ್ಯಾಲೆಸ್ತೀನಿಯನ್ ಪ್ರಭುತ್ವ ಸ್ಥಾಪನೆಯಾಗಬೇಕು ಎಂದು ಆದೇಶಿಸುವ ವಿಶ್ವಸಂಸ್ಥೆಯ ಎರಡು–ಪ್ರಭುತ್ವ ಪರಿಹಾರದ ಅನುಷ್ಠಾನವಾಗಬೇಕು ಎಂದು ಆಗ್ರಹಿಸಿದೆ.

ವಿಧಾನಸಭೆ ಚುನಾವಣೆಗಳು

ವಿಧಾನಸಭೆ ಚುನಾವಣೆ ನಡೆಯಲಿರುವ ಐದು ರಾಜ್ಯಗಳ ಪೈಕಿ ನಾಲ್ಕು ರಾಜ್ಯಗಳ ಪರಿಸ್ಥಿತಿ ಕುರಿತು ಕೇಂದ್ರ ಸಮಿತಿ ಚರ್ಚೆ ನಡೆಸಿತು. ರಾಜಸ್ಥಾನದಲ್ಲಿ ಇಬ್ಬರು ಹಾಲಿ ಸಿಪಿಐ(ಎಂ) ಶಾಸಕರನ್ನು ಒಳಗೊಂಡಂತೆ ರಾಜ್ಯ ಸಮಿತಿಯು ಪ್ರಸ್ತಾಪಿಸಿದ 17 ಅಭ್ಯರ್ಥಿಗಳ ಪಟ್ಟಿಯನ್ನು ಕೇಂದ್ರ ಸಮಿತಿ ಅನುಮೋದಿಸಿತು. ಛತ್ತೀಸ್‌ಗಢದಲ್ಲಿ ಪಕ್ಷವು ಮೂರು ಸ್ಥಾನಗಳಲ್ಲಿ ಸ್ಪರ್ಧಿಸಲಿದೆ; ಮಧ್ಯಪ್ರದೇಶದಲ್ಲಿ ಪಕ್ಷವು ನಾಲ್ಕು ಸ್ಥಾನಗಳಲ್ಲಿ ಸ್ಪರ್ಧಿಸಲಿದೆ ಮತ್ತು ತೆಲಂಗಾಣದಲ್ಲಿ ಚರ್ಚೆಗಳು ನಡೆಯುತ್ತಿವೆ.

ಮಣಿಪುರ

ಮಣಿಪುರದಲ್ಲಿ ಪರಿಸ್ಥಿತಿ ಹದಗೆಡುತ್ತಲೇ ಇದೆ. ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಮತ್ತು ನಿಯಂತ್ರಿಸುವಲ್ಲಿ ಮೋದಿ ಸರ್ಕಾರ ಮತ್ತು ಬಿಜೆಪಿಯ ಡಬಲ್ ಇಂಜಿನ್ ಸರ್ಕಾರದ ಸಂಪೂರ್ಣ ವೈಫಲ್ಯವನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. ಇಂತಹ ಧ್ರುವೀಕರಣವನ್ನು ಧಾರ್ಮಿಕ ಅಸ್ಮಿತೆಗಳೊಂದಿಗೆ ಬೆರೆಸುವ ಮೂಲಕ ರಾಜ್ಯದಲ್ಲಿ ಜನಾಂಗೀಯ ಧ್ರುವೀಕರಣಕ್ಕೆ ಕೋಮು ಬಣ್ಣ ನೀಡಲಾಗುತ್ತಿದೆ.

ಅಧಿಕೃತವಾಗಿ, ರಾಜ್ಯ ಪೊಲೀಸರು ಸಾವಿನ ಸಂಖ್ಯೆ 175 ಎಂದು ಘೋಷಿಸಿದ್ದಾರೆ (ವಾಸ್ತವದಲ್ಲಿ, ಈ ಸಂಖ್ಯೆ ಇನ್ನೂ ಹೆಚ್ಚಾಗಿದೆ.) ಮತ್ತು ಕನಿಷ್ಠ 96 ದೇಹಗಳು ದಾವೇದಾರರು ಇಲ್ಲದೆ ಉಳಿದಿವೆ, ಇದಲ್ಲದೆ ಇನ್ನೂ ಮಂದಿ 32 ಮಂದಿ ಕಾಣೆಯಾಗಿದ್ದಾರೆ ಎಂದು ಅಧಿಕೃತವಾಗಿ ಪಟ್ಟಿ ಮಾಡಲಾಗಿದೆ. ಅಧಿಕೃತ ದಾಖಲೆಗಳು 4,786 ಮನೆಗಳು ಮತ್ತು 386 ಧಾರ್ಮಿಕ ಸ್ಥಳಗಳು ಸೇರಿದಂತೆ 5,172 ಬೆಂಕಿ ಹಚ್ಚಿದ ಪ್ರಕರಣಗಳು ನಡೆದಿವೆ ಎಂದು ತೋರಿಸುತ್ತವೆ. ಒಟ್ಟು 5,668 ಬಂದೂಕುಗಳನ್ನು ಲೂಟಿ ಮಾಡಲಾಗಿದ್ದು, ಇವುಗಳಲ್ಲಿ 1,329 ಮಾತ್ರ ವಾಪಾಸು ಪಡೆಯಲಾಗಿದೆ.

ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರನ್ನು ತಕ್ಷಣವೇ ತೆಗೆದುಹಾಕಬೇಕು ಮತ್ತು ಮಣಿಪುರದಲ್ಲಿ ನಡೆಯುತ್ತಿರುವ ಧ್ವಂಸಕಾರ್ಯವನ್ನು ನಿಲ್ಲಿಸಬೇಕು.

ಜನರ ಮೇಲೆ ಆರ್ಥಿಕ ಹೊರೆಗಳು ಬೆಳೆಯುತ್ತಿವೆ

ಮೋದಿ ಪ್ರಚಾರ ಯಂತ್ರ ಸೃಷ್ಟಿಸಿರುವ ಸುಳ್ಳು ದಾವೆಗಳನ್ನು ಭೇದಿಸಿ, ಹತೋಟಿಗೆ ಬಾರದ ಬೆಲೆ ಏರಿಕೆ ಮತ್ತು ನಿರುದ್ಯೋಗದಿಂದಾಗಿ ಜನಗಳ ವರಮಾನ ಮತ್ತು ಹಣಕಾಸು ಆಸ್ತಿಗಳು 2020–21 ಮತ್ತು 2022–23 ರ ನಡುವೆ ಜಿಡಿಪಿಯ ಶೇಕಡಾ 11.5 ರಿಂದ ಶೇಕಡಾ 5.1 ಕ್ಕೆ ಕುಸಿದಿವೆ. ಇದರಿಂದ ಕುಟುಂಬಗಳ ಸಾಲದ ಹೊರೆ ತೀವ್ರ ಏರುವಂತಾಗಿದೆ.

ಈರುಳ್ಳಿ ಬೆಲೆಗಳು ಗಗನಕ್ಕೇರುತ್ತಿವೆ, ಮನರೇಗಕ್ಕೆ ಹಣನೀಡಿಕೆಯ ಅಭಾವ ಮುಂದುವರೆಯುತ್ತಿರುವುದು ಗ್ರಾಮೀಣ ಸಂಕಷ್ಟಕ್ಕೆ ಕಾರಣವಾಗುತ್ತಿದೆ ಮತ್ತು ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ಸ್ಥಾನಮಾನವು 125 ದೇಶಗಳಲ್ಲಿ 111 ರ ಐತಿಹಾಸಿಕ ಕನಿಷ್ಠ ಮಟ್ಟಕ್ಕೆ ಕುಸಿದಿದೆ.

ಒಂದು ರಾಷ್ಟ್ರ–ಒಂದು ಚುನಾವಣೆ

ಈ ಪ್ರಸ್ತಾವನೆಯನ್ನು ಜಾರಿಗೆ ತರಲು ಭಾರತದ ಮಾಜಿ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರ ರಚಿಸಿರುವ ಉನ್ನತ ಮಟ್ಟದ ಸಮಿತಿಯು ಕೆಲವು ತಿಂಗಳಲ್ಲಿ ನಡೆಯಬೇಕಾಗಿರುವ 2024 ಸಾರ್ವತ್ರಿಕ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು, ಈಗ ಜನವರಿ 18 ರೊಳಗೆ ಅಭಿಪ್ರಾಯವನ್ನು ಲಿಖಿತವಾಗಿ ಕೊಡುವಂತೆ ರಾಜಕೀಯ ಪಕ್ಷಗಳನ್ನು ಕೇಳಿದೆ. ಈ ಪ್ರಸ್ತಾವನೆ ವಿರುದ್ಧ ಕೇಂದ್ರ ಸಮಿತಿ ಸ್ಪಷ್ಟ ನಿಲುವು ತಳೆದಿದೆ. ಈ ಪ್ರಸ್ತಾವನೆಯು ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಿರುವ ಸಂಸದೀಯ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲಿನ ಅವಳಿ ದಾಳಿಯಾಗಿದೆ. ಇದಕ್ಕೆ ಸಂವಿಧಾನಕ್ಕೆ ಗಮನಾರ್ಹ ತಿದ್ದುಪಡಿಗಳಲ್ಲದೆ, ಲೋಕಸಭೆ ಚುನಾವಣೆಗಳೊಂದಿಗೆ ಏಕಕಾಲದಲ್ಲಿ ನಡೆಸುವಂತಾಗಲು ರಾಜ್ಯವಿಧಾನ ಸಭೆಗಳ ಕಾರ್ಯಾವಧಿಯನ್ನು ಮೊಟಕುಗೊಳಿಸಬೇಕಾಗುತ್ತದೆ ಅಥವಾ ವಿಸ್ತರಿಸಬೇಕಾಗುತ್ತದೆ. ಸದನದಲ್ಲಿ ಸರ್ಕಾರವು ತನ್ನ ಬಹುಮತವನ್ನು ಕಳೆದುಕೊಂಡಾಗ, ಅದರ ಮುಂದುವರಿಕೆ ಕಾನೂನುಬಾಹಿರವಾಗಿರುತ್ತದೆ. ಸರ್ಕಾರವನ್ನು ಆಯ್ಕೆ ಮಾಡುವ ಜನರ ಹಕ್ಕನ್ನು ನಿರಾಕರಿಸುವ ಕೇಂದ್ರದ ಆಡಳಿತವನ್ನು ಹೇರಿದರೆ ಅದು ಪ್ರಜಾಪ್ರಭುತ್ವ ವಿರೋಧಿಯಾಗಿದೆ.

ಜಾತಿ ಗಣತಿ

2021 ರ ಈಗಾಗಲೇ ಬಹಳ ಹಿಂದೆಯೇ ನಡೆಯಬೇಕಾಗಿದ್ದ ಸಾಮಾನ್ಯ ಜನಗಣತಿಯೊಂದಿಗೆ ಸಾಮಾಜಿಕ–ಆರ್ಥಿಕ ಸ್ಥಿತಿಯನ್ನು ಲೆಕ್ಕ ಹಾಕುವ ಜಾತಿ ಗಣತಿಯನ್ನು ನಡೆಸುವಂತೆ ಕೇಂದ್ರ ಸಮಿತಿಯು ಮೋದಿ ಸರ್ಕಾರವನ್ನು ಕೇಳಿದೆ. ಮೀಸಲಾತಿ ಸೇರಿದಂತೆ ಕಾನೂನಾತ್ಮವಾಗಿ ದೊರೆಯಬೇಕಾದವುಗಳು ಅವಕ್ಕೆ ಹೆಚ್ಚು ಅರ್ಹರಾದ ಎಲ್ಲರಿಗೂ ತಲುಪುವಂತೆ ಮಾಡಲು ಇಂತಹ ಜಾತಿ ಗಣತಿ ಅಗತ್ಯವಾಗಿದೆ.

ಬಿಹಾರವು ರಾಜ್ಯ ಮಟ್ಟದ ಜಾತಿ ಸಮೀಕ್ಷೆಯನ್ನು ನಡೆಸಿದೆ ಮತ್ತು ಕೆಲವು ಇತರ ರಾಜ್ಯಗಳು ಹಾಗೆ ಮಾಡುವ ಉದ್ದೇಶವನ್ನು ಘೋಷಿಸಿವೆ. ರಾಜ್ಯ ಮಟ್ಟದ ಸಮೀಕ್ಷೆಗಳನ್ನು ನಡೆಸುವ ನಿರ್ಧಾರವು ಚುನಾಯಿತ ರಾಜ್ಯ ಸರ್ಕಾರಗಳ ಪರಮಾಧಿಕಾರವಾಗಿದೆ. ಆದಾಗ್ಯೂ, ಇವುಗಳು ಅಖಿಲ ಭಾರತ ಜಾತಿ ಗಣತಿಗೆ ಪರ್ಯಾಯವಾಗಲು ಸಾಧ್ಯವಿಲ್ಲ, ಇದು ಅರ್ಹ ಸೌಲಭ್ಯಗಳ ನೀಡಿಕೆಯನ್ನು ನಿರ್ಧರಿಸಲು ಅತ್ಯಗತ್ಯ ಆಧಾರವಾಗಿದೆ.

ಕೇಂದ್ರ ಸಮಿತಿ ಕರೆಗಳು

- ತಾಯ್ನಾಡಿಗಾಗಿ ಮತ್ತು ಇಸ್ರೇಲಿ ನರಮೇಧದ ಆಕ್ರಮಣದ ವಿರುದ್ಧ ಪ್ಯಾಲೆಸ್ತೀನ್ ಜನರ ಹೋರಾಟದೊಂದಿಗೆ ಸೌಹಾರ್ದ ಕಾರ್ಯಾಚರಣೆಗಳನ್ನು ಹೆಚ್ಚಿಸಬೇಕು ಎಂದು ಪಕ್ಷದ ಎಲ್ಲಾ ಘಟಕಗಳಿಗೆ ಕೇಂದ್ರ ಸಮಿತಿಯು ಕರೆ ನೀಡಿದೆ.
- ವಿದ್ಯುಚ್ಛಕ್ತಿಯನ್ನು ಖಾಸಗೀಕರಣಗೊಳಿಸುವ ಪ್ರಯತ್ನದಲ್ಲಿ, ಮೋದಿ ಸರ್ಕಾರವು ವಿದ್ಯುತ್ ಗ್ರಾಹಕರಿಗೆ ಪ್ರಿಪೇಯ್ಡ್ ವ್ಯವಸ್ಥೆಗಳೊಂದಿಗೆ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಲು ಮುಂದಾಗಿದೆ. ಈ ಮೂಲಕ ಹೆಚ್ಚಿನ ದರಗಳ ಮೂಲಕ ಜನತೆಯ ಮೇಲೆ ತೀವ್ರ ಸಂಕಷ್ಟಗಳನ್ನು ಹೇರಿ, ವಿದ್ಯುತ್ ಉತ್ಪಾದನೆಯನ್ನು ಬಲಿಷ್ಠ ಲಾಭ ಗಳಿಕೆಗಾಗಿ ಖಾಸಗಿ ಸಂಸ್ಥೆಗಳಿಗೆ ಹಸ್ತಾಂತರಿಸಲು ಅದು ಮುಂದಾಗಿದೆ. ಇದರಿಂದ ಬಡವರು ಮತ್ತು ರೈತರ ಮೇಲೆ ಅಸಹನೀಯ ಹೊರೆ ಬೀಳಲಿದೆ. ಎಲ್ಲೆಲ್ಲಿ ಇಂತಹ ಮೀಟರ್ ಅಳವಡಿಕೆ ಜಾರಿಯಾಗುತ್ತಿದೆಯೋ ಅಲ್ಲಲ್ಲಿ ಅದರ ಅಳವಡಿಕೆಯನ್ನು ತಡೆಯಲು ಪ್ರತಿಭಟನಾ ಕಾರ್ಯಗಳನ್ನು ಹಮ್ಮಿಕೊಳ್ಳಬೇಕು.
- ನವೆಂಬರ್ 26–28 ರ ನಡುವೆ ದೇಶಾದ್ಯಂತ ನಡೆಯುವ ಕಿಸಾನ್–ಮಜ್ದೂರ್ ಮಹಾಪಡಾವ್‌ಗೆ ಪಕ್ಷದ ಬೆಂಬಲವನ್ನು ವ್ಯಕ್ತಪಡಿಸಲು ಕೇಂದ್ರ ಸಮಿತಿಯು ನಿರ್ಧರಿಸಿದೆ.
- ಡಿಸೆಂಬರ್ 4, 2023 ರಂದು ದಲಿತ ಸಂಘಟನೆಗಳು ಮತ್ತು ವೇದಿಕೆಗಳು ನೀಡಿದ ಸಂಸದ್ ಚಲೋ ಕರೆಗೆ ಬೆಂಬಲ ಮತ್ತು ಸೌಹಾರ್ದವನ್ನು ನೀಡಲು ಕೇಂದ್ರ ಸಮಿತಿಯು ನಿರ್ಧರಿಸಿದೆ.

“ವಿಷ ತುಂಬಿಕೊಂಡವರು ವಿಷವನ್ನೇ ಉಗುಳುತ್ತಿರುತ್ತಾರೆ”–ಪಿಣರಾಯಿ ವಿಜಯನ್



ಕೇರಳದ ಎರ್ನಾಕುಲಂನ ಕನ್ವೆನ್ಷನ್ ಸೆಂಟರ್‌ನಲ್ಲಿ ಸಂಭವಿಸಿದ ಬಾಂಬ್ ಸ್ಫೋಟಗಳ ಘಟನೆಯ ಬಗ್ಗೆ ಟಿಪ್ಪಣಿ ಮಾಡುತ್ತ ಕೇರಳದ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಪಿಣರಾಯಿ ವಿಜಯನ್ “ವಿಷ ತುಂಬಿಕೊಂಡವರು ವಿಷವನ್ನು ಉಗುಳುತ್ತಲೇ ಇರುತ್ತಾರೆ” ಎಂದು ಮಾರ್ಮಿಕವಾಗಿ ಟಿಪ್ಪಣಿ ಮಾಡಿದ್ದಾರೆ.

ದಿಲ್ಲಿಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆಯ ಸಂದರ್ಭದಲ್ಲಿ ಕೇಂದ್ರ ಸಮಿತಿಯ ಸದಸ್ಯರೆಲ್ಲರೂ ಮೋದಿ ಸರಕಾರ ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಭಾರೀ ಬಹುಮತದಿಂದ ಕದನ ವಿರಾಮಕ್ಕೆ ಕರೆಕೊಡುವ ನಿರ್ಣಯವನ್ನು ಅಂಗೀಕರಿಸಿರುವಾಗ ಅದರಿಂದ ಭಾರತ ದೂರವುಳಿದಿರುವುದನ್ನು ಪ್ರತಿಭಟಿಸಿ ಧರಣಿ ನಡೆಸಿದರು.

“ನಾನು ತುಷ್ಟೀಕರಣದ ರಾಜಕೀಯ ಮಾಡುತ್ತಿದ್ದೇನೆ, ಇಸ್ರೇಲ್ ವಿರುದ್ಧ ಪ್ರತಿಭಟಿಸುತ್ತಿದ್ದೇನೆ ಎಂದೊಬ್ಬ ಕೇಂದ್ರ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಅವರೊಬ್ಬ ಮಂತ್ರಿ, ತನಿಖಾ ಸಂಸ್ಥೆಗಳಿಗೆ ಅವರಾದರೂ ಕನಿಷ್ಟ ಗೌರವವನ್ನು ಕೊಡಬೇಕು; ತನಿಖೆ ನಡೆಯುತ್ತಿದೆ. ಇಂತಹ ಒಂದು ಗಂಭೀರ ಘಟನೆಯಲ್ಲಿ, ಇಂತಹ ಆರಂಭಿಕ ಹಂತದಲ್ಲಿ, ಅವರೆಲ್ಲ ಒಂದು ನಿರ್ದಿಷ್ಟ ಜನಸಮುದಾಯದ ಮೇಲೆ ಗುರಿಯಿಟ್ಟು ಇಂತಹ ಹೇಳಿಕೆಗಳನ್ನು ಕೊಡುತ್ತಿದ್ದಾರೆ” ಎಂದು ಬೇಸರ ವ್ಯಕ್ತಪಡಿಸುತ್ತ, ಇದು ಅವರ ಕೋಮುವಾದಿ ಅಜೆಂಡಾವನ್ನು ಆಧರಿಸಿದೆ, ಆದರೆ ಕೇರಳಕ್ಕೆ ಇಂತಹ ಅಜೆಂಡಾವೇನೂ ಇಲ್ಲ, ಅದು ಸದಾ ಕೋಮುವಾದದ ವಿರುದ್ಧ ನಿಂತಿದೆ ಎಂದು ವಿಜಯನ್ ಹೇಳಿದರು. “ರಾಜೀವ ಚಂದ್ರಶೇಖರರ ವಿಕೃತಗೊಂಡ ಮನಸ್ಸು ಅದನ್ನು ನೋಡಲಾರದಷ್ಟೇ, ಆದರೆ ಕೇರಳದ ಅಸ್ಮಿತೆಯನ್ನು ಧ್ವಂಸ ಮಾಡಲು ಸಾಧ್ಯವಿಲ್ಲ” ಎಂದಿರುವ ಅವರು ಮುಂದುವರೆದು “ಯಾವ ಆಧಾರದಲ್ಲಿ ಈ ಮಂದಿ ಒಂದು ಸಮುದಾಯದ ಮೇಲೆ ಒಂದು ವಿಶೇಷ ಕೋನದಿಂದ ಗುರಿಯಿಡುತ್ತಾರೆ? ಆತನಿಗೇನಾಗಿದೆ ಎಂದೇನೂ ನಾನು ಕೇಳುವುದಿಲ್ಲ. ಅವರು ಬಿಜೆಪಿಯ ರಾಜಕೀಯದ ಬಗ್ಗೆ ಚೆನ್ನಾಗಿ ತಿಳಿದೇ ರಾಜಕೀಯ ಪ್ರವೇಶಿಸಿದವರು. ಅವರೊಂದಿಗೆ ನಾನು ಮಾತಾಡಿ, ಈ ವಿಷಯವನ್ನು ವಿವರವಾಗಿ ತಿಳಿಸಿದ್ದೆ. ಅವರ ಮತ್ತು ಅವರ ಸಹಯೋಗಿಗಳ ಟಿಪ್ಪಣಿಗಳು ಒಂದು ವಿಭಾಗದ ಮೇಲೆ ಗುರಿಯಿಟ್ಟಂತವುಗಳು” ಎಂದು ಪಿಣರಾಯಿ ವಿಜಯನ್ ಹೇಳಿದ್ದಾರೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE November 6-12, 2023 Price: Rs. 10/- Date of Publication: 3 November 2023 RNI No. KARKAN /2006/17926 Posted on 04-11-2023
Posted at BG PSO, BG - 560026 **Posted at Periodical Rate -** Rs. 2





ಮುಸ್ಲಿಮರು, ಹುಲಿಕುಣಿತ, ಕಸಾಯಿಗಲ್ಲಿ: ಎತ್ತಣಿಂದೆತ್ತಣ ಸಂಬಂಧವಯ್ಯಾ!!

ಬಾಬು ಪಿಲಾರ್

ದಸರಾ ಮಾರ್ನೆಮಿ ಸಮಯದಲ್ಲಿ ನಮ್ಮೂರಿಗೆ ಹುಲಿ ವೇಷ ಬರಲೇ ಇಲ್ಲ. ನಾವು ಚಿಕ್ಕವರಿರುವಾಗ ಒಂದು ಡಬ್ಬ, ಎರಡು ತುಂಡು ಕೋಲು ಕೈಗೆ ಸಿಕ್ಕರೆ "ಹುಲಿತಾಸೆ" ರೆಡಿಯಾಗುತ್ತಿತ್ತು. ಮಕ್ಕಳು ಸೇರಿ ಆಡುತ್ತಿದ್ದುದು ಹುಲಿವೇಷದ ಆಟ. ಅದೂ ದಸರಾ ಸಮಯದಲ್ಲಿ.

ಈ ಬಾರಿ ಶಾಲಾ ಮಕ್ಕಳಿಗೆ ದಸರಾ ರಜೆ ಸಿಕ್ಕಾಗ ನಮ್ಮ ಮನೆ ಎದುರಿನ ಹಿತ್ತಿಲಲ್ಲಿ ಡಬ್ಬದ ತಾಸೆ ಸದ್ದು ಆಗಾಗ ಕೇಳಿಸುತ್ತಿತ್ತು. ಡನ್ ಡಂಕ್ ಡರಡಂಕ್ ಡನ್ ಡಂಕ್ ಡರಡಂಕ್ .... ಹೀಗೆ. ಮೂರು ನಾಲ್ಕನೆ ತರಗತಿ ಓದುತ್ತಿರುವ ಮೂರ್ನಾಲ್ಕು ಮಕ್ಕಳು ಸೇರಿ ಹುಲಿ ಕುಣಿತದ ಅಭ್ಯಾಸದಲ್ಲಿ ತೊಡಗಿದ್ದುದು ಆ ಮೇಲೆ ಗೊತ್ತಾಯ್ತು. ದಸರಾ ಸಮಯದಲ್ಲಿ ಬೇರೆ ಬೇರೆ ವೇಷಧಾರಿಗಳು ಊರೂರು ಸುತ್ತಿ ಮನೆಮನೆಗಳ ಮುಂದೆ ಕುಣಿದು ಮನರಂಜನೆ ನೀಡುವರು. ಕೆಲವು ವೇಷಗಳು ತಂಡವಾಗಿಯೂ ಬರುತಿತ್ತು. ಒಂಟಿ ವೇಷಗಳೂ ಬರುತ್ತಿದ್ದವು. ಹರಕೆ ಹೊತ್ತವರು ಸಾಮಾನ್ಯವಾಗಿ ಒಂಟಿ ವೇಷ ಹಾಕಿ ಮನೆ ಮನೆ ಸುತ್ತುತ್ತಿದ್ದರು. ಒಂಟಿಯಾಗಿ ಸುತ್ತುವವರು ದೇವರು, ರಕ್ಕಸರ ವೇಷ, ಜಕ್ಕಮದಿನ, ಗೊಂಬೆ ಆಡಿಸುವ ಮುದುಕನ ವೇಷ, ಬಡ್ಡಿ ಪಠಾಣ್ ವೇಷ, ಪೇಪರ್ ಮಾರಾಟ, ಮಂತ್ರವಾದಿ ವೇಷ, ಮದ್ದು ಮಾರಾಟದ ಪಂಡಿತರ ವೇಷ ಹೀಗೆ.

ಇನ್ನು ಒಂದಕ್ಕಿಂತ ಹೆಚ್ಚು ಜನರಿದ್ದ ಕರಡಿ ಬೇಟೆ ಕುಣಿತ, ಡೋಲು ಕುಣಿತ, ಕಾಡುಜನರ ಲೇಲೇಲೇ ಹಾಕುವ ವಯ್ಯರೆವಯ್ಯ ಕುಣಿತ, ಶಾರ್ದೂಲ ಬೇಟೆ ಕುಣಿತ ಮತ್ತು ಹುಲಿ ಕುಣಿತ. ಹೀಗೆ ಬಂದ ವೇಷಗಳಿಗೆ ಮನೆಮಂದಿ ಹಣಕೊಟ್ಟು ಕಳುಹಿಸುತ್ತಾರೆ. ಒಂಟಿ ವೇಷಕ್ಕೆ ಚಿಕ್ಕಾಸು ಕೊಟ್ಟರೂ ಸಮಾದಾನ. ಆದರೆ ಗುಂಪಾಗಿ ಬರುವ ವೇಷಗಳಿಗೆ ಕಡಿಮೆ ಹಣ ಕೊಟ್ಟರೆ ಅವರ ಖರ್ಚುವೆಚ್ಚ ನಿಭಾಯಿಸುವುದು ಕಷ್ಟ.

ಮಂಗಳೂರಲ್ಲಿ ಮಾರ್ನೆಮಿ ಅಥವಾ ದಸರಾ ಎಂದರೆ ವೇಷಗಳೇ ಜನಮನದಲ್ಲಿ ಬಂದು ನಿಲ್ಲುವುದು. ಇತ್ತೀಚೆಗಂತೂ ಮೇಲೆ ಹೇಳಿದ ಒಂದಷ್ಟು ವೇಷಗಳು ಕಣ್ಮರೆಯಾಗಿವೆ. ಅಪರೂಪಕ್ಕೆ ಅಲ್ಲಲ್ಲಿ ಕರಡಿ, ಶಾರ್ದೂಲಕುಣಿತ ವೇಷಗಳು ಮನೆಮನೆಗೆ ಬರುವುದಿದೆ.

ಹುಲಿ ವೇಷ

ಇನ್ನು ಇಲ್ಲಿನ ಹುಲಿ ವೇಷದ ಬಗ್ಗೆ ಹೇಳಲೇಬೇಕು. ಸಾಮಾನ್ಯವಾಗಿ ಯುವಕ ಸಂಘ ವ್ಯಾಯಾಮಶಾಲೆ, ಮಂಡಲಗಳ ಉತ್ಸಾಹಿ ತರುಣರು ಸಣ್ಣ ತಂಡಗಳಾಗಿ ಹುಲಿ ವೇಷ ಹಾಕುತ್ತಿದ್ದರು. ಮಹಾನವಮಿಯ ಒಂಭತ್ತು ದಿವಸಗಳ ಪೈಕಿ ಕೊನೆಯ ನಾಲ್ಕೈದು ದಿವಸ ಹುಲಿ ವೇಷಗಳದ್ದೆ ಭರಾಟೆ. ಕುತೂಹಲ ಅದುಮಿಡಲಾಗದ ಪುಟ್ಟ ಮಕ್ಕಳು ಅವುಗಳ ಹಿಂದಿನಿಂದ ಗುಂಪಾಗಿ ಮನೆಮನೆಗೆ ದಾಂಗುಡಿ ಇಡುವುದು ನೋಡೋಕೆ ಚಂದ. ಅಂದು ಹುಲಿವೇಷ ತಂಡಗಳಿಗೆ ಹಣದ ದಾಹವಿರಲಿಲ್ಲ. ಇತರೆಲ್ಲ ವೇಷಗಳಿಗಿಂತ ಇದಕ್ಕೆ ಹೆಚ್ಚು ಮಹತ್ವವಿತ್ತು. ನಿರ್ವಹಣೆಗೆ ಹೆಚ್ಚು ಖರ್ಚು ವೆಚ್ಚ ತಗಲುತಿತ್ತು. ಖರ್ಚಿನ ಹಣ ಸಂಗ್ರಹಗೊಂಡರೆ ಅಷ್ಟೇ ಸಾಕಾಗ್ತಿತ್ತು. ಹುಲಿವೇಷ ಹಾಕುವುದೇ ಅವರಿಗೊಂದು ಖುಷಿ. ಅವರ ಸ್ಫೂರ್ತಿಯೇ ವಿಶಿಷ್ಟವಾದುದು.

ಕಾಲಕ್ರಮೇಣ, ಖರ್ಚು ಹೆಚ್ಚಿದಂತೆಲ್ಲ ತಂಡವನ್ನು ನಿಭಾಯಿಸುವುದೇ ಒಂದು ಸವಾಲಾಗತೊಡಗಿತು. ಪರಿಣಾಮ ಮೂರ್ನಾಲ್ಕು ದಿನ ವೇಷ ಹಾಕಿ ತಿರುಗಾಡುತ್ತಿದ್ದವರು, ಒಂದೆರಡು ದಿವಸಗಳಿಗೆ ಸೀಮಿತಗೊಳಿಸತೊಡಗಿದರು ಮತ್ತು ಆಯ್ದ ಮನೆಗಳಿಗೆ ಮಾತ್ರ ಹೋಗುವ ಪರಿಪಾಠ ಬೆಳೆಸಿದರು. ಹುಲಿವೇಷಕ್ಕೆ ಹೆಚ್ಚು ಗೌರವ ಲಭಿಸಿದ್ದಾಗ್ಯೂ ಮುಂದುವರಿಸಲು ಸಾಧ್ಯವಾಗದೆ ಕ್ರಮೇಣ ತಂಡಗಳು ಮುಗ್ಗರಿಸಿತು.

ತಂಡಗಳಿಂದ ಹುಲಿ ವೇಷ

ಇದೇ ಕಾಲಘಟ್ಟದಲ್ಲಿ ಹುಲಿವೇಷದಲ್ಲಿ ಹೊಸತೊಂದು ಶಖೆ ಆರಂಭವಾಯಿತೆನ್ನಬಹುದು. ಮಂಗಳೂರಿನ ಕೆಲವೊಂದು ಊರಿನ ಹೆಸರಲ್ಲಿ ಅಥವಾ ವ್ಯಕ್ತಿಗಳ ಹೆಸರಲ್ಲಿದ್ದ ಬಲಾಢ್ಯ ಯುವಕರ ತಂಡಗಳು ಹುಲಿ ವೇಷ ಹಾಕುವ ಉಸಾಬರಿಗಿಳಿಯಿತು. ತಂಡಗಳೊಳಗೆ ಮೇಲಾಟದ ಪೈಪೋಟಿ ಆರಂಭಗೊಂಡಿತು. ಈ ಪೈಪೋಟಿಯಿಂದಾಗಿ ಒಂದೊಂದು ತಂಡದಲ್ಲೂ ಇಪ್ಪತ್ತಕ್ಕಿಂತ ಹೆಚ್ಚು ಐವತ್ತು ಅರ್ವತ್ತರ ಸಂಖ್ಯೆಯಲ್ಲಿ ಹುಲಿ ವೇಷಧಾರಿ ಸಂಖ್ಯೆಯೂ ಏರತೊಡಗಿತು.

ನಾನಾ ಬಣ್ಣದ, ನಾನಾ ರೂಪದ ಹುಲಿವೇಷಗಳು ಸಿದ್ದಗೊಂಡಿತು. ಮೊದಲಿಗೆ ಹುಲಿಯ ಬಣ್ಣ ಅಂದ್ರೆ ಹಳದಿ ಮೈಬಣ್ಣದಲ್ಲಿ ಕಪ್ಪು ಪಟ್ಟೆ(ಗೆರೆ)ಗಳುಳ್ಳ ಹುಲಿ ವೇಷಗಳೇ ಅರ್ಥಪೂರ್ಣವಾಗಿತ್ತು. ಈ ಪಟ್ಟೆ ಹುಲಿಯೊಂದಿಗೆ ಚಿಟ್ಟೆ ಹುಲಿಯೂ ಕಾಣಿಸುತ್ತಿತ್ತು. ಬಣ್ಣದಲ್ಲೂ ಕ್ರಾಂತಿಯಾಗಿ ಆಕರ್ಷಕವಾದ ಫ್ಲೋರೊಸೆಂಟ್ ಬಣ್ಣಗಳು ಮಾರುಕಟ್ಟೆ ಪ್ರವೇಶಿಸಿದ್ದವು. ಇದರಲ್ಲಿ ಕಣ್ಣಿಗೆ ರಾಚುವಂತಹ ಹಳದಿ, ಹಸಿರು, ಕೇಸರಿ, ಗುಲಾಬಿ ಬಣ್ಣಗಳು ಹುಲಿವೇಷಗಳಿಗೂ ಪ್ರಯೋಗವಾಯಿತು. ಹುಲಿವೇಷಕ್ಕೆ ಈ ಬಣ್ಣ ತಕ್ಕುದಲ್ಲವೆಂದು ಕೆಲವರ ಅಬಿಮತ.

ಒಂದು ಕಾಲದಲ್ಲಿ ಕುಖ್ಯಾತಿ ಪಡೆದಂತಹ ಊರು ರೌಡಿಗಲ್ಲಿ ಹೆಸರಿನಲ್ಲಿ ಅಥವಾ ವ್ಯಕ್ತಿಗಳ ಹೆಸರಿನಲ್ಲಿ ಹುಲಿವೇಷ ತಂಡಗಳು ಪ್ರಚಾರಗಿಟ್ಟಿಸಿ ಬೀದಿಗಿಳಿಯಿತು. ದುಬಾರಿ ಖರ್ಚುಗಳನ್ನು ನಿಭಾಯಿಸಲು ಅವರ ಹಳೇ ಕ್ರಮಗಳನ್ನೆ ಬಳಸಿಕೊಂಡರು. ಇವರ ಕುಣಿತಗಳು ಕೆಲವೇ ನಿರ್ದಿಷ್ಟ ಮತ್ತು ಕನಿಷ್ಟ ಮನೆ ಮತ್ತು ಅಂಗಡಿ ಹೋಟೇಲು ಬಾರುಗಳಿಗೆ ಸೀಮಿತಗೊಳ್ಳತೊಡಗಿತು. ಬರಲಿರುವ ತಂಡಗಳು ಮುನ್ಸೂಚನೆ ನೀಡಿಯೇ ಬರುತಿತ್ತು. ನಾಳೆ ನಿಮ್ಮಲ್ಲಿಗೆ ನಮ್ಮ ಹುಲಿವೇಷ ತಂಡ ಬಂದು ಕುಣಿಯಲಿದೆ. 50,000 ರೂ. ಅಥವಾ ಇಂತಿಷ್ಟು ಹಣ ಇಡಬೇಕೆಂದು ತಾಕೀತು ಮಾಡಿಯೇ ಬರುವುದು ವಾಡಿಕೆಯಾಯ್ತು. ಈ ಮಾತಿಗೆ ಮರು ಮಾತಾಡುವ ಅವಕಾಶ ಕಡಿಮೆ. ಈ ರೀತಿ ದಂಧಾ ರೂಪಕ್ಕಿಳಿಯಿತು.

ಹುಲಿವೇಷಧಾರಿಗಳ ಸಂಖ್ಯೆ ಕಡಿಮೆಯಿದ್ದರೆ ಆ ತಂಡಗಳಿಗೆ ಮಾನ್ಯತೆ ಕಡಿಮೆ. ಮಂಗಳೂರ ಆಸುಪಾಸು ಊರುಗಳಲ್ಲಿ ಹತ್ತಿಪ್ಪತ್ತರಷ್ಟು ದೊಡ್ಡ ತಂಡಗಳಿವೆ. ಕೆಲವೊಂದು ತಂಡಗಳು ವಸೂಲಿಬಾಜಿಗಿಳಿಯದೆ ಕುಣಿತ ಸಾಮರ್ಥ್ಯದಿಂದ ಹಣ ಗಳಿಸುತ್ತಿದೆ.

ತಾಸೆ ವಾದನವೇ ಪ್ರಧಾನ

ಹುಲಿ ವೇಷ ಕುಣಿತಕ್ಕೆ ತಾಸೆ ವಾದನವೇ ಪ್ರಧಾನ. ತಾಸೆ ಪೆಟ್ಟು ಕಿವಿಗಪ್ಪಳಿಸುವಾಗ ಯಾರಿಗೇ ಆದರೂ ಅದರೊಂದಿಗೆ ಹೆಜ್ಜೆ ಹಾಕಲು ಮನಸ್ಸಾಗುತ್ತದೆ. ತಾಸೆಯ ಬಡಿತಕ್ಕೆ ತಕ್ಕಂತೆ ಹೆಜ್ಜೆ ಹಾಕಲು ಕೌಶಲ್ಯಬೇಕು. ಇಂದು ಕುಣಿತಗಳಲ್ಲೂ ಬದಲಾವಣೆಗಳಾಗಿವೆ. ಕೆಲವೊಂದು ಕುಣಿತಗಳು ಜಿಮ್ನ್ಯಾಸ್ಟಿಕ್ ಗೆ ಸಮಾನಾಗಿವೆ. ಉಲ್ಟಾಜಿಗಿತ, ಪಲ್ಟಿ ಹೊಡೆಯುವುದು ಇವೆಲ್ಲವನ್ನು ಕಾಣುವಾಗ ಮೈಜುಮ್ಮೆನ್ನುತ್ತದೆ. (ಈ ಬಾರಿ ಒಂದು ತಂಡದಲ್ಲಿ ಹುಲಿವೇಷ ಹಾಕಿದ್ದ ಯುವಕನೊಬ್ಬ ಉಲ್ಟಾ ಜಿಗಿತದಲ್ಲಿ ಆಯತಪ್ಪಿ ಬಿದ್ದು ತಲೆಗೆ ತೀವ್ರತರದ ಏಟಾಗಿ ಆಸ್ಪತ್ರೆ ಸೇರಿದ್ದು ವಿಷಾದನೀಯ.)

ಕುಣಿಯುತ್ತಲೇ ಅಕ್ಕಿಮುಡಿಯನ್ನು ಕಚ್ಚಿ ತಲೆಮೇಲಿಂದೆತ್ತಿ ಬಿಸಾಡುವುದು ಬಹು ಕಾಲದಿಂದಲೂ ಆಕರ್ಷಣೀಯವಾದ ಆಟ. ಕಾಂಕ್ರೀಟು ನೆಲದಲ್ಲಿ ಚದುರಿ ಹರಡಿದ ನಿಂಬೆ ಹಣ್ಣುಗಳನ್ನು ತಲೆಯಿಂದ ಒಡೆಯುವುದು, ಕೈಮುಟ್ಟದೆ ಹಲ್ಲಿನಿಂದ ಕಚ್ಚಿ ಸೋಡಾಬಾಟ್ಲಿಯ ಮುಚ್ಚಳ ತೆಗೆಯುವುದು, ಕಸದಂತೆ ಮುದ್ದೆಮಾಡಿ ಹರಡಿದ ನೋಟುಗಳನ್ನು ಕೈನಡಿಗೆಯಿಂದ ಸರಿದು ಬಾಯಲ್ಲೆತ್ತುವುದು ಮತ್ತು ಕಣ್ಣರೆಪ್ಪೆಯ ಮೂಲಕ ತೆಗೆಯುವುದು, ಪಾವುಲ ಕುಣಿತ, ಝುಂಡ ಕುಣಿತ, ಹೀಗೆ ವಿಧವಿಧವಾಗಿದ್ದರೂ ಡಿಸ್ಕೊ ಕುಣಿತ ಮಾತ್ರ ಇದರೊಳಗೆ ಪ್ರವೇಶಮಾಡಿಲ್ಲ.

ಹುಲಿವೇಷ ಹಾಕುವ ಹೆಣ್ಮಕ್ಕಳು

ಇಂದು ಹುಲಿಕುಣಿತವು ಗಂಡು ಹುಡುಗರಿಗೆ ಮಾತ್ರ ಸೀಮಿತವಾಗಿಲ್ಲ. ಉಡುಪಿ ಭಾಗದಲ್ಲಿ ಹೆಣ್ಮಕ್ಕಳು ಹುಲಿವೇಷ ಹಾಕಿ ಕುಣಿಯುವ ತಂಡಗಳೂ ಇವೆ. ಮಂಗಳೂರಿನಲ್ಲಿ ಹೆಣ್ಮಕ್ಕಳು ತಂಡಕ್ಕೆ ಇಳಿಯದಿದ್ದರೂ ಕುಣಿತದಲ್ಲಿ ಆಸಕ್ತಿವುಳ್ಳವರು ತಾಸೆಯ ಬಡಿತಕ್ಕೆ ತಕ್ಕಂತೆ ಇತರೆ ತಂಡದವರ ಕುಣಿತದೊಂದಿಗೆ ಹೆಜ್ಜೆಹಾಕುವುದು ಕಾಣಬಹುದಾಗಿದೆ. ಇದುವರೆಗೂ ಅಲ್ಪ ಸ್ವಲ್ಪ ಬದಲಾವಣೆಗೊಂಡರೂ ಹುಲಿಕುಣಿತವು ತನ್ನ ವೈಶಿಷ್ಟತೆಯನ್ನು ಉಳಿಸಿಕೊಂಡಿದೆಯೆನ್ನಬಹುದು.

ಮುಸಲ್ಮಾನ ಬಂಧುಗಳ ಕಲೆ

ಈ ಹುಲಿ ಕುಣಿತ ಮೂಲತಃ ಉತ್ತರ ಕರ್ನಾಟಕದ ಮುಸಲ್ಮಾನ ಸಮುದಾಯದವರ ಮೊಹರಂ ಆಚರಣೆ ಸಂದರ್ಭಗಳಲ್ಲಿ ಕಂಡು ಬರುತ್ತಿದ್ದುದು. ಮಂಗಳೂರಿನಲ್ಲಿ ಹುಲಿವೇಷಕ್ಕೆ ಹೆಸರಾಗಿದ್ದ ಬಜಿಲಕೇರಿ ಕಮಲಾಕ್ಷರವರು ಇತ್ತೀಚೆಗೆ ಟಿವಿ ಸಂದರ್ಶನವೊಂದರಲ್ಲಿ ಮಾತಾಡುತ್ತಾ, ಹುಲಿವೇಷವು ಮುಸಲ್ಮಾನ ಬಂಧುಗಳ ಕಲೆ ಎಂಬುದನ್ನು ಪ್ರಸ್ತಾಪಿಸಿದ್ದರು. ಅದಕ್ಕೂ ಮೊದಲು ಈ ಹುಲಿ ಕುಣಿತದ ಬಗ್ಗೆ ಬರಹಗಾರ ಇಸ್ಮತ್ ಫಜೀರ್ ರವರು ಪ್ರಸ್ತಾವಣೆ ಮಾಡಿದ್ದರು.

101ವರ್ಷಗಳ ಹಿಂದೆ ಮಂಗಳೂರಿನ ರಥಬೀದಿಯ ಶ್ರೀ ವೆಂಕಟರಮಣ ದೇವಸ್ಥಾನದ ಉತ್ಸವ ಆರಂಭ ಗೊಂಡಿತ್ತು. 95 ವರ್ಷಗಳ ಹಿಂದೆ ತನ್ನ ತಂದೆಯವರ ತಂಡವು ಅಲ್ಲಿ ಹುಲಿಕುಣಿತ ಆರಂಭಿಸಿತು. ಹಲವು ವರ್ಷಗಳಿಂದ ತನ್ನ ತಂಡವು ಅಲ್ಲಿನ ಉತ್ಸವಕ್ಕೆ ಹುಲಿಕುಣಿತ ಪ್ರದರ್ಶನದಲ್ಲಿ ಭಾಗಿಯಾಗುತ್ತಿತ್ತು ಎಂಬುದಾಗಿ ಕಮಲಾಕ್ಷರವರು ಹೇಳಿದ್ದಾರೆ. ಮಂಗಳೂರಿನ ಬೀಬಿಅಲಾಭಿ ರಸ್ತೆ (ಕಸಾಯಿಖಾನೆ ಇದ್ದ ಸ್ಥಳವಾದ್ದರಿಂದ ಕಸಾಯಿಗಲ್ಲಿ ಎಂಬ ಅಡ್ಡನಾಮದ ರಸ್ತೆ) ಪಕ್ಕದ ದರ್ಗಾದೆದುರು ಮೊಹರಂ ಆಚರಣೆಗೆ ಮುಸಲ್ಮಾನರು ಹುಲಿ ಕುಣಿತ ಆಡುತ್ತಿದ್ದರು. ಈ ಹುಲಿ ಕುಣಿತವನ್ನು ನಾವು ಅವರಿಂದ ಕಲಿತುಕೊಂಡಿದ್ದು ಎಂಬುದಾಗಿಯೂ ಹೇಳಿದ್ದಾರೆ.

ಒಂದು ಕಲೆ ಎಂಬುದು ಜಾತಿ ಧರ್ಮದ ಎಲ್ಲೆಯನ್ನು ಮೀರಿ, ಹೇಗೆ ಜನರನ್ನು ಸಮೀಪಿಸುವುದಕ್ಕೆ ದಾರಿ ಮಾಡಿಕೊಡುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ. ಯಾವುದೂ ಕಾರಣಕ್ಕೆ ಯಾರದ್ದೊ ಪ್ರೇರಣೆಯಿಂದ ಧರ್ಮದ ನಡುವೆ ವೈಷಮ್ಯ ಹುಟ್ಟಿಸಿಕೊಂಡಿದ್ದರೂ, ಕರಾವಳಿ ಜನರ ಮನದೊಳಗೆ ಅಡಗಿರುವ ಭಾವೈಕ್ಯತೆ ಎಂಬುದು ತಮಗರಿವಿಲ್ಲದೇನೇ ಕೆಲವೊಮ್ಮೆ ಹೊರಬರುವುದು. ಮುಸಲ್ಮಾನರನ್ನು ದ್ವೇಷಿಸುತ್ತಿದ್ದ ವ್ಯಕ್ತಿಯೊಬ್ಬನ ಬಾಯಿಂದ ಕೇಳಿಸಿಕೊಂಡ ಮಾತು ಇದಕ್ಕೊಂದು ಉದಾಹರಣೆ. ಆ ಕಾರಣಕ್ಕೆ ಇವರ ಮಾತು ಹೆಚ್ಚು ಮಹತ್ವದ್ದಾಗಿದೆ.

ಧರ್ಮ ದ್ವೇಷ ಬಿತ್ತುವ ಪದಗಳನ್ನು

ನಮ್ಮ ತುಳು ನಾಡಿನ ಸಾಂಸ್ಕೃತಿಕ ಕಲೆಗಳಲ್ಲಿ ಒಂದಾಗಿದ್ದ ಹುಲಿ ವೇಷಕ್ಕೆ ಹಚ್ಚುವ ಬಣ್ಣದಲ್ಲಿ ಆಕರ್ಷಕ ಚಿತ್ರಗಳನ್ನು ಬರೆಯುವರು. ಈ ಬಾರಿ ಮಂಗಳೂರು ಹೊರ ವಲಯದ ಒಂದು ಹುಲಿವೇಷ ತಂಡಕ್ಕೆ ಧರ್ಮ ದ್ವೇಷ ಬಿತ್ತುವ ಪದಗಳನ್ನು ಬರೆದಿದ್ದುದು ವಿಷಾದನೀಯವಾಗಿದೆ. ಹುಲಿ ವೇಷದ ಮೈಯಲ್ಲಿ 'ನಮ್ಮ ನಿಲುವು ಇಸ್ರೇಲಿ ಪರ'ಎಂಬ ಬರಹವನ್ನು ಗಮನಿಸಿದ ಊರಿನ ಯುವಕರು ಒಟ್ಟಾಗಿ ಪ್ರತಿಭಟಿಸಿ ಅದನ್ನು ತೆಗೆಸಿರುವುದು ಗಮನಕ್ಕೆ ಬಂದಿದೆ. ದಸರಾ ಹಬ್ಬದ ವೇಷಗಳು ಸೌಹಾರ್ದದತ್ತವಾಗಿ ಹಿಂದೂ ಮುಸ್ಲಿಂ ಕ್ರೈಸ್ತರೆಂಬ ಬೇಧವಿಲ್ಲದೆ, ಎಲ್ಲರ ಮನೆ ಬಾಗಿಲಿಗೆ ಹೋಗಿ ಕುಣಿಯುವ ಪರಿಪಾಠವು ಬಹು ಕಾಲದಿಂದಲೂ ನಡೆದು ಬಂದಿತ್ತು. ವೇಷದಲ್ಲಿ ಧರ್ಮ ಕಳಂಕ ತರುವುದು ಊರಿನ ಯುವ ಮನಸ್ಸಿಗೆ ಇಷ್ಟವಾಗಿಲ್ಲ. ಸಾಮರಸ್ಯದ ಪರಂಪರೆಯಾಗಿ ಮನೆಬಾಗಿಲಿಗೆ ಬರುತ್ತಿದ್ದ ಹುಲಿವೇಷತಂಡಗಳು ಅದೇ ರೀತಿಯಲ್ಲೆ ಮುಂದುವರಿಯಬೇಕೆಂಬ ಅಭಿಲಾಷೆಯಿಂದ, ಅನಗತ್ಯ ಬರಹ ಹೊಂದಿದ್ದ ಇಬ್ಬರು ವೇಷಧಾರಿಗಳನ್ನು ತಂಡವೇ ಪ್ರತ್ಯೇಕಿಸಿತು.

ಕರಾವಳಿ ಜನರ ಜನಪದೀಯ ಆಚರಣೆಗಳು, ವ್ಯಾಪಾರ ವ್ಯವಹಾರಗಳು ಮತ್ತು ಜನರಾಡುವ ಭಾಷೆಗಳು ಎಲ್ಲವೂ ಅನ್ಯೋನ್ಯತೆಯ ಬದುಕಿಗೆ ಕಳಶಪ್ರಾಯವಾಗಿತ್ತು. ಇಂತಹ ಧರ್ಮಸಮನ್ವಯತೆಗೆ ಹೆಸರಾಗಿದ್ದ ಈ ಕರಾವಳಿ ಜಿಲ್ಲೆಯ ಜನ ನಿಷ್ಕಲ್ಮಶ ಮನಸ್ಸಿನಿಂದ ಬದುಕಲು ಅಡ್ಡಿಪಡಿಸುವ ವ್ಯಕ್ತಿ ಮತ್ತು ಸಂಘಟನೆಗಳಿಂದ ಎಲ್ಲರೂ ದೂರವಾದಷ್ಟು ನೆಮ್ಮದಿ ಸ್ಥಿರಗೊಳ್ಳುವುದು.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**